ಕರ್ಣಾಟಕ ಕಾವ್ಯಮಂಜರಿ.

ಕವಿಕಾಮದೇವ ವಿರಚಿತಂ

— ಶೃಂಗಾರರತ್ನಾಕರಂ —

[೯]

ಎಸ್. ಜೆ. ನರಸಿಂಹಾಚಾರ್,

ಮ. ಆ. ರಾಮಾನುಜೈಯ್ಯಂಗಾರ್,

ಇವರಿಂದ ಪರಿಷ್ಕರಿಸಲ್ಪಟ್ಟ

ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ

ಮೈಸೂರು,

ಸದ್ವಿದ್ಯಾಮಂದಿರ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿದೆ.

೧೮೯೪.

[ಕ್ರಯ ೧೦ ಆಣೆ.

ಕರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾ. ಪ್ರೊಪ್ರೈಟರ್ ಮ. ಕುಮಾರಸ್ವಾಮಿ ತಿರುಮಲಾಚಾರ್, ಆ. ಆನಂದಾಳ್ವಾರ್ ಇವರಲ್ಲಿ ದೊರೆಯುತ್ತದೆ.

ಶೃಂಗಾರ ರತ್ನಾಕರದ ವಿಷಯಾನುಕ್ರಮಣಿಕೆ.

—ಪ್ರಥಮ ಪರಿಚ್ಛೇದ—

—ದ್ವಿತೀಯ ಪರಿಚ್ಛೇದ—

—ಚತುರ್ಥ ಪರಿಚ್ಛೇದ—

ಪೀಠಿಕೆ.

ಈ ಗ್ರಂಥಕರ್ತನಿಗೆ ಕಾಮದೇವನೆಂದು ಹೆಸರು. "ಭವಪಾದಾಂಬುಜ ಷಟ್ಪದಂ." ಎಂಬದಾಗಿ ೧೭ ನೆಯ ಶ್ಲೋಕದಲ್ಲಿಯೂ, "ಶಿವಪದಾಂಭೋಜ ಭೃಂಗಂ" ಎಂಬದಾಗಿ ಪರಿಚ್ಛೇದಾಂತ್ಯದ ಗದ್ಯಗಳಲ್ಲಿಯೂ ಹೇಳಿಕೊಳ್ಳುವದರಿಂದ ಈತನು ಶೈವಮತದವನೆಂದು ತೋರುತ್ತದೆ.

ಕವಿಸಂಪ್ರದಾಯಾನುಸಾರವಾಗಿ ಪೂರ್ವಕವಿಗಳನ್ನು ವಂದಿಸುವ ಸಂದರ್ಭದಲ್ಲಿ (೧೫) ಸಂಸ್ಕೃತದಲ್ಲಿ ಗ್ರಂಥಗಳನ್ನು ಬರೆದ ಪುರಾತನ ಕವೀಶ್ವರರ ಹೆಸರನ್ನೇ ಹೇಳಿರುವದರಿಂದ ಒಂದುವೇಳೆ ಈತನು ಬಹಳ ಹಿಂದೆ ಜೀವಿಸಿದ್ದರಬಹುದು.

ಅಲ್ಲದೆ ಕೇಶಿರಾಜನ ತಂದೆಯಾದ ಮಲ್ಲಿಕಾರ್ಜುನನು ಸಂಗ್ರಹಿಸಿರುವ ಸೂಕ್ತಿಸುಧಾರ್ಣವೆಂಬ ಗ್ರಂಥದಲ್ಲಿ,

"ಶಿಥಿಲಪದಪ್ರಪೂರ್ಣಮಪಶಬ್ದತುಷಾವೃತಂ ...॥" ಎಂಬ ಈ ಗ್ರಂಥದ ಎಳನೆಯ ಪದ್ಯವನ್ನೂ, "ದರಹಾಸಶ್ರೀವಿಲಾಸಂ...॥" ಎಂಬ ೩೦ ನೆಯ ಪದ್ಯವನ್ನೂ ಸಂಗ್ರಹಿಸಿರುತ್ತಾನೆ. ಈ ಮಲ್ಲಿಕಾರ್ಜುನನು ಬಹುಶಃ ೧೩ ನೆಯ ಶತಮಾನದ ಆದಿಭಾಗದಲ್ಲ ಜೀವಿಸುತ್ತಿದ್ದನೆಂಬದಾಗಿ ಮೇ॥ ರೈಸ್ ಸಾಹೇಬರು ಬರೆಯುತ್ತಾರೆ. ಆದುದರಿಂದ ಕಾಮನು ಇನ್ನೂ ಹಿಂದೆಯೇ ಜೀವಿಸಿರಬೇಕಾಗಿ ತೋರುತ್ತದೆ. ರಸರತ್ನಾಕರವೆಂಬ ಗ್ರಂಥವನ್ನು ರಚಿಸಿದ ಸಾಳ್ವನೂ, ನವರಸಾಲಂಕಾರವೆಂಬ ಗ್ರಂಥವನ್ನು ಬರೆದ ಕವಿ ತಿಪ್ಪರಸನೂ ಈತನ ಈ ಗ್ರಂಥದಿಂದ ಅನೇಕ ಶ್ಲೋಕಗಳನ್ನು ತೆಗೆದುಕೊಂಡು ಇರುತ್ತಾರೆ. ಶೃಂಗಾರರಸಕ್ಕೆ ಮನ್ಮಥನೇ ಅಧಿದೇವತೆಯಾದುದರಿಂದಲೂ, ತನ್ನ ಹೆಸರು ಕಾಮದೇವನಾದುದರಿಂದಲೂ ಈತನು ಮಂಗಳಶ್ಲೋಕದಲ್ಲಿ ಮನ್ಮಥ ಸ್ತುತಿ ಮಾಡಿದಾನೆ.

ಈತನು ಇನ್ನು ಯಾವಯಾವ ಗ್ರಂಥವನ್ನು ರಚಿಸಿರುತ್ತಾನೆಯೋ ಗೊತ್ತಿಲ್ಲ. ತನ್ನ ವಿಷಯವಾಗಿ ಈ ಕವಿಯು ಯಾವಸಂಗತಿಯನ್ನೂ ಬರೆದಿಲ್ಲ.

ಈ ಗ್ರಂಥದಲ್ಲಿ ರಸಸ್ವರೂಪವು ನಿರೂಪಿತವಾಗಿವೆ. ಇದು ನಾಲ್ಕು ಪರಿಚ್ಛೇದಗಳಾಗಿ ವಿಭಾಗಿಸಲ್ಪಟ್ಟಿದೆ. ಪ್ರಥಮ ಪರಿಚ್ಛೇದದಲ್ಲಿ ನವರಸಸ್ವರೂಪವೂ, ದ್ವಿತೀಯ ಪರಿಚ್ಛೇದದಲ್ಲಿ ಭಾವಭೇದನಿರ್ಣಯವೂ, ತೃತೀಯ ಪರಿಚ್ಛೇದದಲ್ಲಿ ನಾಯಕನಾಯಿಕಾದಿ ಸ್ವರೂಪವೂ, ಚತುರ್ಥ ಪರಿಚ್ಛೇದದಲ್ಲಿ ಸಖಿಸಖೀಸಂಭೋಗ ವಿಪ್ರಲಂಭಪ್ರವಾಸಾವಸ್ಥಾವಿಸ್ತಾರವೂ ನಿರೂಪಿತವಾಗಿವೆ.

ಮೈಸೂರು ಮಹಾರಾಜರವರ ಕಾಲೇಜ್ ಕನ್ನಡ ಮುನ್ಷಿ ಮ॥ ರಾ॥ ಶ್ರೀ ಬಸವಪ್ಪ ಶಾಸ್ತ್ರಿಗಳು ಒಂದು ಪ್ರತಿಯನ್ನು ದಯವಿಟ್ಟು ಕಳುಹಿಸಿಕೊಟ್ಟರು. ಇದಕ್ಕೆ ಖ॥ ಎಂದು ಹೆಸರು. ನಮ್ಮಲ್ಲಿ ಒಂದು ಪ್ರತಿ ಇತ್ತು. ಅದಕ್ಕೆ ಕ॥ ಎಂದು ಸಂಜ್ಞೆ ಮಾಡಿದೆ. ಈ ಎರಡು ಪ್ರತಿಗಳ ಸಹಾಯದಿಂದ ಈ ಗ್ರಂಥವನ್ನು ಮುದ್ರಿಸಲಾಯಿತು.

ಕಾಮದೇವವಿರಚಿತಂ,

ಶೃಂಗಾರ ರತ್ನಾಕರಂ

—ಪ್ರಥಮ ಪರಿಚ್ಛೇದಂ—

ಶ್ರೀರಾಮಾನಂದನಂ ವಿಶ್ರುತವಿಶದಯಶೋರಂಜಿತಂ ಪ್ರೋಲ್ಲಸಚ್ಛೃಂ|
ಗಾರೋದಾರಾತ್ಮನುದ್ಯದ್ಗುಣವಿಲಸಿತಧರ್ಮ್ಮಂ ಜಗತ್ಸೇವ್ಯರಮ್ಯಾ ‖
ಕಾರಂ ರಾಜಪ್ರಿಯಂ ಪ್ರೇಮದಿನತನುವಿಳಾಸಾಸ್ಪದಂ ಕಾಮಿನೀವೃಂ|
ದಾರಾಧ್ಯಂ ಕಾಮದೇವಂ [1]ಪೊಸಯಿಸುಗೆ ಜಗಕ್ಕೆಯ್ದೆ ಶೃಂಗಾರ
[ದೊಳ್ಪಂ ‖೧

ನಿಯತಾರ್ಥಂ ಶ್ರುತವಾಶ್ರುತವ್ಯಸನದಿಂದಂ ಜ್ಞಾನವಾಜ್ಞಾನನಿ|
ರ್ಣಯದಿಂದಂ ಚತುರತ್ವವಾಚತುರತಾಸದ್ವೃತ್ತಿಯಿಂ ನೀತಿ ನೀ ‖
ತಿಯಿನಾದಂ ಸುಖಮುಕ್ಕ್ಯವೆಂಬರದಱಿಂ ಸಂಸಾರಸಂಭಾವಿತಾ ‖
ತ್ಮೆಯೆ ಆವಾಗ್ವಧು ತಾನೆ ಸನ್ನಿಹಿತೆಯಕ್ಕೆನ್ನೀಮುಖಾಂಭೋಜ
[ದೊಳ್ ‖೨

೧. ಸೊಗಯಿಸುಗೆ, ಖ॥

ಅನಿತುಂ ಶೃಂಗಾರನೀತಿಪ್ರಕಟನರಸಭಾವತ್ವಸಂದೋಹಪಾರಾ ।
ನನದಿಂದಂ ಪ್ರೋಣ್ಮಿತಾಪ್ರಾಕ್ತನಪರಮಕವೀಂದ್ರರ್ಕಳಿಂದೆನ್ನ ಕಾವ್ಯಾಂ॥
ಗನೆಯುಂ ಲೀಲಾರಸಾಲಂಕರಣಚತುರೆಯಪ್ಪಂತು ಮಾಳ್ಕೆಂದು ಮಾಣ್ಕೆ ।
ಪ್ರನಿಕಾಪೋದಗ್ರಮಾರ್ಗೋನ್ನತರಕೃತಕಚಾತುರ್ಯರಾಚಾರ್ಯವರ್ಯರ್॥
ರಸಮನೆಱಿಲ್ದು ಮುನ್ನ ಸಮಕಟ್ಟ ರಸಕ್ಕನುರೂಪಮಾಗೆ ಭಾ ।
ವಿಸಿ ಪೊಸದೇಸಿಯಂ ಪ್ರಗಿಸಿ ದೇಸಿಯೊಳೊಂದಿದ ಕನ್ನಡಂಗಳಂ ॥
ಪಸರಿಸಿ ಕನ್ನಡಂ ವಿಬುಧರಂ ಬಗೆಗೊಳ್ವನಮಿಂತು ಭಾವಮಂ ।
ಪೊಸಮಿಸಿ ಪೇೞ್ದಿಡಾಕೃತಿ ಧರಿತ್ರಿಗಳಂಕೃತಿಯಾಗದಿರ್ಕುಮೇ?॥

ಮಾರ್ಗಯುತನೆನಿಪ್ಪದೆನಿಸೆ ಸು ।
ಮಾರ್ಗೋದಗ್ರಪ್ರಭಾವನೆನಿಸುಗುಮದಱಿಂ ॥
ಮಾರ್ಗಮನೆ ಪಿಡಿಪ್ಪುದೆಂತುಂ ।
ಮಾರ್ಗಂದಪ್ಪಿದರನಾರುಮೇಂ ಮೆಚ್ಚುವರೇ ? ॥೫

ಎಸೆಯೆ ಪೊಸದೇಸಿ ಮಿಗೆ ನವ ।
ರಸಭಾವಂ ಮಿಸುಗೆ ಸುರುಚಿರಾಲಂಕಾರ ॥
ಪ್ರಸರೋಚಿತಾಂಗಮಾಕಾ ।
ವ್ಯಸುದತಿ ಬುಧಜನಮನೋಲಿಪ್ಪುದೊಂದಚ್ಚರಿಯೇ ? ॥೬

ಶಿಥಿಲಪದಪ್ರಪೂರ್ಣಮಪಶಬ್ದತುಷಾವೃತಮಸ್ತಭಾವಮ ।
ಪ್ರಥಿತಗತಾರ್ಥಶಾಸ್ತ್ರಮಪಹಾಸ್ಯಸಮಾಶ್ರಿತಮಪ್ಪ ಕಬ್ಬಮಂ ॥
ಕಥಯಿಸಿ ಗರ್ವದಿಂ ಜೆೞ್ತು ಬಿಜ್ಜನೆ ಬೀಗಿ ಸರಸ್ವತೀಶಿರೋ ।
ವ್ಯಥೆಯನದೇಕೆ ಮಾಡುವರೊ ದುಷ್ಕವಿಗಳ್ಕಲರೀಧರಿತ್ರಿಯೊಳ್ ? ॥೭

೧. ಅನಿಶಂ.ಖ॥ ೨. ಪ್ರನಕ.ಕ॥ ೩. ಧಾತ್ರಿಯೊಳಂಕೃತಿ.ಕ॥
೪. ಎಸೆವಪೊಸದೇಸಿಯೊಳ್.ಕ॥ ೫. ಪ್ರಥ.ಕ॥ ೬. ಮನೋ.ಖ॥

ಮಾಯುಮಿದೆಲ್ಲಮಶ್ರುತಿಪಥೋಚಿತಮೀಕೃತಿಯೊಳ್ಫಣಾಕ್ಷರ ।
ನ್ಯಾಯದಿನೆತ್ತಮೊಂದೆರಡುಮುಕ್ತಕಮೊಳ್ಳಿದುಮಾದುಮೆಂಬಭಿ ॥ ಪ್ರಾ
ಯಮನುಂಟುಮಾಡದೆ ಮುಖೋದ್ಗತವಾಣಿಯೆ ವಂದ್ಯಮಾನೆಯೆಂ ।
ಬೀಯಶಮಂ ನಿಮಿರ್ಚುವುದು ಕಾವ್ಯನಿಬಂಧನದೊಳ್ಕವೀಶ್ವರರ್ ॥ ೮

ಜಗದೊಳ್ಸನ್ನಿದಮಾದ ನಾಡ್ನುಡಿಗಳಂ ಛಂದಕ್ಕೆ ಬರ್ಪಂತೆ ನೆ ।
ಟ್ಟಗೆ ಮಾತಾಡುವ ಬಲ್ಮೆ ಚಿತ್ತದೊಳೊಱಲ್ದಿರ್ದರ್ಥಮಂ ಕೂಡೆ ನಾ ॥
ಲಗೆಯಿಂ ರಂಜಿಸುವೊಂದು ಬಿನ್ನಣಮದಿನ್ನಾವಂಗೆ ಪುಣ್ಯೈಕಭಾ ।
ಗಿಗೆ ಸೈಪಿಂ ದೊರೆಕೊಳ್ಗುಮಾತನೆ ವಲಂ ಶೃಂಗಾರರತ್ನಾಕರಂ ॥ ೯

ಪದಮೆತ್ತಿರ್ದ ಗಭೀರಭಾವಗುಣದಿಂ ಲಾವಣ್ಯಲೀಲಾವಿಲಾ ।
ಸ[೧]ದಿನುದ್ಯದ್ಗುಣಶೋಭೆಯಿಂ ವಿವಿಧಭೂಭೃದ್ಭೂರಿಸಂಭಾವಿತಾ ॥
ಸ್ಪದದಿಂ ಭೂಭುವನಪ್ರಸಿದ್ಧಿ[೨]ನಿಲೆ ತತ್ಕಾವ್ಯಂ ಜಗತ್ಸೇವ್ಯಮ ।
ಪ್ಪುದಱಿಂದಂ ಕವಿಕಾಮದೇವನೆ ವಲಂ ಶೃಂಗಾರರತ್ನಾಕರಂ ॥ ೧೦

ಮೃದುಮಧುರ ವಚನರಚನೆಯಿ ।
ನುದಾತ್ತಕವಿವೃಷಭ[೩]ನೃಪಕದಂಬವಿಪಶ್ಚಿ ॥
ದ್ಧೃದಯಮನಿರ್ಕುಳಿಗೊಳುತಿ ।
ರ್ಪುದಱಿಂ ಕವಿಕಾಮನಿಂತು ದೆಸೆದೆಸೆಗೆಸೆ[೪]ದಂ ॥ ೧೧

ನಿರುಪಮಕವಿತಾರಸಮಂ ।
ವರಕವಿ[೫]ಬುಧರತ್ನರಾಜಿ ಬಣ್ಣಿಸೆ ಸಾಮಂ ॥
ತರ ಮಂಡಳಿಕರ ಚಕ್ರೀ ।
ಶರ ಸಭೆಯೊಳ್ನೆ*ಗಳ್ದು[೬]ನಿಂತು ಕವಿಮುಖಮುಕುರಂ ॥ ೧೨

೧. ದ್ರುಸ. ಖ॥　೨. ನಿಧಿ. ಖ॥　೩. ಕವಿ. ಕ॥
೪. ಸೆಮ. ಖ॥　೫. ಜನ. ಖ॥　೬. ನಾಸು. ಖ॥

ಸುಕರಶ್ಲೇಷಪದಪ್ರಸಾದಸಮತಾಸದ್ಭಾವಮಾಧುರ್ಯವಾ ।
ಕ್ಸುಕುಮಾರಾದಿಕದಂಬಕೋಚಿತರಸಾರ್ಥವ್ಯಕ್ತಿಸೂಕ್ತಿಂ ಚಿರಾ ॥
ಧಿಕತೇಜೋವರಕಾಂತಭಾಷಿತಸಮಾಧಿವ್ಯಾಪಕೋದಾತ್ತಸಾ ।
ಖ್ಯಕರಾಲಂಕೃತಮಾಗೆ ಪೇಳ್ದ ಕೃತಿಯಂ ಸೇವ್ಯರ್ ಮನಂಗೊಳ್ಳರೇ? ॥
ಅದಱಿಂದೀತನ ವಾಣಿಯಲ್ಲದೆ ಗಭೀರೋದಾರಶೃಂಗಾರಸಾ ।
ರದೊಳುದ್ಭಾವಿಸದೆಂದು ಪಂಡಿತಜನಂ ನೀನೆಯ್ದೆ ಪೇಳಲ್ಕೆವೇ ॥
ಱುವಿದಂ ಭಾವರಸಪ್ರಪಂಚಮನೆನಲ್ ಶೃಂಗಾರರತ್ನಾಕರಾ ।
ಖ್ಯದಿನಿಂತೀಕೃತಿಯಂ ಮನಂಗೊಳಿಸಿದಂ ಶೃಂಗಾರರತ್ನಾಕರಂ ॥೧೪

ಸರಸೀಜೋದ್ಭವ ಕರ್ಣಿಕಾಭವ ಕುಬೇರಾಪತ್ಯ ಪಾಂಚಾಲ ಕಾ ।
ಬರ ವಾತ್ಸ್ಯಾಯನ ಚಂದ್ರದತ್ತಕ ಮನಸ್ಸಂಜಾತ ನಾರಾಯಣಾ ॥
ಮರಸಿಂಹಾದಿಗಳಂ ನೆಗೞ್ತೆವಡೆದೀಶೃಂಗಾರಮೀಗಳ್ಕರಂ ।
ದೊರೆವೆತ್ತೆತ್ತನೆ ಬೇೞ್ ವಿಸ್ತರಿಸಿದಂ ಶೃಂಗಾರರತ್ನಾಕರಂ ॥೧೫

ನುತಧರ್ಮೋಪಚಿತಂ ಸ್ವಭಾವಸುಭಗಂ ಸಲ್ಲಕ್ಷಣೋಕ್ತಿಂ ವಿರಾ ।
ಜಿತಕಾಂತಾಪ್ರಣುತಂ ಸಕೋಮಲಪದಂ ಸಾಲಂಕೃತಂ ಸದ್ರಸೋ ॥
ಚಿತಭಾವಂ ಸುಕರಂ ಸುವೃತ್ತಮೆನೆ ಸೂಕ್ತಿಭ್ರಾಜಿತಂ ನೋೞ್ಪಡಾ ।
ಕೃತಿಯಂ ಪೋಲ್ತಿರೆ ಪೇಳ್ದನರ್ಥಕೃತಿಯಂ ಶೃಂಗಾರರತ್ನಾಕರಂ ॥
ಭವಪಾದಾಂಬುಜಷಟ್ಪದಂ ನವರಸವ್ಯಾಪಾರಮಂ ಭಾವಸಂ ।
ಭವಮಂ ನಾಯಕನಾಯಿಕಾಸಖಸಖೀಸಂಭೋಗತದ್ವಿಪ್ರಲಂ ॥

೧. ಕೋದಾರ. ಖ॥ ೨. ಕಾಂಚಿತ. ಬ॥ ೩. ರಾಧಾರ. ಖ॥
೪. ನೀತಾಪೆ. ಖ॥ ೫. ಛರ. ಖ॥ ೬. ಭದ್ರಜಿತ್ತ. ಖ॥ ೭. ೪. ಖ॥
೮. ತ್ತಲ್ತೆನೆ. ಖ॥ ೯. ವ್ಯಾವರ್ಣಮಂ. ಖ॥

ಭವಿಟಪ್ರಸ್ತುತವೈಶಿಕಾದಿ ರಸಶಾಸ್ತ್ರೋದ್ಭೂತಸನ್ಮಾರ್ಗವೃ।
ತ್ತಿವಿಕಲ್ಪಂಗಳುಮಂ ಮನಂಗೊಳಿಸಿದಂ ಶೃಂಗಾರರತ್ನಾಕರಂ ॥೧೭

ಅವಱೊಳ್ರಸಭಾವಮೆ ಮು।
ಖ್ಯವಪ್ಪ ಕಾರಣದಿನಿಲ್ಲಿ ಮೊದಲೊಳ್ತತ್ಸಂ ॥
ಭವವಿಧಿಯುನವಱ ವರ್ಣ್ಣಮು।
ನವಱಧಿದೈವಂಗಳಂ ಮನಂಗೊಳೆ ಪೇೞ್ವೆಂ ॥೧೮

ಶೃಂಗಾರದಿಂದೆ ಹಾಸ್ಯಂ।
ಸಂಗಳಿಸಿದ ರೌದ್ರದಿಂದೆ ಕರುಣಂ ಸ್ಫುಟವೀ ॥
ರಾಂಗದಿನದ್ಭುತಮೆಂದುಂ।
ಪಿಂಗದೆ ಬೀಭತ್ಸದಿಂ ಭಯಾನಕಮೊಗೆಗುಂ ॥೧೯

ಶ್ಯಾಮಂ ಶೃಂಗಾರವರ್ಣಂ ಸಿತರುಚಿರುಚಿರಂ ಹಾಸ್ಯಮುವ್ಯಕ್ತರ
ಕ್ತೋ। ದ್ದಾಮಂ ರೌದ್ರಂ ಕಪೋತಚ್ಛವಿ ಮಿಗೆ ಕರುಣಂ ಗೌರವಿ
ಭ್ರಾಜಿ ವೀರಂ ॥ ಹೇಮಾಭಾಸಂ ಸಮಂತದ್ಭುತಮಸಿತಸಿತೋದ್ಭಂಗಿ
ಬೀಭತ್ಸಮೆಂದುಂ। ಧೂಮಾಕಾರಂ ಭಯಂ ಭಾವಿಸುವೊಡೆ ಕವಿಕಾ
ಮೋಕ್ತಿಯಿಂ ವರ್ಣ್ಣಭೇದಂ ॥೨೦

ಹರಿ ಶೃಂಗಾರಕ್ಕೆ ದೈವಂ ಗಣಪತಿ ಪರಿಹಾಸಕ್ಕೆ ನಾಥಂ ಹರಂ
ರೌ। ದ್ರರಸಕ್ಕಾಳ್ದಂ ಕೃತಾಂತಂ ಪತಿ ಕರುಣರಸಕ್ಕಿಂದ್ರನಗ್ರೇಸ
ರಂ ವೀ ॥ ರರಸಕ್ಕಂಭೋಜಗರ್ಭಂ ಪರಿವೃಢನುದಿತಾತ್ಯದ್ಭುತಕ್ಕಿಂ
ತು ಬೀಭ। ತ್ಸರಸಕ್ಕಂ ಭೀತಿಗಂ ಸ್ವಾಮಿಗಳೆನೆ ನೆಗೞ್ದರ್ ನಂದಿಮಾ
ಕಾಳದೇವರ್ ॥೨೧

೧. ಕಷಾಯ. ಖ॥ ೨. ದಯಿಪ್ಪ. ಖ॥

ಈವರ್ಣ್ಣದ ದೈವದ ನಾ ।
೧ಮಾವಳಿಗಳೆ ಮಾರ್ಗ್ಗಸಂಗತಂ ತತ್ಸಕಳೋ ॥
ರ್ವೀವಿದಿತಂ ನವರಸವೆಂ ।
ಬೀವಿಧಿಯಿಂ ಶಾಂತರಸಮುಮಂ ಪ್ರಕಟಸು೨ವೆಂ ॥ ೨೦

ಶೃಂಗಾರರಸಂ ಮಿಕ್ಕಾ ।
ಸಂಗಳ್ಗ೩ಧಿದೈವಮದನೆ ನರರೋಲಗಿಪರ್ ॥
ಪಿಂಗದೆ ರೂಪಾವಯುವಸು ।
ಸಂಗತಯೌವನವಾಹತುತ್ತುರಂಗಾರೂಢಂ ॥ ೨೩

ಅದಱಿಂ ಶೃಂಗಾರರಸಾ ।
ಸ್ವಾದಮೆಂಬುದು ಸಕಲಜನಕೆ ಸಾಧಾರಣಮು ॥
ಪ್ರಾದಱಿಂದಭಿವರ್ಣ್ಣಿಸುವೆಂ ।
ಮೊದಲೊಳ್ ಶೃಂಗಾರರಸವಿಭಾಗಾಂತರಮಂ ॥ ೨೪

ಅದೆಂತೆನೆ :—

ಕರಣೀಯಂ ಪಂಚಭೂತೋಪಚಿತಮದು ಶರೀರಂ ಶರೀರಸ್ಥನ ಭ್ಯಂ। ತರಕಾಲೋದ್ಭೂತಪರ್ಯಾಪ್ತಿಕಪರಿಕಥಿತಂ ಜೀವನಾಜೀವನುತಃ ॥ ಕರಣವ್ಯಾಪಾರಿಯಂತಃಕರಣಮದು ಮನೋಬುದ್ಧ್ಯಹಂಕಾರಚಿತ್ತೋ। ತ್ಕರಮೀಸಂಸಾರಚಕ್ರಭ್ರಮಣಕರಣಕಂ೪ ಚೇತನಾಚೇತನಾಖ್ಯಂ ॥ ೨೫ ॥

ಪರಿಣತಮೆನಿಸಿರ್ದ೦ತಃ ।
ಕರಣಚತುಷ್ಟಯಗುಣಸ್ವ೫ಭಾವಂಗಳನಾ ।

---

೧. ಮಾವಳಿಮಾರ್ಗಸಂಗತಂಗಳ್ಸಕಳೋ. ಖ॥ ೨. ಸಿದರ್. ಕ॥
೩. ನಾಥನ. ಕ॥ ೪. ಕರಣಮಾ. ಖ॥ ೫. ಪ್ರಭಾವ. ಖ॥

ದರವೆ ಪಲರಱಿಯ ಬರ್ಪ[೧]ಂ ।
ತಿರೆ ಮಧುರಾಳಾಪದಿಂದಮಭಿವರ್ಣಿಸುವೆಂ ‖ ೨೬

ನೆನೆಯಿಸುಗುಂ ಮನಂ ಮಱೆಯಿಸಿರ್ದ ಪದಾರ್ಥಮನಾಪದಾರ್ಥಸಂ। ಜನಿತವಿಭೇದಮಂ ನೆಱೆಯೆ ಬುದ್ಧಿ ವಿಚಾರಿಸುಗುಂ ವಿಚಾರಕ ‖ ಲ್ಪನೆಯನಹಂಕೃತಂ ತಿಳಿದು[೨] ನಿಶ್ಚಯಿಸಿರ್ಕುಮದಂ ವಿಶುದ್ಧ[೩]ಭಾ । ವನೆಯಿನನಾರತಂ ಮಱೆಯದಿರ್ಪುದು ಚಿತ್ತಮುದಾತ್ತವೃತ್ತಿಯಿಂ ‖

ಅದಱಿಂದಾತ್ಮಾನ್ವಿತಾಂತಃಕರಣಪರಿಣತಂ ಚಿತ್ತಮಾಚಿತ್ತದಿಂ ಕಾ। ಣ್ಬುದು ಭಾವಂ ಭಾವದಿಂ ಪುಟ್ಟುಗುಮೊದವಿ ರಸಂಗಳ್ರಸವ್ಯಕ್ತಿಯಂ ಮಾ ‖ ಳ್ಪುದು ವಕ್ತ್ರಂ ವಕ್ತ್ರವಿಕ್ಷೇಪಣವಿಳಸನದಿಂದೀಗಳಂತೀರಸಂ ಪು । ಟ್ಟಿದುದೆಂಬೀಭೇದಮಂ ಭಾವಿಸುವುದು ಕವಿಕಾವ್ಯೋಕ್ತಿಯಿಂದಿಂಗಿತಜ್ಞರ್ ‖ ೨೭

[೪]ಚಿತ್ತದ ಭಾವದ ದೆಸೆಯಿಂ ।
ದೆತ್ತಂ ನವರಸವಿಭೇದಮುದಯಿಸುಗುಂ ಸಂ ‖
ಪತ್ತಿಯನವಱ ವಿಭೇದಮ ।
ನತ್ತವಿಚಾರಿಸುಗೆ ಲಕ್ಷ್ಯಲಕ್ಷಣಯುಗದಿಂ ‖ ೨೮

ಮುದಮಂ ಭಾವಿಸೆ ಚಿತ್ತವೃತ್ತಿ ಸಮಸಂದಾರಾಗದಿಂದೆಯ್ದೆ[೫]ಪು । ಟ್ಟಿದ ವಕ್ತ್ರಾಬ್ಜವಿಕಾಸಮಂತದೆ ವಲಂ ಶೃಂಗಾರಮಂತಾರಸಂ ‖ ವಿದಿತಂ ಭಾವಿಸುವಾಗಳೈದು ತೆಱನಾವಾಗ್ವೃತ್ತಿಯಿಂದಾವಿಳಾ । ಸದೆ ನೈಪಥ್ಯದಿನಾಕ್ರಿಯಾತ್ಮಕದಿನಾಸಂಕೀರ್ಣದಿಂ ವ್ಯಸ್ತದಿಂ ‖ ೩೦

೧. ಪಲರ್ಗಱಿಪಲ್ಕಂ. ಕ‖   ೨. ತಿಳಿಯೆ. ಕ‖   ೩. ವಿರುದ್ಧ ಕ‖
೪. ಚಿತ್ತದಭಾವದರಸದಿಂ । ದೆತ್ತಂ ನವರಸವಿಶೇಷಮುದಯಿಸುಗುಂಸಂ ‖ ಪತ್ತಿಯನವಱ ವಿಕಲ್ಪಮ । ನುತ್ತಮರಿಂದಱಿಗೆ ಲಕ್ಷ್ಯಲಕ್ಷಣಯುಗದಿಂ ‖ ಕ‖
೫. ಪೆರ್ಚಿದ. ಖ‖

ತಿಳಿವುದು ಮುಂದಣ ಲಕ್ಷ್ಯಂ ।
ಗಳನೈದುಂ ತೆಱದ ರಸವಿಕಾಸದ ಭೇದಂ ॥
ಗಳನಿಲ್ಲಿ ಮೊದಲೊಳಾಂ ಕೇ ।
ವಳಮಾಶೃಂಗಾರಮೆಂಬ ಪೆಸಱಂ ಪೇೞ್ದಂ ॥೩೧

ದರಹಾಸಶ್ರೀವಿಲಾಸಂ ಸುಲಲಿತವಿಚಲದ್ಭ್ರೂಲತಾರಂಜಿತಂ ಸುಂ।ದರಲೀಲಾಪಾಂಗಲಕ್ಷ್ಮೀಪರಿಗತವಿಭವಂ ಪದ್ಮರಾಗಪ್ರಭಾಪ್ರ॥ಸ್ಫುರಿತೋಷ್ಠಂ ಚಾರುಚಂಚತ್ಪುಳಕಕಳಿತಗಂಡಸ್ಥಳಂ ಚೆಲ್ವನೇನಾ।ವರಿಸಲ್ಪಾಲ್ದಿರ್ದುದೋ ಕಾಂತೆಯ ಮುಖಕಮಳಂ ಸಾರಶೃಂಗಾರಪಿಂಡಂ॥ ೩೨

ಇದು ವಿದಿತವಾದ ಶೃಂಗಾ ।
ರದ ತೆಱನಿದರೈದು ತೆಱದ ಭೇದಂಗಳೊಳಾಂ ॥
ಮೊದಲೊಳ್ಪೇೞ್ದುದುಹರ್ಷಾ ।
ಸ್ಪದೋಕ್ತಿ ವಾಗ್ವೃತ್ತಿಯೆಂಬುದಿಂತೆದಱ ತೆಱಂ ॥೩೩

೧. ವಾಗ್ವೃತ್ತಿ :—

ಎನಗಿಂದೆನ್ನ ಮನೋರಥಂ ನೆರೆದುದೀಗಳ್ಬಾೞ್ದ ಮಜ್ಜೀವಿತೇ ।
ಶನುಮೇನೆಂಬುದನಿಂಬುಕೆಯ್ದು ತಿಳಿದಂ ಸಾಪೇಕ್ಷನೀಪುಷ್ಪಕಾಂ ॥
ಡನುಮಾರೋಪಿತಚಾಪನಿಂತುಡುಗಿದಂ ತನ್ನುರ್ಕನಿಂದೆಂದದೇಂ ।
ಮನದೊಳ್ಪಾಗಿಸಿ ಕಾಂತೆ ಬಣ್ಣಿಸಿದಳೋ ತನ್ನೊಂದಭಿಪ್ರಾಯಮಂ ॥

೨. ನೈಪಥ್ಯಂ :—

ಲಲಿತವಿಭೂಷಣಮಾಲ್ಯಾ ।

---

೧. ವೈದುಂ. ಕ॥ ೨. ಲಲಿತಿತರಳತಾತರ್ಜಿತಂ. ಕ॥ ೩. ಪ್ರೂರಂ. ಕ॥ ೪. ಭೇದದೊಳೆತ್ತಂ. ಖ॥ ೫. ದಿನ್ನ. ಖ॥ ೬. ಚಾಪ. ಖ॥ ೭. ನಿಂದು. ಕ॥

ನುಲೇಪನಾಂಬರವಿತಾನದಿಂ ತನ್ನಂ ಕೋ ॥
ಮಳೆ ಜನಿತಮುದದೆ ಕೈಗೆ ।
ಯ್ದೊಳಸಿರೆ ನೈಪಥ್ಯಮೆಂಬುದಾಶೃಂಗಾರಂ ॥೩೫

ತಿಳಿವಲ್ಲೊದಟ್ಟ ನಲ್ಲಂ ತಿಳದೊಸೆಗೆಯನಾದೂತಿಯಿಂದೆಯ್ದೆ ಕೇಳ್ದಾ । ಗಳದೇಂ ತಾಳ್ದಿರ್ದುದೋ ಕಾಂತೆಯ ಮುಖಕಮಲಂ ಕಾಂತಿಯಂ ತಾರಹಾರಾ ॥ ವಳಿಯಂ ವೃತ್ತಸ್ತನಂ ಕಾಂಚಿಯನುರುತರಕಾಂಚೀಪದಂ ರತ್ನಕೇಯೂ । ರಲತಾಶ್ರೀಲೀಲೆಯಂ ಬಾಹುಗಳತುಳತುಳಾಕೋಟಿಯಂ ಪಾದಪದ್ಮಂ ॥೩೬ (ಇದು ವಿಭೂಷಣಂ)

ವನಕೇಳೀಲೀಲೆಯೊಳ್ ತನ್ನಿನಿಯನ ದಯೆಯಿಂ ಪೆತ್ತು ನೂತ್ನೋತ್ಪಳಾಂಭೋ । ಜನವ್ರೋತ್ತಂಸಾವತಂಸಂಗಳನಭಿನವಪುನ್ನಾಗಕೇಯೂರಮಂ ನೂ ॥ ತನಚಂಚತ್ಕರ್ಣಿಕಾರಪ್ರಸವವಳಯಮಂ ಮಲ್ಲಿಕಾಕುಟ್ಮಳವ್ಯ । ಕ್ತನವ್ರೋದ್ಯದ್ಧಾರಮಂ ಕಾಮಿನಿ ತಳೆದಿನಿಸಂ ನೋಡೆ ಕಣ್ಗೆಡ್ಡಮಾದಳ್ ॥೩೭ (ಇದು ಮಾಲ್ಯಂ)

ಕೆಳದೀ ನಿನ್ನಂಗಸಂಗಸ್ಫುರಿತವಿಷಮಕಾಮಜ್ವರಂ ಮಿಗ್ಗಿತೀ ಕೋ । ಮಳದೇಹಂ ಸಾರಕಾಶ್ಮೀರದಿನೆಸೆದಪುದೀನಿನ್ನ ಭಾಸ್ವಲ್ಲಲಾಟಂ ॥ ತಿಳಕಾಲಂಕಾರದಿಂದೊಪ್ಪಿದುದಿದುವೆ ಕಪೋಲಂ ಸಕಸ್ತೂರಿಕಾಪಂ । ಕಿಳರೇಖಾನೀಕದಿಂ ಪಜ್ಜಳಿಸಿದಪುದೆಲೇ ಬಂದನಕ್ಕುಂ ನಿಜೇಶಂ ॥೩೮ (ಇದು ಅನುಲೇಪನಂ)

ಮೆಱೆವಿನಮುಳವಡೆ ನಲ್ಲಂ ।
ನಿಱಿವಿಡಿದುಡಿಸಿದೊಡೆ ಕಾರ ಕರ್ಮುಗಿಲೆಡೆಯಿಂ ॥
ಪೊಱಮಡುವ ಖಚರವಧುವೆಂ ।

---

೧. ಕಾಂತೆ.

ಬೆಱಕವುನೊಡರಿಸದಳೋಪಳೋಪನ ಬಗೆಯೊಳ್ ॥೩೯

(ಇದು ವಸ್ತ್ರಂ)

ಎಳಸಿರಿ ದೇಸಿ ಪೊಚ್ಚಪೊಸಮಲ್ಲಿಗೆಯಂ ಪಲವಂ ತುಱುಂಬಿ ಕ।
ಣ್ಗೊಳೆ ಸಿರಿಕಂಡದಣ್ಪನೊಸೆದಿಕ್ಕಿ ದುಕೂಲಮನುಟ್ಟು ಮೌಕ್ತಿಕಾ॥
ವಳಿಯನೊಱಲ್ದು ತೊಟ್ಟು ತಳಿರುಯ್ಯಲನೞ್ತಿಯೊಳೇಱ ಪಾಡಿದಳ್।
ಲಲನೆ ವಸಂತದೊಳ್ ಪಲವು ವರ್ಣಕದಿಂ ಕವಿಕಾಮದೇವನಂ ॥೪೦

(ಇದು ನಾಲ್ಕರ ಮಿಶ್ರಂ)

೩. ಕ್ರಿಯಾತ್ಮಕಂ :—

ಇವು ನೈಪಥ್ಯದ ಶೃಂಗಾ।
ರವಿಕಲ್ಪಂ ವಿಬುಧರಱವುದಿನ್ನತ್ತಲ್ ಸಂ॥
ಭವಿಸುಗುಮವಯವವಿಕ್ಷೇ।
ಪವಿಳಾಸದಿನಾಕ್ರಿಯಾತ್ಮಕಂ ಶೃಂಗಾರಂ ॥೪೧

ಇನಿಯನಮೇಲೆ ಮೆಲ್ಲನೆ ಮಲಂಗಿ ಮನಂಗೊಳೆ ಭಂಗಿಯಿಂದೆ ಸಂಜ
ನಿತವಿಕಾರವೊಪ್ಪೆ ನಿಜಸೌಷ್ಟವವೊಂದಿರೆ ಬೀಗಿ ಪೀವರ॥ಸ್ತನಯು
ಗಮಧ್ಯದೊಳ್ ಕರವೊಡಂಬಡೆ ಜೇವೆಯ ನುಣ್ಪು ಭಂಗಿ ಮೇ। ಲೆನಿ
ಸೆ ವಧೂಟ ಪಾಡಿ ಮೆಱೆದಳ್ ನಯದಿಂ ಪ್ರಿಯನಂಕಮಾಲೆಯಂ ॥೪೨

೪. ನೈಪಥ್ಯದ ವಾಗ್ವೃತ್ತಿಯ ಕ್ರಿಯಾತ್ಮಕದ ಮಿಶ್ರಂ :—

ರೂಪಿಸಿದಾವಾಗ್ವೃತ್ತಿಯೆ।
ನೈಪಥ್ಯದ ಸತ್ಕ್ರಿಯಾತ್ಮಕಂಗಳ ಮಿಶ್ರ॥
ವ್ಯಾಪಾರದುಚಿತರಚನಾ।
ಳಾಪದೆ ಸಂಕೀರ್ಣಕಾಭಿಧಾನಮನಾಳ್ಗುಂ ॥೪೩

---

೧. ಬಳಸಿರೆಕಾಂತೆ. ಖ॥ ೨. ಸಂಕೀರ್ಣಕಾಖ್ಯಮಂ ಪ್ರಕಟಿಸುಗುಂ. ಕ॥

ಕುಡಿಮಿಂಚಂ ಮಸೆದಂತೆ ಕಾಂತೆ ಮುದದಿಂ ಕೈಗೆಯ್ದು ತನ್ನೋವ
ನಿ । ರ್ದೆಡೆಗೆಯ್ತರ್ಪುದುಮಾಗಳಾಪಸದನಂ ಕಾದಂಬರೀಪಾನದಿಂ ॥
ದೆಡೆಗೊಂಡುಕ್ತಿವಿಕಾರಮಾಶುಗಮನವ್ಯಾಸಂಗವಿಕ್ಷೇಪಮೇಂ। ಪಡೆಯು
ಲ್ಕಾರ್ತುದೊ ನೋಟ್ಪ ನೋಟಕರ ಸಾಪೇಕ್ಷಾಕ್ಷಿವಿಕ್ಷೇಪಮಂ ॥೪೪

ಮನಮನೊಲಿಲ್ಚು ನೂಪರದ ಮೆಲ್ಲುಲಿ ಕಾಂಚಿಯ ಮಂಜುಳಸ್ವನಂ।
ತನಗಿನಿದೀಯೆ ಕಂಕಣರಝಣತ್ಕೃತಮೊಪ್ಪಿರೆ ತಾರಹಾರಮೊ॥ ಯ್ಯನೆ
ಮೊಲೆಯಂ ಪಳಂಚಲೆಯೆ ರಾಗರಸಂ ಕಡೆಗಣ್ಮೆ ಬಂದು ಕಾ ॥ ಮಿನಿ
ನಯದಿಂ ಕರಂ ನಲಿದು ನರ್ತಿಸಿದಳ್ ಮಧುಪಾನಗೋಷ್ಠಿಯೊಳ್ ॥೪೫

(ಇದು ನೈಪಥ್ಯದ ಕ್ರಿಯಾತ್ಮಕದ ಮಿಶ್ರಂ)

ಸರಸಮೃದೂಕ್ತಿಗರ್ಭದರಹಾಸವಿಳಾಸಮನಾಳ್ದಿದೀಮುಖಾಂ।
ಬುರುಹಮನಂಗಜಂಗಮಲತೋಪಮಿತಂ ತನು ನೂತನಾಂಬರಾ ॥
ಭರಣವಿಲೇಪಮಂ ನೆಱೆಯೆ ತಾಳ್ದು ಮನಂಗೊಳಿಸಲ್ಕೆ ಸಾಲ್ದುದೇಂ ।
ಬರಿಸದನೇ ಸಖೀಕರಣದಿಂದವನಿಂದನಿಮಿತ್ತಬಾಂಧವಂ ॥೪೬

(ಇದು ವಾಗ್ವೃತ್ತಿಯ ನೈಪಥ್ಯದ ಮಿಶ್ರಂ)

ಮದಿರಾಪಾನವಿಕಾರದೊ ।
ಳೊದವಿರೆ ಮುಗ್ಧೋಕ್ತಿ ಕಣ್ಗೆವರೆ ಗಾಡಿ ಕದ ॥
ಕ್ಕದಿಸೆ ಮೊಲೆ ನಡುಗೆ ನಡು ಮಿಳ ।
ರ್*ದಿರೆ ಕುರುಳ್ ಸುದತಿ ಜತಿಗೆಮೆಟ್ಟದಳೊರ್ವಳ್ ॥೪೭

(ಇದು ವಾಗ್ವೃತ್ತಿಯ ಕ್ರಿಯಾತ್ಮಕದ ಮಿಶ್ರಂ)

೫. ವ್ಯಸ್ತಂ :—

ಶೃಂಗಾರರಸದೊಳನ್ಯರ ।
ಸಂಗಳ್ ಬೆರಸಿದೊಡೆ ಚತುರಚತು[೧]ಗಾನನನಿಂ ॥

---

೧. ಚತುರಾಗಮಮಂ. ಖ॥

ಸಂಗಳಿಕುಂ ವ್ಯಸ್ತಾಖ್ಯಮು ।
ಡಿಂಗಿತದಿಂದಱಿವುದವಱ ಭೇದಂಗಳುಮಂ ॥೪೮

ನೋಡಿರೆ ಗುಡರೇಕೆ ಗಡ ನಾಣ್ಬದೆ ಕೂಡುವರಿನ್ನುವೆಮ್ಮೊಳೆಂ ।
ದೇಡಿಸುವಂತೆ ಬಿರ್ದ ವೊಲೆ ಪ್ರೊರ್ಕುಱನಳ್ಳಿಱಿದಾಡುವನ್ನವೆ ॥
ದೊರ್ಡುವ ಜಗುರ್ವಿಬ್ಬ ಮುದುವೆಂಡಿರ ಭಂಗಿಯೆ ಹಾಸ್ಯಭಾವಮಂ ।
ನಾಡೆ ಮನಕ್ಕೆ ಸಂಗಳಿಸಲಾರ್ತುದು ನೋಡುವ ನೋಟಕರ್ಕಳಾ॥೪೯

ಮುಸುಕಿನ ಗಾಡಿಯಾನದುರುಶೋಭೆಯುಮೊಪ್ಪಿರೆ ನೀನೆಗೆತ್ತು
ಶಂ । ಕಿಸಜಿರುಳೊರ್ವನಂ ಪಿಡಿದೊಡಾತನಿದೇಕೆನೆ ನೋಡಿ ಬಿಟ್ಟು ಲ॥
ಜ್ಜಿಸಿ ಬರೆ ಕಂಡು ಮೇಳದೊಡನಾಡಿಗಳೆನ್ನ ಮರುಳ್ತನಕ್ಕೆ ರೂ ।
ಢಿಸಿ ನಗುವಂತುಟಾದುದು ಮನಃಪ್ರಿಯ ನೀನುಱಿದಿರ್ದ ದೂಸಱಿಂ॥೫೦

(ಇದು ಹಾಸ್ಯಶೃಂಗಾರಂ)

ಬರಿಸಿದನೆನ್ನನಿಂದು ಕವಿಕಾಮನವಂ ಮುಳಿದಂದು ತೋರ್ಪ ನಿ ।
ನ್ನರಿಪಮನಂದಿನೆಬ್ತರಮನಂದಿನ ದರ್ಪಮನಿಂದಿನೊಂದು ಚೆ ॥
ಪ್ಪರಣೆಯನಿಂದು ತೋಱಿ ಖಳ ದುಷ್ಟ ದುರಾತ್ಮಕ ದುರ್ವಿನೀತ ನಿ ।
ರ್ನೆರಮೆನಗೆಂದು ಕಾಮಿನಿ ಮನೋಭವನಂ ಕೊಱಚಾಡಿ ಕಾಡಿದಳ್ ॥

ಅನಿತಂ ಬಾರಿಪೆನೆನ್ನ ಮಾತನಿನಿಸಂ ಕೈಕೊಳ್ಳೆ ನೀಂ ನಿನ್ನ ಮುಂ।
ನಿನ ಕೂಸಾಟಮನೆಲ್ಲಿಯುಂ ಬಿಸುಡೆ ನಿನ್ನಂ ಸೈತಿಡಲ್ಬಾರದಿಂ ॥ ನಿನಿ
ಸಂ ಮಾಡದೆ ಮಾಡಿದಂತಿರೆಲವೋ ಇನ್ನೇಕೆ ಬೂತಾಟವೋ। ಪನೆಪೇ
ಱ್ನೆಲದೆ ಸತ್ತೊಡಂ ಮಱಪೆನೇ ನೀಂ ಮಾಡಿದಾಟಂಗಳಂ? ॥ ೫೨

(ಇದು ರೌದ್ರಶೃಂಗಾರಂ)

೧. ಪುಟ್ಟಿಸಿದರೊತ್ತೆಗೆ ನಿಂದವರೊಪ್ಪಿ ತೋಱಿದರ್. ಖ॥
೨. ತನಿದೇನೆನೆ. ಖ॥

ಅಯಸಂಬಟ್ಟವಳೆನ್ನ ದೂಸಱುನಿವಳ್ ನಿರ್ಬಂಧದಿಂ ತಾಯು ತಂ।
ದೆಯು ಕಣ್ಬೇಡನೆ ಬೀಡುವಾಡಿ ಮಱುಗುತ್ತಿರ್ದಪ್ಪಳೆಂಬೊಂದು ಚಿಂ॥
ತೆಯುಮಿಲ್ಲಾದುದು ನಿನ್ನ ಮೆಯ್ಯೊ[1]ಳದನಿನ್ನೇನೆಂಬೆನೀಗಳ್ಮನಃ। ಪ್ರಿ
ಯ ನೀನಲ್ಲದ ಕಲ್ಲಮಾನಿಸರುಮೇನೊಳ್ಪಂ ಮನಂಗೊಳ್ವರೇ? ॥೫೩

ಇವಳೊಳ್ಪಂ ಪೆಱತೇನೊ ಭಾವ ಬಗೆಗೊಂಡಿನ್ನೊಂದೆರಡ್ಮೂಱು ತ।
ಪ್ಪುವರಂ ಸೈರಿಸು ನಲ್ಮೆ ನಾಲ್ಮಡಿಸೆ ಕಂದರ್ಪಾಸ್ತ್ರವೈದೆಯ್ದ ನ॥
ಟ್ಟವು ಬಂದಾನತೆಯಾದಳಾಱ ನುಡಿದೇಱಿಂ ನೀಲತಾತನ್ವಿ ನಿ।
ನ್ನ ವಿಯೋಗಕ್ಕೆ ಶಿರೀಷಕೋಮಳೆ ಕರಂ ಬೆಂಬಿರ್ದು ಬೆಳ್ಕಾದವಳ್ ॥

(ಇದು ಕರುಣಶೃಂಗಾರಂ)

ಪ್ರಿಯ ನೀನೊಲ್ಲದೊಡೆಲ್ಲವಂ ಜೆಸುಗುಮಿಂತೆನ್ನಂ ಪ್ರಿಯಂಗೆಯ್ದು ನಿ।
ಶ್ಚಯದಿಂ ನೀನಿರೆ ನಾಥ ನಿನ್ನೊಡವರಲ್ ರೌದ್ರಾದಿದುರ್ಗಂ ಜಲಾ॥
ಶ್ರಯಮಾಬೆಟ್ಟದ ತೊಱಲನ್ಯವಿಷಯಂ ಪಾತಾಳಮೆಂಬೀಮಹಾ।
ಭಯಸಂದೋಹಮಿದೆಂತುಮೆನ್ನ ಮನಮಂ ಪೇ[2]ಱಂಜಿಸಲ್ಕಾರ್ಪುವೇ॥

ತಡೆದಂ ಮತ್ಪತಿ ಚೇಟಿ ಕರ್ಮವಶದಿಂದಂ ತೊಱ್ತುರಾರಾನುಮು।
[3]ಯ್ದೊಡಮೇಂಗೆಟ್ಟಪುದೆಂದು ಪೊಱ್ತುಗಳೆಯಲ್ತನ್ನಱ್ತಿಯಿಂದಿರ್ದನ॥
ಪ್ಪೊಡೆ ಕೇಳೊಂದನೆ ಪ್ರೋಪಿನಿರ್ದೆಡೆಗೆ ನಲ್ಲಳ್ನೋಡೆ ನಾಲ್ಕೈ[4]ದು
ಸೂ। ಱಡಗಾಲಿಂದೊದೆದೀಳ್ದು ತರ್ಪೆನುಱದಂದಾತೊಱ್ತುವೇಂಗಾ
ಣಳೇ ? ॥೫೬

(ಇದು ವೀರಶೃಂಗಾರಂ)

ಇನಿಯನೊಳೆಚ್ಚುಱಿಂ ನೆರೆವ ಭಂಗಿಗಳಂ ಪೆಱ*ಗಿಂತುಟೆಂದವಂ।
ನೆನೆನೆನೆದೆಯ್ದೆ ಪೇೞ್ವರವರೇಂ ಮತಿವಂತೆಯರಕ್ಕ [5]ಕೂರ್ತನ ॥

---

೧. ಪೋಂ ಮುಯ್ಯಲ್ಮನಂ. ಕ॥ ೨. ಸಲ್ಸಾರ್ಗಮೋ. ಖ॥
೩. ಯ್ದರದೇಂ. ಕ॥ ೪. ಬೆಂಗಾಣಳೇ. ಕ॥ ೫. ಸೈತು. ಕ॥

[1]ಲ್ಲನೊಳೊಡಗೂಡುವಾಗಳೆನಗಂ ನಿಱಿ ಮುನ್ನವೆ ಬಿಟ್ಟು ಪೋಪುದೆಂ ।
ಬಿನಿತನೆ ಬಲ್ಲೆನಾನಱಿಯೆನಂದೆನಗಾದ [2]ರತಿಪ್ರಪಂಚಮಂ ॥೫೭

ಎಸಕಂ[3]ಚೆತ್ತ ಮತಿಪ್ರಕಾಶಮದನಿನ್ನೇನೆಂದಪೆಂ ಚೇಟಿ ನಾ ।
ಲ್ದೆಸೆಯೊಳ್ನಾಲ್ವರ ಕಂಠದೊಳ್ಬರೆಯೆ ಕಬ್ಬಂಬೇಳ್ವನೊಲ್ದತ್ತಲಾ ॥
ಡಿಸುವಂ ನೆತ್ತಮನಿತ್ತಲೋಡಿದೊಡೆ ತಪ್ಪಂ ಪೇೞ್ದುದುಂ ತಿರ್ದಿಯಾ ।
ಲಿಸುವಂ ಗೀತಮನೆನ್ನುವಂ ಸಗಿಸುವಂ ಶೃಂಗಾರರತ್ನಾಕರಂ ॥೫೮

(ಇದು ಅದ್ಭುತ ಶೃಂಗಾರಂ)

ಎನಿತಾನುಂ ಪುಣ್ಯದಿಂದಂ ಕೆಳದಿ ಬ*ರ್ದುಕಿದೆಂ ನೋಡ ನೀಡಿಲ್ಲದಿಂ
ದೆ। ನ್ನಿನಿಯುಂ ಕಾರುಣ್ಯದಿಂ ಬಂದೆನಗೆ ತಿಳಿದನೆತ್ತಾ[4]ನುಮಿಂತಿದೊರ್
ಡಂ ಬಾ ॥ ಳೆನಗಿಂನೆಂತೆಲ್ಲಿತೋ ಕೇಳುದಯಿಸಿದೊಡೆ ಸಂಭಿನ್ನಗಂಧೋ
ತ್ಪಳಾಂಭೋ । ಜನಿರಸ್ತೋದಗ್ರವಾರ್ಧಿಕ್ಷುಭಿತಕರಜಗದ್ಬಂಭುಕಂ
ಚಂದ್ರಬಿಂಬಂ ॥೫೯

ಇನಿತಂ [5]ಪೇಳ್ಕುವಿಕಾಮದೇವ [6]ನಿನಗಿನ್ನೇನೆಂಬೆನಾ[7]ನಾಸುಕಾ ।
ಮಿನಿ[8] ನೀಂ ಕೇಳುಱಿದಂದಿನಿಂದಿನೆಡೆಯೊಳ್ಬಳ್ದಂಗಳಂ ನೋಡಿ ಕಾ ॥
ಮನ ಕಾಳ್ಕುರ್ಚಿದುವೆಂದು ತಲ್ಲಣಿಸುವಳ್ತಂಗಾಳಿಯುಂ ಕಾಮದೇ ।
ವನ ಪುಷ್ಪಾಸ್ತ್ರದ [9]ಪೊಂಗುಗೆತ್ತು ಸುಗಿವಳ್ತನ್ವಂಗಿ ಸಂಮೋ
ಹದಿಂ ॥೬೦ (ಇದು ಭಯಾನಕ ಶೃಂಗಾರಂ)

ನೆನೆದೊರ್ವಳ್ ಕವಿಕಾಮನಂ ಪಸಿವುಮಂ ನೀರಳ್ಕೆಯುಂ ಬಿಟ್ಟು
ಚಂದ್ರನನಾಳೋಕಿಸದೊಯ್ಯನೂದುವೆಲರ್*ಗಂ ಮೆಯ್ಯೊಡ್ಡದುದ್ಭಲಂ

೧. ನಲ್ಲನ ತನುಸೋಂಕುವಾ. ಕ॥ ೨. ರತಾಂತರಂಗಮಂ. ಕ॥
೩. ಚಿತ್ರ. ಕ॥ ೪. ಮಂತಿದೊರ್ಡಂ ಬಾ॥ ಳೆನಗಂತೆಲ್ಲಿತೋ ಕೇಳುದಯಿಸಿದೊಡೆ. ಕ॥
೫. ಕೇಳ್ವವಿ. ಕ॥ ೬. ಪೆಱತಿ. ಖ॥ ೭. ವಾರ. ಕ॥ ೮. ತಾಂ ನೀನುಂ. ಕ॥
೯. ಸೋಂಕಿಗೆಂತುಸುಳಿವಳ್. ಖ॥

ಗಸಿಂ ॥ ಜಿನಿನಾದಂಗಳನೇನುಮಾಲಿಸದೆ ಪುಷ್ಪಾಮೋದಮಂ ಕೊಳ್ಳ
ದಂ । ಗನೆ ಪಂಚೇಂದ್ರಿಯನಿಗ್ರಹವ್ರತ[೧]ವಿಧಾನವ್ಯಾಪ್ತಿಯಂ ತಾಳ್ದ
ದಳ್ ॥ ೬೧

ಉಡುಗಿದುದು ಪೊಡರ್ವ* ನಿಡುಸುಯ್ ।
ಕಡೆಗ[೨]ಣಿಸಿರ್ದ ತನು ಕೆದಱ [೩]ಚೆದಱದ ಮನಮೊಂ ॥
ದೆಡೆಗೆ ತೆರಳ್ದುದು[೪] ನಲ್ಲನ ।
ನುಡಿಯೆಂಬಮೃತಾಂಬುಸೇಕದಿಂ ಸತಿಗಾಗಳ್ ॥ ೬೨

(ಇದು ಶಾಂತಶೃಂಗಾರಂ)

[೫]ಇಂತೆಲ್ಲವನುಕ್ರಮದಿಂ ।
ದಂ ತಿಳುಪಿದೆನೈದು ತೆಱದ ಶೃಂಗಾರವಿಕ ॥
ಲ್ಪಾಂತರಮನಿತ್ತಲಱಗೆ ನಿ ।
ತಾಂತಂ ಹಾಸ್ಯಾದಿರಸವಿಭಾಗಾಂತರಮಂ ॥ ೬೩

[೬]ಪ್ರಕಟಂ ತಾಂ ಹಾಸ್ಯರಸ ।
ಪ್ರಕಾರಮದು ಮೂಱು ತೆಱದಿನೆಸೆಗುಂ ರಸಭಾ ॥
ವಕರಱದು ಕೊಳ್ಗೆ ವಾಗ್ರೂ ।
ಪಕಕ್ರಿಯಾಖ್ಯಪ್ರಪಂಚಸಂಚಿತವಿಧಿಯಿಂ ॥ ೬೪

[೭]ನುಡಿಯುಚ್ಚಾರಣೆ ಭಾವಸಿ ।
ನುಡಿಯದೆ ನಿಜದಿಂದಮಱಿಪೆ ರೂಪಕಮೆನಿಕುಂ ॥
[೮]ಒಡನೊಡನೆ ಮಾಡಿ ತೋರ್ಪೊಡೆ ।

---

೧. ನಿಧಾನ. ಕ॥　೨. ಸಿದನತನು. ಕ॥ಖ॥　೩. ಬೆದರಿ. ಖ॥
೪. ವೃತಾಭಿಷೇಕದಿಂ. ಖ॥　೫. ಅಂತಿಲ್ಲದ. ಕ॥　೬. ಪ್ರಕಟಶ್ರೇಷ್ಠಾಷ್ಟ. ಖ॥
೭. ನುಡಿದಭಿನಯಿಸಲ್ಭಾವನೆ. ಖ॥　೮. ಬಿಡದೊ. ಖ॥

ಪಡೆಗುಂ ಜನದಿಂ ಕ್ರಿಯಾಭಿಧಾನೋನ್ನತಿಯುಂ ॥೬೫

ಪರಿಹಾಸಹೇತುಭಾವನೆ ।
ದೊರೆಕೊಳೆ ಚಿತ್ತಕ್ಕೆ ಹಾಸ್ಯಮೆಂಬ ರಸಂ ತಾಂ ॥
ಸರಸೋಕ್ತಿಗಳಿಂದಮುದಾ ।
ಹರಿಪೆಂ ಶೃಂಗಾರನೀತಿರತ್ನಾಕರದೊಳ್ ॥೬೬

ವಿಟನೆನ್ನೊಳ್ಮ್ಕಳಿದಿರ್ದನೆಂದು ಬಗೆದಾಂ ಮತ್ಕಾಂತಚಿಂತಾತಿಸಂ ।
ಕಟಿಯಾಗಿರ್ದೊಡೆ ಮಾಣ್ಬುದೀಕಲುಷಮಂ ನೀನೆಂದು ಸಂಭೋಗಗ
ಲಂ ॥ ಪಟನೇಟ್ಟಿಂದಿರದೆನ್ನ ಕಾಲ್ವಿಡಿಯೆ ಕಂಡಾನೆತ್ತಿ ಮೆಟ್ಟಿತ್ತಿ ಚ ।
ಪ್ಪಟಿಯಾಯ್ತೆಂದುಜ಼್ ನಕ್ಕನೆನ್ನಮನದೊಳ್ಪಂಕೇಜಪತ್ರೇಕ್ಷಣೇ ॥

(ಇದು ವಾಗ್ಹಾಸ್ಯಂ)

ದರಹಾಸಹಾಸ್ಯಕೇಳೀ ।
ಪರಿಣತಿಯೊಳ್ ಯುವತಿವದನವಿಧುದೀಪ್ತಿಗಳೇಂ ॥
ಪರಿಭವಿಸಲ್ನೆಱದಿರ್ದುವೊ ।
ಖರಕರಕರದಳಿತವೆನಿಪಕಮಲಾಕರಮಂ ॥೬೮

(ಇದು ರೂಪಹಾಸ್ಯಂ)

ಮರುಳುರಿಯುತ್ತಿಮಿರ್ಪ ಪೆಣದೊಳ್ಣೆಣನೆಂದು ಕನಲ್ವ ಕೆಂಡಮಂ ।
ತುರಿಪದೆ ನುಂಗಿ ಸೈರಿಸಿರಲಾಱದೆ ತಿಟ್ಟನೆ ಬಂದು ಗಂಟಲಂ ॥
ಕೆರಕೆರದುಃಪೆನುತ್ತೆ ಬಸಿಱಂ ಪೊಸೆದುಬ್ಬರವೊಳ್ಬು ಸುತ್ತಲುಂ ।
ಪರಿದು ಬೆರಲ್ಗಳಂ ಬಿದಿರ್ದು ಪಾಱುಕರಂ ನಗಿಸಿತ್ತು ನೋಟ್ಪರಂ॥೬೯

(ಇದು ಕ್ರಿಯಾಹಾಸ್ಯಂ)

---

೧. ಹಾಸ್ಯಮೆಂಬರದಂ. ಖ॥ ೨. ನೆನ್ನಂ ತಿಳಿಸಲ್ಕೆ. ಖ॥
೩. ಯಂತಾಗಳೆ. ಖ॥ ೪. ಕರಗಳಿತಲುಳಿತಕಮಲಾಕರಮಂ. ಖ॥
೫. ಪೆಟ್ಬು. ಖ॥

ಇದು ಹಾಸ್ಯರಸದ ತೆಱನೆಂ ।
೧ಬುದನಱಿಪಿದೆನಱಿಗೆ ಬೞಿಕೆ ವಿದ್ವತ್ಪ್ರಕರಂ ॥
ವಿಹಿತಂ ಕೋಪಂ ಚಿತ್ತದೊ ।
ಳೊದವಿದೊಡೆ ರೌದ್ರಮೆಂಬುದಿಂತಿದೞ ತೆಱಂ ॥೨೦

ಉಱದೆನ್ನಂ ಮಾಯೆಯಿಂ ಬಂಚಿಸಿ ಮಹಿಜೆಯನೆಂತೊಯ್ದನೊ ೨ಯ್ದಂದದಿಂ ಪ್ರೊ। ಚ್ಚಱಿದಿನ್ನುಂ ತೋರ್ಕೆ ಸಂಗ್ರಾಮದೊಳೆಡೆಗಡಿದಾ ತೋಳ್ಗಳೀರ್ಪತ್ತುಮಂ ಮುಂ॥ ದುಱಿ ಕಣ್ಬೋತರ್ಪಿನಂ ಪಂದಲೆಗಳ ನೆರ್ದೆಯಂ ಮೆಟ್ಟಿ ಚಿಳ್ಕೀಳೆನಲ್ಬೆ। ೞ್ಕಿಱುವನ್ನಂ ಕಿೞ್ತು ಕಿೞ್ತಪ್ಪ ೞಿಸಿ ನೆಲದೊಳೋರೊರ್ಮೆ ಮಾೞ್ಪೆಂ ತೋರ್ಪೆಂ ॥೨೧
(ಇದು ವಾಗ್ರೌದ್ರಂ)

ಸ್ಫುಟಕೋಪಾಟೋಪನೇತ್ರಸ್ಫುರದರುಣತರತಾಂರನುಚ್ಛ್ವಾಸ ನಾಸಾ। ಪುಟನಾದಂಷ್ಟ್ರೋಗ್ರನುದ್ಯದ್ಭ್ರುಕುಟಕುಟಿಳಭಾಳಸ್ಥ ಳಂ ಸ್ವೇದಬಿಂದೂ ॥ ತ್ಕಟಗಂಡಸ್ಥಾನನುಜ್ಜೃಂಭಿತಭುಜಶಿಖರಂ [ಘುರ್ಘುರೀ]ಭೂತನಾದೋ। ತ್ಕಟಕಂಠಂ ಭೈರವಾಡಂಬರಮನಿಱಿಸಿದಂ ಯುದ್ಧದೊಳ್ಸಾರ್ವಭೌಮಂ ॥೨೨		(ಇದು ರೂಪರೌದ್ರಂ)

ತಳಮಂ ಮಾಱಿದ್ದಿ ಧಾತ್ರೀತಳದೊಳರಿಮಹೀನಾಥವಿಖ್ಯಾತಚಾ ತು। ರ್ಬಳಮಂ ಬಂದೆಯ್ದೆ ಮುಂ ಕಣ್ಗೊಳೆ ಕಲುಷದೆ ತಾಂ ಪೀರ್ವ ವ್ರೋಲ್ಪೋಡಿ ಬಾಹಾ ॥ ಬಳದಿಂ ಕಾಲಾಳನಾಳಿಂದೊರಸಿ ತುರಗಮಂ ತತ್ತುರಂಗಂಗಳಿಂ ಪ್ರೊ। ಯ್ದಳವಿಂದಾದಂತಿಯಂ ದಂತಿಯೊಳೆ ಪೊಡೆ ದು ಪೇಸೇೞಿ ಕೊಂದಂ ಮುಕುಂದಂ ॥೨೩	(ಇದು ಕ್ರಿಯಾರೌದ್ರಂ)

---

೧. ಬುದನಿಂಬಾಗಱಿವುದಱಿತತದನಂತರದೊಳ್. ಖ॥
೨. ಯ್ದಂದಮಂಪೆಚ್ಚರನಿನ್ನುಂ. ಖ॥	೩. ಮಾಱುದ್ದ. ಖ॥
೪. ವಿಸ್ಫಾರನಾಸಾ. ಕ॥

ಅಱುಪಿದೆನೀಲೆಱದಿಂದಂ ।
ನೆಱ ರೌದ್ರರಸಪ್ರಪಂಚಮಂ ಪಂಡಿತರಿ ॥
ನ್ನಱುವುದು ಕೃಪಾನುಗತಮದು ।
ತಱಸಂದಿರೆ ಚಿತ್ತದಲ್ಲಿ ಕಾರುಣ್ಯರಸಂ ॥೨೪

ಸಮದೇಭಾಳಿಗೆ ತೋರ್ಪ ತನ್ನ ಮುಳಿಸಂ ಬಾಳೇಭಸಂಘಕ್ಕೆ ತೋ । ರ್ಕುಮೆ ಸಿಂಹಂ ನರನಾಥ ತೋರ್ಪುದೆ ಸಮಂತೆಮ್ಮೊಂದಿ ಗರ್ಗಾತ್ಮವಿ ॥ ಕ್ರಮಮಂ ಸೋಲದೆ ಬಂದು ಕೊಳ್ವ ತಲೆಯಂ ತುಂಬಿತ್ತೆ ವೆಮ್ಮುಮ್ಮಳ್ವ ವಿ । ತ್ತಮುಮಂ ಕೊಳ್ ಪರಿರಕ್ಷೆಗೆಯ್ ಕರುಣದಿಂದೆಮ್ಮಂ ಬಲಕ್ಷೀಣರಂ ॥ ೨೫ (ಇದು ವಾಕ್ಯಕಾರುಣ್ಯಂ)

ಅಳುರ್ದ*ೀಬಾಲೆಯನಿಂತು ಸುಟ್ಟು ತವಿಸಲ್ಸಾಲ್ಗುಂ ವಿಯೋಗಜ್ವರ। ಜ್ವಳನಾಭೀಳಕೃಶಾನುವೊಂದೆ ಬಱಕಂ ಗಂಡೋಪರಿಸ್ಫೋಟಕಾ ॥ ಕುಳಮೆಂಬಂದದಿನೇಕೆ ನಿಷ್ಕರುಣದಿಂದೀತನ್ವಿಗೀಚಾರುಕೋ । ಮಳೆಗೀಮುಗ್ಧೆಗೆ ನೀನಿದೇಕೆ ತುಡುವೈ ಪುಷ್ಪಾಸ್ತ್ರ ಪುಷ್ಪಾಸ್ತ್ರವಂ? ॥೨೬ (ಇದು ರೂಪಕಾರುಣ್ಯಂ)

ದೆಸೆಗಳ್ಮಾರ್ದನಿವೋಗೆ ಕೇಳ್ವರೆರ್ದೆ* ಬಾಳಂ ಬೀಸಿದಂತಾಗೆ ತೆ । ಳ್ವಸಿಱಂ ದೊಪ್ಪನೆ ಪೊಯ್ದು ಬಾಯಬಿದು ಹಾಯೆಂದೞ್ತು ಬೆಳ್ಕು । ತ್ತಿರ್ದ ದೂ ॥ ಱಸಲಾಕಾಂತೆಯ ನೋಡೆ ತಾನಹಹ ! ನಿಸ್ತ್ರಿಂಶಂ ದಶಾ ಸ್ಯಂ ವಿಗು । ರ್ವಿಸಿ ನೋಡುತ್ತುಮದೆಂತು ನಿಷ್ಕರುಣದಿಂದುಯ್ಯಲ್ಕನೆಂದಂದನೋ ! ॥೨೭ (ಇದು ಕ್ರಿಯಾಕಾರುಣ್ಯಂ)

ಕಾರುಣ್ಯರಸಮನಿಂತು ಗ ।
ಭೀರೋಕ್ತಿಗಳಿಂದಮೆಯ್ದೆ ತಿಳುಪಿದೆನಿತ್ತಲ್ ॥

---

೧. ನೈದೆ. ಖ॥

ಸೂರಿಜನಮಱಿಗೆ ಚಿತ್ತೋ |
ದಾರೋತ್ಸಾಹಾನುಭಾವಮದು ವೀರರಸಂ ‖೭೮

ಉಪಮೆಗೆ ಪೊಱಗೆನೆ ನಿನಗಾಂ |
ತ ಪಗೆವರೊಡ್ಡಣದೊಳರಸನಾಣೆ ಮದಾಂಧ ‖
ದ್ವಿಪಘಟೆಯನಿರಿವೆನೀಕ |
ಣ್ಣ ಪಾಪೆಯುಂ ಕಯ್ಯ ನರಮುಮುಳ್ಳನ್ನೆವರಂ ‖೭೯

(ಇದು ವಾಗ್ವೀರಂ)

ಪರಿಕಲಿತಕವಚಶಸ್ತ್ರೋ |
ದ್ಧುರಗಾತ್ರಂ ವೀರರಸಮನಾವರಿಸಿದನೀ ‖
ಧುರದೊಳ್ವಿಭು ಮುಂ ತ್ರಿಪುರವ |
ನುರಿಪಲ್ಸನ್ನದ್ಧನಾದ ರುದ್ರನ ತೆಱದಿಂ ‖೮೦

(ಇದು ರೂಪವೀರಂ)

ಕೆಡೆದರನಿರಿಯದೆ ಸೆಡದರೊ |
ಳೊಡರದೆ ತೊತ್ತರ್ಪವರೊಳರಿದು ಬಿರ್ದಲಗಂ ಕೊಳ್ ‖
ಪೊಡಕಲಿಸೆನುತ್ತುವೊರ್ಬಂ |
ಕಡುಗಲಿ ಪಗೆವಡೆಯನಿರಿದು ತವಿಸಿದನಾಗಳ್ ‖೮೧

(ಇದು ಕ್ರಿಯಾವೀರಂ)

ಇದು ವೀರರಸದ ತೆಱನೆಂ |
ಬುದನಿಂಬಾಗಱಿವುದಱದ ತದನಂತರದೊಳ್ ‖
ಪದೆದು ವಿಭಾವಿಸುವುದು ಚಿ |
ತ್ತದೊಳನುಗತವಾದ ವಿಸ್ಮಯದಿನದ್ಭುತಮಂ ‖೮೨

ಸಿಡಿಲೆಱಪಂದದಿಂದೆಱಗಿ ಪೊಯ್ಯೊಡೆ ಬಾಳೊಳೆ ಸೀಳ್ದು ಪಾಱೆ ಬಿ |
ರ್ದೊಡೆದು ಸಿಡಿಲ್ದುರುಳ್ದ ತಲೆ ಮೂಢಲೆಯಾಗಿರೆ ಪರ್ಚಿಬಿರ್ದ ಪೆ ‖

೧. ಪೊಕ್ಕಡಕಲಿಸೆ, ಕ‖　೨. ತುತ್ತು, ಕ‖　೩. ನದಿಲ್ದು. ಕ‖

ದೊರ್ಡೆ ತೊಡೆಸೆಕ್ಕೆಯಾಗಗಿದು ಕೆತ್ತುವ ಪುಣ್ಗಳ ಬಾಯ್ಗಳೇಱುವು ।
ಘ್ಘಡಿಸುವ ಬಾಯ್ಗಳಾಗಿರೆ ಕಱುತ್ತಿರಿವೆಂ ನೃಪಸೈನ್ಯಮುಂ ನೃಪಾ॥

(ಇದು ವಾಗದ್ಭುತಂ)

ಭಯವನವಯವದಿನವಯವ ।
ವೆ ಯಥಾರ್ಥಂಮಾೞ್ಪುದೀದಶಗ್ರೀವನ ದು ॥
ರ್ಜಯಮಪ್ಪ ರೂಪಮದು ವಿ ।
ಸ್ಮಯಮಂ ಪುಟ್ಟಿಸದೆ ಸಮರಸಮಯದೊಳಾರ್ಗಂ ॥೮೪

(ಇದು ರೂಪಾದ್ಭುತಂ)

ಮನಮುಂ ದಿಟ್ಟಿಯುಮೆಯ್ದದಂಬುನಿಧಿಯಂ ಮುಂ ದಾಂಟಿದಂ ದಾಂಟಿ ಮ । ದ್ವನಪಾಲರ್ಕಳನಿಕ್ಕಿ ಕೂಡೆ ವನಮಂ ಕಿೞ್ತಿಕ್ಕಿದಂ ಕಿೞ್ತಿಮೊ ॥ ರ್ವನೆ ಪಾೞೀೞ್ವನವೊಂದೆ ಕೊಳ್ಳಿಯೊಳೆ ಸುಟ್ಟಂ ಲಂಕೆಯಂ ಚೋದ್ಯಮೆಂ । ದೆನಸುಂ ವಿಸ್ಮಯಮುತ್ತು ಮಾರುತಿಯನಾಲಂಕೇಶ್ವರಂ ಮೆಚ್ಚಿದಂ ॥೮೫

(ಇದು ಕ್ರಿಯಾದ್ಭುತಂ)

ಅತಿಶಯಮೆಂಬಿನಮಿಂತ ।

---

೧. ನಿಬ್ಬರಮೆಚ್ಚೊಡಂಬು ನಡೆ ಜಾಳಿಗೆವೋಗಿರೆ ಮೆಯ್ಬರಾಸಿಯಿಂ ।
ದುಬ್ಬರಮೆತ್ತಿ ಪೊಯ್ಯೆ ತಲೆ ಪಾಱಿ ಧರಿತ್ರಿಗೆ ಬೀೞಲಾನದಂ ॥
ಟಬ್ಬರಿಸುತ್ತೆ ಪೊಯ್ದಱಿಸಿ ತಂದದನಟ್ಟೆಯೊಳಿಟ್ಟಮರ್ಚೆ ಮ ।
ತ್ತುಬ್ಬರಮಾಗಿ ಕಾದುವೆನಿದೆನ್ನಯ ಪೂಣ್ಕೆ ಧರಾಧಿನಾಯಕಾ ॥

ಈ ಶ್ಲೋಕವೂ ಗ॥ ಪುಸ್ತಕದಲ್ಲಿ ವಾಗದ್ಭುತಕ್ಕೆ ಉದಾಹರಣೆಯಾಗಿ ಕೊಟ್ಟಿದೆ.

೨. ಸಕಲುಷದಿಂ ವಿರೋಧಿಬಲಮೊರ್ಮೆಯೆ ನೂಂಕಿದೊಡಂಕೆಗೊಂಡು ನಾ ।
ಯಕರ ತುರಂಗಮಂಗಳನೆರಳ್ಕಿಡಿಮಾಡಿ ತದೀಯತೀಕ್ಷ್ಣಸಾ ॥
ಯಕಮಹಿತಾಶ್ವಮೊಂದೆರಡು ಕೋಲೊಳೆ ಬೀೞದೆ ಪೋೞೆ ಮೆಟ್ಟಿ ತೀ ।
ತಕಿಮರಿದಾಂತ ವಿಸ್ಮಯಮನಾಗಿಸೆ ಸಂಗರರಂಗಭೂಮಿಯೊಳ್ ॥

ಈ ಶ್ಲೋಕವೂ ಕ್ರಿಯಾದ್ಭುತಕ್ಕೆ ಗ॥ಪುಸ್ತಕದಲ್ಲಿ ಉದಾಹರಣೆಯಾಗಿ ಕೊಟ್ಟಿದೆ.

ದ್ಭುತವಿದಿತರಸಪ್ರಪಂಚಮಂ ತಿಳಿಪಿದೆನಿ॥
ನ್ನತಿನಿಪುಣರ್ಱಿಗೆ ಭಾವ।
ಪ್ರತೀತಿಯುಂ ಕುತ್ಸಿತೋಕ್ತಿಯೊಳ್ಬೀಭತ್ಸಂ ॥೮೬

ಮಱಿದಾಗುಳಸಲ್ಬಾಯ್ಯಂ।
ತೆಱಿಯುಲೊಡಂ ಪ್ರೊಣ್ಮುತಿರ್ಪವೋದ್ಯದ ಕಂಪಿಂ॥
ನೆಱಿವಿಕೆರ್ಗವುವನ ಬಾಯ್ಯೆಂ।
ತೆಱಗುವನೆಮ್ಮಬ್ಬ ಪೋಗೆ ನೂಂಕುವಳೆನ್ನಂ ॥೮೭

(ಇದು ವಾಗ್ಬೀಭತ್ಸಂ)

ಕೊಳೆ ನಾಱುತ್ತಿರ್ಪ ಪುಣ್ಗಿಂದೆಱಗಿ ಮುಸುಱಿ ಝುಂಝುಂಮೆನು ತ್ತುಂ ನೊಳಂಗಳ್।ಸುಱಿದಾಡಲ್ಪುಣ್ಣ ಬಾಯಿಂ ಪುಱುವಿರಿವಿರಿಯೆಂ ದುರ್ಕೆ ನಾಯಾಗಿ ಕಣ್ಗೆ॥ಟ್ಟೊಳಱುತ್ತುಂ ಕಾನನಾಭ್ಯಂತರದೊಳರ ದೆ ಸುತ್ತುಂ ಬರುತ್ತಿರ್ಪ ತನ್ನೊಂ। ದಳವಂ ಶೌಂಡೀಕನೀಗಳ್ ವೆಱಿದನೆ ಖಳನೆನ್ನೀಪಳಂ ಕೊಂಡು ಪೋದಂ॥೮೮

(ಇದು ರೂಪಬೀಭತ್ಸಂ)

ಪರಿವರುಣಜಲಧಿನುಣ್ಮುವ।
ಕರುಳಂ ಚಿಮಿಚಿಮಿಸುತಿರ್ಪ ಕೋಱಿಮುದುಳಂ ಸಂ॥
ಗರರಂಗವಾವಗಂ ಕೊ।
ಕ್ಕರಿಕೆಯನಾಗಿಸದದಾರ ಕಣ್ಗಂ ಮನಕಂ?॥೮೯

(ಇದು ಕ್ರಿಯಾಬೀಭತ್ಸಂ)

ಸರಸೋಕ್ತಿಯಿಂದೆ ಬೀಭ।
ತ್ಸರಸಮನಱಿವಂತೆ ಪೇೞ್ದೆನಿನ್ನಱಿಗೆ ಬುಧರ್॥

೧. ಪುತ್ತುಂ. ಕ॥　　　೨. ಮರದೆನೆ. ಕ॥

ಪರಿಭಾವಿಸೆ ಚಿತ್ತಮನಾ ।
ವರಿಸಿದ ಭಯದೊದವಿನಿಂ ಭಯಾನಕರಸಮಂ ॥೯೦

ಬೇಡ ಮುಳಿಸಱಿದು ತಿಳಿದೊಡ ।
ಗೂಡೋವನೊಳಕ್ಕ ಕೂಡದಂದಿಂದು ಕರಂ ॥
ಮೂಡುಗುಮಿರುಳಂಗಾಲೊಳ್ ।
ಮೂಡಿದ ಕಿರ್ಚೆಯ್ದೆ ನೆತ್ತಿಯೊಳ್ಮೂಡುವಿನಂ ॥೯೧

(ಇದು ವಾಗ್ಭಯಾನಕಂ)

ತೊಡರ್ದ*ರಿಸೇನೆ ತೞ್ತರಿಯೆ ಕಾದಲುಮಣ್ಮದೆ ಬಟ್ಟೆಗೆಟ್ಟು ಮು। ಳ್ಗಿಡುಗಳನೋಡಿ ಪೊಕ್ಕುಗಿಡು ಸೋಂಕಿದೊಡೆಟ್ಟೆದೆ*ಗುರ್ಚಿ ಮೇ ಲುದಂ॥ ಪಿಡಿದೊಡೆ ಮೇಲುದಂ ಬಿಸುಟು ತಲ್ಲಣದಿಂ ತೊಡೆ ಸೇಡುಗೊಂ ಡು ಪ। ಲ್ಗಿಡಿಗಿಱಿದಿರ್ದ ಪಂದೆ ನೆಱೆ ಸೂಚಿಸಿದಂ ಭಯಮಂ ಮಹಾಜಿ ಯೊಳ್ ॥೯೨ (ಇದು ರೂಪಭಯಾನಕಂ)

ಮಿದುಳಂದಣ್ಪಿಕ್ಕಿ ಬಂಬಲ್ಗರುಳ ಪಿಣಿಲ ಪೂವಮಾಲೆಯಂ ಸೂಡಿ ನೆತ್ತ। ರ್ಪು(?)ವಿವೆತ್ತಂ ತೋರ್ಪ ಪಂದೋವಲ ನಿಱಿವಿಡಿದುಟ್ಟೞ್ತ ಯಿಂ ಶುಕ್ತಿಯೊಳ್ತಂ॥ ವಿದ ಕೀಲಾಲಾಂಬುವಂ ಕಣ್ತುಮುಳೆ ಪದಪಿ ನಿಂದೀಂಟ ಪಾರ್ದೈಸಿ ಕೈಗ। ಣ್ಮದ ರಾಗೋದ್ರೇಕದಿಂದಾಡುವ ದನುಜೆ ಭಯಭ್ರಾಂತಿಯಂ ಮಾಡಲಾರ್ತಳ್ ॥೯೩ (ಇದು ಕ್ರಿಯಾಭಯಾನಕಂ)

ಭಯರಸದಂದಮನಿಂತನು ।
ನಯದಿಂದಱಿಪಿದೆನಶೇಷಮಿನ್ನಱಿಗೆ ಬುಧರ್ ॥
ನಿಯತಂ ಭಾವಿಸೆ ಚಿತ್ತ ।
³ಪ್ರಯುತಸಮಾಧಾನಮದುವೆ ತಾಂ ಶಾಂತರಸಂ ॥೯೪

---

೧. ಮುಂಭಟನೊರ್ವನೆ.ಕ॥ ೨. ಮಾನರಿಗೆ.ಕ॥ ೩. ಪ್ರಿಯಸದಯಾದಾನ.ಕ॥

ಹರಚರಣಕಮಲಮಕರಂ ।
ದರಸಾಸ್ವಾದನಸುಖಕ್ಕೆ ಮೊಗಸದೆ ವಿಷಮೋ ॥
ದರವಿಷಮವಿಷಯಸೌಖ್ಯೋ ।
ತ್ಕರಕ್ಕೆ ವಿಬುಧಾಳಿಯಿಂತು ಪೊಕ್ಕೆಳಸುಗುಮೋ! ॥೯೫

(ಇದು ವಾಕ್ಯಾಂತಂ)

ಅವಿಕಾರರೂಪನ್ಯೆಯಭಿ ।
ನವಸದಯಾದಿಪ್ರಸನ್ನಮಧುರಾಳಾಪ ॥
ವ್ಯವಸಾಯನೈ ನೃಪೋತ್ತಮ ।
ಭುವನದೊಳೀನಿನ್ನ ವೃತ್ತಿ ಶಾಂತಾಧಾರಂ ॥೯೬

(ಇದು ರೂಪಶಾಂತಂ)

ಕ್ರೂರಮೃಗಂಗಳ್ ಶಾಂತಾ ।
ಧಾರಮನಾಳ್ದಪ್ಪುವೀನಿಜಾಶ್ರಮದೊಳ್ ಸಂ ॥
ಸಾರನಿವೃತ್ತಿಯದೇಂ ಸಾ ।
ಧಾರಣಭಾವಮೆ ಭವತ್ತಪೋಮಾಹಾತ್ಮ್ಯಂ ? ॥೯೭

(ಇದು ಕ್ರಿಯಾಶಾಂತಂ)

ಕ್ರಮದಿಂದಮಿಂತು ನವರಸ ।
ದ ಮಾರ್ಗಮಂ ತಿಳಿಯೆ ಪೇಳ್ದೆನೆನ್ನಱಿವನಿತಂ ॥
ಸಮಸಂದಿದನಱಿವಾತಂ ।
ಸಮಸ್ತವಿಷಯಾಧಿಕರಣಕೋವಿದನಕ್ಕುಂ ॥೯೮
ಬೆರಸದಣಮಿರ್ಕೆ ಶೃಂಗಾ ।
ರರಸಂ ಬೀಭತ್ಸದೊಳ್ಭಯಂ ರೌದ್ರದೊಳಾ ॥
ಕರುಣಾರಸದೊಳ್ವೀರಂ ।
ಪರಿಹಾಸದೊಳದ್ಭುತಂ ವಿರೋಧವಿದೆಂತುಂ ॥ ೯೯

೧. ಭಾವನೆ. ಕ॥

ಶಾಂತರಸಮೆಂಬುದದು ಚೈ।
ರಂತನರಸಕಾರಶಾಸ್ತ್ರಸಮ್ಮತಮಲ್ಲಂ॥
ಅಂತುಮದಂ ಬೆರಸುವೊಡೆ ನಿ।
ತಾಂತಂ ಕವಿಮುಖ್ಯರಱಿದು ಬೆರಸುಗೆ ರಸದೊಳ್ ॥೧೦೦

ಮುದದಿಂ ಶೃಂಗಾರಮುದ್ಯತ್ಪ್ರಹಸನವಿಧಿಯಿಂ ಹಾಸ್ಯಮಾಕ್ಷಿಪ್ತ ಕೋಪಾ। ಸ್ಪದದಿಂ ರೌದ್ರಂ ಕೃಪಾರ್ಥೋಕ್ತಿಯೊಳೆ ಕರುಣಮು ತ್ಸಾಹದಿಂ ವೀರಮಾಚೋ॥ದ್ಯದ ಪೆರ್ಚಿಂದದ್ಭುತಂ ಕುತ್ಸಿತದೊ ಗಡಿಕೆಯಿಂದೈದೆ ಬೀಭತ್ಸ• ಹೃತ್ಪ। ದ್ಮದೊಳುದ್ಯದ್ಭೀತಿಯಿಂದಂ ಭಯಮುಪಶಮದಿಂ ಪುಟ್ಟುಗುಂ ಶಾಂತಭಾವಂ ॥೧೦೧

ರಸಭಾವಂ [3]ಬಡೆದಲ್ಲದಾರ ಕವಿತಾಸಾಮಗ್ರಿಯುಂ ವಿದ್ವದು। ದ್ಧಸಭಾಭಾಸಿತಮಾಗದೆಂದಱಿದು ಮುನ್ನಂ ತಜ್ಜ್ಞರಿಂ ಕಲ್ವುದಾ॥ ರಸಭಾವಂಗಳನೆಯ್ದೆ ಕಲ್ತು ರಸಮಂ ಕಾವ್ಯಂಗಳೊಳ್ಕೂಡಿ ರಂ। ಜಿಸಬಲ್ಲಾತನೆ ಸತ್ಕವೀಂದ್ರಜನತಾವಿಖ್ಯಾತಿಯಂ ತಾಳ್ದುಗುಂ ॥೧೦೨

ರಸಮೆ ಮೊದಲ್ಕವಿತೆಗೆ ನವ।
ರಸರಸಿಕನೊಳವಱ ಭೇದಮಾಭೇದಮುನಾ॥
ರಸಯುಕ್ತರ ಸಭೆಯೊಳ್ ರಂ।
ಜಿಸಲಯಱಿದ ಕವಿತೆ ವಿರಸಮಂ ಪುಟ್ಟಿಸುಗುಂ ॥೧೦೩

ಅನವದ್ಯಕೀರ್ತಿ ವಿದ್ಯಾ।
ವಿನೋದನನಿಮಿತ್ತಬಾಂಧವಂ ಬುಧಸೇವ್ಯಂ॥
ವಿನಯವಿಭೂಷಣನಭಿಮಾ।
ನನಿಧಾನಂ [4]ನಿಖಿಳಸುಕವಿಮುಖಮಣಿಮುಕುರಂ ॥೧೦೪

೧. ಮತ್ತೀ. ಕ॥ ೨. ಕೃಪಾರ್ಥೋಕ್ತಿ. ಕ॥ ೩. ಪಡೆವಲ್ಲುದಾರ. ಕ॥ ೪. ಕೇಳ. ಕ॥

ಅಕಳಂಕಚರಿತನತಿವಿಶ |
ದಕೀರ್ತಿ ನವರಸವಿಭಾಸಿ ಕವಿಮುಖಮುಕುರಂ ||
ಸಕಳಕಳಾಕಳಿತಂ ವಾ |
ಚಕವಾಚಸ್ಪತಿ ಸರಸ್ವತೀಮುಖತಿಲಕಂ ||೧೦೭

ಚದುರ ತವರ್ಮನೆ ರಸಭಾ |
ವದ ನಿಧಿ ಮಹಿಮಾಂಬುರಾಶಿ ವಿನಯನಿಧಾನಂ ||
ಸುದತೀಮನೋಭಿರಾಮಂ |
ಮದನಾಗಮಸೂತ್ರಧಾರನೀಕವಿಕಾಮಂ ||೧೦೮

ಗದ್ಯ|| ಇದು ವಿನಮದಮರನಿಕರಮಕುಟಮಣಿಗಣಕಿರಣರಮಣೀಯಚರಣ ಸರಸೀರುಹ ಶಿವಪದಾಂಭೋಜಭೃಂಗಾಯಮಾನ ಸರಸ್ವತೀಪ್ರಸಾದಾಸಾದಿತ ಕವಿತಾಪ್ರಭಾವಂ

ಕವಿಕಾಮದೇವ ವಿರಚಿತಮಪ್ಪ

ರಸವಿವೇಕನಾಮ ಶೃಂಗಾರರತ್ನಾಕರದೊಳ್

ನವರಸವ್ಯಾವರ್ಣನಂ

ಪ್ರಥಮ ಪರಿಚ್ಛೇದಂ ಸಂಪೂರ್ಣಂ.

— ದ್ವಿತೀಯ ಪರಿಚ್ಛೇದಂ. —

ಶ್ರೀನಿಧಿ ವಿವೇಕನಿಧಿ ಕವಿ ।
ತಾನಿಧಿ ಸೌಭಾಗ್ಯನಿಧಿ ಯಶೋನಿಧಿ ವರವಿ ॥
ದ್ಯಾನಿಧಿ ವಿಳಾಸನಿಧಿ ಮಹಿ ।
ಮಾನಿಧಿ ಮಾನನಿಧಿ ದಾನನಿಧಿ ಕವಿಕಾಮಂ ॥೧

ನೆಱೆಯೆ ರಸಾಲಂಕಾರದ ।
ತೆಱನಂ ಮೃದುಮಧುರವಚನರಚನೆಯಿನಿಂಬಾ ॥
ಗಱಿಪಿದೆನಿತ್ತಲ್ ತೆಱಸಂ ।
ದಱಿಪಿದಪೆಂ ಭಾವವಿವಿಧಭೇದಾಂತರಮಂ ॥೨

ಅತಿಚತುರರಱಿಗೆ ಮೃದುಮಧು ।
ರತರೋದ್ಯತ್ಪ್ರವಚನವಿರಚನೆ ವಿವಿಧಬುಧ ॥
ಸ್ತುತಮೆನೆ ನಾಲ್ವತ್ತೊಂಬ ।
ತ್ತು ತೆಱದ ಭಾವಪ್ರಭೇದಮಂ ಕ್ರಮದಿಂದಂ ॥೩

ನಯವಿದರಱಿವುದು ರತಿವಿ ।
ಸ್ಮಯಕೋಪೋತ್ಸಾಹಶೋಕಹಾಸ್ಯಜುಗುಪ್ಸಾ ॥
ಭಯಮೆಂಬೆಣ್ಬಂ ಭಾವ ।
ಪ್ರಯೋಗದೊಳ್ ಸ್ಥಾಯಿಭಾವಮೆನೆ ಪೆಸರ್ವಡೆಗುಂ ॥೪

ಇವು ನವರಸಭಾವಂಗಳ ।
ನಿವರಣೆಯ ವಿಧಾನಮುಮಱುದಾಹರಣೆಗಳಂ ।

೧. ಪ್ರವಚನೀಯರಚನೆ ವಿಬುಧ. ಕ॥

ಕವಿಮುಖ್ಯರಱಿದು ಕೊಳ್ಗಾ ।
ನವರಸಭೇದದೊಳೆ ಪೇೞ್ದ ಪದ್ಯೋಕ್ತಿಗಳಂ ॥೫

ಸ್ವೇದಾಶ್ರುಸ್ತಂಭಂ ಸ್ವರ ।
ಭೇದಂ ವೈವರ್ಣ್ಯಪ್ರಳಯಕಂಪರೋಮಾಂ ॥
ಚೋದಯಮಿವೆಣ್ಟು ಭಾವಮು ।
ಮಾದರದಿಂ ಸಾತ್ವಿಕಾಭಿಧಾನಮನಾಳ್ಗಂ ॥೬

೧. ಲಲನೆ ಪತಿಯಿಂದೆ ಚಿತ್ತ ।
ಸ್ಖಲನಂ ತನಗಾಗೆ ಸುರಿವ ಬೆಮರಿಂ ಶಶಿಯಿಂ ॥
ಗಳಯಿಸುವ ಚಂದ್ರಕಾಂತೋ ।
ಪಳದೊಳ್ ನಿರ್ಮಿಸಿದ ಪೆಣ್ಣ ರೂಪಂ ತಳೆದಳ್ ॥೭

(ಇದು ಸ್ವೇದಂ)

೨. ಕಡುಮುಳಿದ ನಲ್ಲನಂ ಕಾ ।
ಲ್ವಿಡಿದುಂ ಲಲ್ಲೈಸಿ ನುಡಿದುಮಾಱದೆ ತಿಳಿಪಲ್ ॥
ನಿಡುಸುಯ್ದು ಕಾಂತೆ ನೆಲ್ಮೆಗೆ ।
ಮುಡಿಗಿಕ್ಕುವ ತೆಱದಿನಿಕ್ಕಿದಳ್ ಕಣ್ಬನಿಯಂ ॥೮

(ಇದು ಅಶ್ರು)

೩. ಒಡವಂದು ಕಳುಪಿ ನಿಲ್ಲಂ ।
ದೆಡೆಯೊಳ್ಮಱವಟ್ಟು ನಿಂದ ಕಾಮಿನಿ ಪತಿಗೇಂ ॥
ಪಡೆದಳೊ ರಂಭೆಯ ಶಾಪದೊ ।
ಳೊಡರಿಸಿ ಮರನಾಗಿ ನಿಂದ ಪೆಣ್ಣಾಕೃತಿಯಂ ।೯

(ಇದು ಸ್ತಂಭಂ)

೪. ವನಿತೆ ವಿಪಂಚೀಸಂವಾ ।
ಹನದೊಳ್ ಮುಳಿದಿರ್ದ ನಲ್ಲನಂ ಕಂಡಂದೇ ॥

ನನುಲೋಮಮಾಯ್ತು ಮಧುರ ।
ಧ್ವನಿ ತೊಟ್ಟನೆ ತಾರಮಂದ್ರಮಧ್ಯಕ್ರಮದಿಂ ॥೧೦

(ಇದು ಸ್ವರಭೇದಂ)

೫. ಪರಿಹಾಸಕೇಳಿಯೊಳ್ದನ ।
ಕರನುದಯದೊಳಲರ್ದಪದ್ಮದವೊಲಿರ್ದ ತಳೋ ॥
ದರಿಯ ಮೊಗಮಿರುಳ ಪದ್ಮದ ।
ದೊರೆಯಾದುದು ತೊಟ್ಟನಿನಿಯನುಱದಟ್ಟಲೊಡಂ ॥೧೧

(ಇದು ವಿವರ್ಣಂ)

೬. ಸುರತಾಂಭೋನಿಧಿಪಾರೋ ।
ತ್ತರಣಕ್ಕಡಹಡಿಸಿ ಬಂದು ಮುನ್ನಮೆ ನಲ್ಲಂ ॥
ಪರಿರಂಭಿಸೆ ಸುರತಾಂತ್ಯದ ।
ಪರಿಶ್ರಮಾಕ್ರಾಂತಸುಖಮನೆಯ್ದಿದಳೊರ್ವಳ್ ॥೧೨

(ಇದು ಪ್ರಳಯಂ)

೭. ಲಲನೆ ನಿಜೇಶ್ವರನಂ ಕಾ ।
ಣಲೊಡಂ ಕಟ್ಟಿದಿರೊಳೊದವೆ ಭಯಮಾಗಳ್ ತೆಂ ॥
ಬೆಲರಿಂದಲ್ಲಾಡುವ ಕೋ ।
ಮಲಲತಿಕಾಲೀಲೆಯಂ ಮನೋಹರಿ ತಳೆದಳ್ ॥೧೩

(ಇದು ಕಂಪಂ)

೮. ಇನಿಯಳ ಕಣ್ಣಂ ನೃಪನೊ ।
ಯ್ಯನೆ ತನ್ನಂ ಮಱಸಿ ಪೆಱಗಣಿಂ ಮುಚ್ಚಿದೊಡಾ ॥
ಘನಕುಚೆಗಱಪಿದುದಾತ್ಮೇ ।
ಶನೆಂಬುದಂ ಮೆಯ್ಯೊಳಾದ ಪುಳಕಚಯಂಗಳ್ ॥೧೪

(ಇದು ರೋಮಾಂಚಂ)

---

೧. ಮಧುರ. ಕ॥ ೨. ಪದ್ಮದಂತಿರ್ಪ. ಖ॥

ಇವು ಸಾತ್ವಿಕವೆಂಬುವು ಭಾ।
ವವಿಕಲ್ಪಂ ತಿಳಿಯೆ ಪೇಳ್ದನಿತ್ತಲ್ ಸುಕವಿ॥
ಪ್ರವರರ್ಕಳಱಿವುದನುಭಾ।
ವವಿಧಾನಪ್ರಥಿತವಿವಿಧಪದ್ಯೋಕ್ತಿಗಳಿಂ ॥೧೫

ಮತಿ ಲಜ್ಜಾವೇಗ ಶಂಕಾ ಮರಣ ಚಪಲತಾ ಹರ್ಷ ನಿರ್ವೇದ ದೈನ್ಯ। ಸ್ಮೃತಿ ಮೋಹಾಲಸ್ಯ ಗರ್ವ ಶ್ರಮ ಮದ ಜಡತಾ ಗ್ಲಾನಿ ಸಂಸುಪ್ತ ನಿದ್ರಾ ॥ ಧೃತಿ ತರ್ಕೋನ್ಮಾದ ಬೋಧಾಮಯ ಭಯ ಸವಿಷಾದೋತ್ಸುಕಾಮರ್ಷ ಚಿಂತಾ। ಸತತಾಸೂಯಾ ವಹಿತ್ಥೋಗ್ರ ಸುವಿಳಸದಪಸ್ಮಾರಕಾಖ್ಯಾನದಿಂದಂ ॥೧೬

ಸಮಸಂದೆಣಿಸಿದ ಮೂವ।
ತ್ತುಮೂಱು ಸಂಚಾರಿಭಾವಮಂ ಪೇಳ್ವೆನನು॥
ಕ್ರಮದಿಂದೆನ್ನಱಿವನಿತಂ।
ಸಮಸ್ತಕವಿರಾಜಮಾರ್ಗನಿಗದಿತಮತಮಂ ॥೧೭

೧. ನಾನಾಚಿಂತೆಗಳಿಂ ವ್ಯಾ।
ಖ್ಯಾನಂತಸ್ಮರಣೆ ಮತಿವಿಶೇಷಮದುಂ ವಿ॥
ಧ್ಯಾನಿಳಯುರಱಿಗೆ ಲಬ್ಧ।
ಜ್ಞಾನೋದಾಹರಣಕರಣಪರಿಣತೆಯಿಂದಂ ॥೧೮ (ಮತಿ)

೨. ಗುರುಮಾನ್ಯಜನಸಮೀಪಾಂ।
ತರದೊಳಕಾರ್ಯಂಗಳಪ್ಪವಂ ಮಾಡಿ ಕರಂ॥
ಕೊರಗಿರ್ಪುದು ಲಜ್ಜೆಯುದಂ।
ಪರಿಭಾವಿಸುಗಂತರಂಗಸಂಭಾವನೆಯಿಂ ॥೧೯ (ಲಜ್ಜೆ)

೧. ನಿರ್ವೇಗ. ಕ॥　೨. ವ್ಯಾಖ್ಯಾ. ಕ॥　೩. ಭಾವನಾತಿಸಂಭ್ರಮದಿಂದಂ. ಕ॥

೩. ಪರಮಪ್ರಿಯಾತಿವಿಶ್ರುತಿ[೧]।
ಕರಸಂದಿಗ್ಧಾರ್ಥವಹ್ನಿಜಂಝಾವಾತೋ॥
ತ್ಕರದಿಂದಾವೇಗಾಖ್ಯಂ।
ದೊರೆಕೊಳ್ಗುಂ ತಿಳಿಗದಂ ಬುಧಂ ಸಂಭ್ರಮದಿಂ॥ (ಆವೇಗಂ)

೪. ಪರಜನಿತಮಾತ್ಮಜನಿತಾಂ।
ತರಪರಮದ್ರೋಹಪಾಪಚರ್ಯಾದಿಗಳಿಂ॥
ದೊರೆಕೊಳ್ಗುಂ ಶಂಕೆಯುದಂ॥
ಪರಿಭಾವಿಸುಗಾತ್ಮಗೂಹನಾಪಹ್ನವದಿಂ ॥೨೧ (ಶಂಕೆ)

೫. ಗರಳಕ್ರೂರಮೃಗವ್ಯಾ।
ಧಿರೋಷ್ಣಸಂಪಾತಮೆಂದು[೩] ನಾಲ್ಕುಂ ತೆಱದಿಂ॥
ದೊರೆಕೊಳ್ಗುಂ ಮರಣಮುದಂ।
ಪರಿಭಾವಿಸುಗಸ್ತಮಾದ ಮಾರುತಗತಿಯಿಂ॥೨೨ (ಮರಣಂ)

೬. ರಾಗದ್ವೇಷಂಗಳ ಸಂ।
ಯೋಗದಿನಕ್ಕುಂ ನಿರಂತರಂ ಚಪಳತೆ ವಿ॥
ದ್ಯಾಗಮವಿದರಿದನಱಿವುದ।
ನಾಗತಕರಣೀಯಕರಣದಿಂದದಱಿರವಂ॥೨೩ (ಚಪಳತೆ)

೭. ಪ್ರಿಯದರ್ಶನದಿಂ ವಿಭವಾ।
ಶ್ರಯದಿಂದಂ ಹರ್ಷಮಕ್ಕುಮದನಱಿಗೆ ಬುಧರ್॥
ನಿಯತಂ ರೋಮಾಂಚಾಶ್ರು।
ಪ್ರಯುಕ್ತಮುಖರಾಗವಿವಿಧಸಂಭಾವನೆಯಿಂ॥೨೪ (ಹರ್ಷ)

---

೧. ವಿಶ್ರುತ. ಕ॥ ೨. ಸಂಪಾತಾರ್ಘ. ಖ॥ ೩. ಸಂತಾಪ. ಖ॥

೮. ದಾರಿದ್ರ್ಯೇಷ್ಟವಿಯೋಗ ।
ಕ್ರೂರಾಂತಃಕರಣದಿಂದೆ ನಿರ್ವೇದಂ ವಿ ॥
ಸ್ಫಾರಿಸುಗುಂ ನಿಶ್ವಯದಿಂ ।
ಸ್ಫಾರಶ್ವಾಸಾಶ್ರುನಯನದಿಂದಱಿಗೆ ಬುಧರ್ ॥೨೪(ನಿರ್ವೇದಂ)

೯. ಮನದ ಪರಿತಾಪದಿಂದಂ ।
ಜನಿಯಿಸುಗುಂ ದೈನ್ಯಭಾವಮೆಂದದನಱಿ ವುಂ ॥
ಡನಶೂನ್ಯರೂಪಮುಳಿನಾ ।
ನನವಿಕೃತಾಕಾರಕರಣಮುಪ್ಪ ಕ್ರಮದಿಂ ॥೨೬(ದೈನ್ಯಂ)

೧೦. ಕೃತಸುಖದುಃಖಂಗಳನನು ।
ಗತವಾಗಿರೆ ನೆನೆಯುತಿರ್ಪುದಕ್ಕುಂ ಸ್ಮೃತಿ ಪಂ ॥
ಡಿತರಱಿವುದು ಮಸ್ತಕದು ।
ದ್ಧೃತವಿನಮಿತಕಂಪಿತಾದಿವಿವಿಧಕ್ರಿಯೆಯಿಂ ॥೨೭(ಸ್ಮೃತಿ)

೧೧. ದೈವಕೃತಾಕಸ್ಮಿಕನಾ ।
ನಾವಿಧಹೇತುಗಳನಾದನರ್ಥತೆಯಿಂ ಮೋ ।
ಹಾವಯುಮಕ್ಕುಮದಂ ತಿಳಿ ।
ಗಾವರಿಸಿದ ವಿಕಳಭಾವನಾಸ್ಪಂದನದಿಂ ॥೨೮ (ಮೋಹಂ)

೧೨. ಧಾತುಕ್ಷಯಂ ಮನಃಪ್ರತಿ ।
ಘಾತಂ ಪುಟ್ಟಿಸುಗುಮೊಂದುಮಾಲಸ್ಯಮನ[3] ॥
ಪ್ರೀತಿಯಿನಸಹ್ಯತೆಯಿನಭಿ ।
ಜಾತೋಜ್ಜೃಂಭಣತೆಯಿಂದಮದನಱಿಗಱಿವಂ ॥೨೯(ಆಲಸ್ಯ)

---

೧. ನಿರ್ವೇಗ. ಕ॥   ೨. ಸ್ಫಾರಾ. ಕ॥ಖ॥   ೩. ಮನಃ. ಕ॥

೧೩. ಕುಲರೂಪವಿಭವವಿದ್ಯಾ ।
[1]ಬಲಶೌರ್ಯೈಶ್ವರ್ಯದಿಂದಮಕ್ಕುಂ ಗರ್ವಂ ॥
ತಿಳಿವುದದಂ * ಮಾತ್ಸರ್ಯಂ ।
ಛಲವಚನಾಕ್ಷೇಪದಿಂ [2]ಪ್ರಿಯಾವಜ್ಞತೆಯಿಂ ॥ ೨೦ (ಗರ್ವಂ)

೧೪. ನಾನಾಕಾಯಕ್ಲೇಶಮು ।
ನೂನಂ ದೊರೆಕೊಂಡೊಡಕ್ಕುಮಾಶ್ರಮ[3]ಮುದನ ॥
ಸ್ತಾನುಷ್ಟಾಂಗವಿಭಂಗದೆ ।
ದೀನಾನನದಾಲಸತ್ವದಿಂದಱಿಗೆ ಬುಧರ್ ॥ ೨೧ (ಶ್ರಮಂ)

೧೫. ಮದವೆಂಬುದು ಮೂಱು ತೆಱಂ ।
[4]ಮದಿರಾಜಾತಂ ಧನಂ ಸುವಿದ್ಯಾತ್ಮಕಮೆಂ ॥
ದದನಱಿಗೆ [5]ಪಾನದಿಂ ಸಂ ।
ಪದದಿಂ ಬಹುವಿದ್ಯೆಯಿಂ ವಿದಗ್ಧರೆನಿಪ್ಪರ್ ॥ ೨೨ (ಮದಂ)

೧೬. ಭಯದಿಂ ಸಮಸ್ತರೋಗಾ ।
ಶ್ರಯದಿಂ ಶ್ಲೇಷ್ಮಪ್ರಕೋಪದಿಂದಂ ಜಡತೋ ॥
ದಯಮಕ್ಕುಮಱಿಗದಂ ನಿ ।
ಶ್ಚಯದಿಂದಂ ನಷ್ಟಬುದ್ಧಿಚೇಷ್ಟಾದಿಗಳಿಂ ॥ ೨೩ (ಜಡತೆ)

೧೭. ಉಪವಾಸಾಧ್ವಕ್ಲೇಶಾ ।

---

೧. ವಿಲಾಸಸೌಂದರ್ಯ. ಕ॥ ೨. ಪ್ರಿಯಾನಜ್ಞೆಗಳಿಂ. ಕ॥
೩. ಮದಱಿಂ॥ತಾನಂಗಭಂಗದಿಂಸೋ। ಲ್ತಾನನದಿಂದಾಲಸತ್ವದಿಂದಱಿಗೆಬುಧರ್. ಕ॥
೪. ಮದಿರಾಸಂಜಾತಧನಸುವಿದ್ಯೋತ್ತಮದಿಂ. ಕ॥ ೫. ಪವನದಿಂ. ಕ॥
* ಮಾತ್ಸರ್ಯಂ= ಮಾತ್ಸರ್ಯದಿಂ ; ಕಬ್ಬಿಗರಕಾವದ ಪದ್ಯ೨ ನ್ನೂ, ಮಿತ್ರವಿಂದಾಗೋವಿಂದದ ಅಂಕ ೧ ಪದ್ಯ. ೧೧ನ್ನೂ ಹೋಲಿಸಿ ನೋಡಿ.

ತಪನಪಿಪಾಸಾತಿಪಾನಸುರತಾದಿಗಳಿಂ ॥
ಗ್ಲಪನಂ ಪುಟ್ಟುಗುಮದನತಿ ।
ನಿಪುಣಂ ಭಾವಿಪುದು ದುಃಖಶಕ್ತಿಕ್ಷಯದಿಂ ॥೩೪(ಗ್ಲಾನಿ)

೧೮. ಜನಿತೋಚ್ಛ್ವಾಸಂ ನಿಶ್ವಾ ।
ಸನಿಕಾಯಂ ಸ್ವಪ್ನದರ್ಶನಂ ಸುಪ್ತಿಯದಂ ॥
ವಿನಿಮೀಲಿತೇಕ್ಷಣಾಸ್ಪಂ ।
ದನದಿಂದಿಂದ್ರಿಯವಿಕಾರದಿಂದಱಿಗೆ ಬುಧರ್ ॥೩೫(ಸುಪ್ತಿ)

೧೯. ಶ್ರಮದಿಂದತ್ಯಧ್ವಾನು ।
ಕ್ರಮದಿಂದಾಲಸ್ಯದಿಂ ನಿರೋಧಪಿನಿನಿಸುಂ ॥
ಸಮನಿಸುಗುಂ ನಿದ್ರೆಯದು ।
ನಿಮೀಲಿತೇಕ್ಷಣವಿಕಾರದಿಂದಱಿಗೆ ಬುಧರ್ ॥೩೬(ನಿದ್ರೆ)

೨೦. ಅನುಭೂತವಸ್ತುವಿಷಯಮು ।
ಮನುಭವಭೋಗಾರ್ಥಕಾಂಕ್ಷೆಯುಂ ಮನದಲ್ಲಿ ॥
ಳ್ಳನಿತುಂ ನಿಲ್ಲದೊಡದು ಧೃತಿ ।
ವಿನೂತ್ನರದನಱಿಗೆ ಸತ್ವಧೈರ್ಯಾದಿಗಳಿಂ ॥೩೭(ಧೃತಿ)

೨೧. ಸಾಹಸಪಿರೋಧಕಲಹೋ ।
ತ್ಸಾಹಮಿದೆಂತಕ್ಕುಮೆಂದು ಕಲ್ಪಿಸುತಿರ್ಪೊಂ ॥
ದೂಹೆ ವಿತರ್ಕಮದಂ ತಿಳಿ ।
ಗಾಹಾರ್ಯೋದ್ಯುಕ್ತಕಾರ್ಯಕೃತಿಯುಕ್ತಿಗಳಿಂ॥೩೮(ತರ್ಕಂ)

೨೨. ಪಿತ್ತಪ್ರಕೋಪದಿಂ ನಿಜ ।
ವಿತ್ತಕ್ಷಯದಿಂದಮಕ್ಕುಮುನ್ಮಾದಮದಂ ॥

---

೧. ಪಿಪಾಸಾದಿ. ಕ॥

[೧]ಚಿತ್ತ್ರದಿಂದಿದನೞಗೆ ವಿ ।
ಯತ್ತಳದಿಜ್ಞ್ನಕರಶೂನ್ಯದಿಂದಕ್ಷಮದಿಂ ॥೩೯ (ಉನ್ಮಾದಂ)

೨೩. ಸಕಲೇಂದ್ರಿಯಂಗಳಿಗಾತ್ಮಾ ।
ನುಕೂಲಮಾಗಿರೆ ವಿಬೋಧೆಯೆನೆ ಪೆಸರ್ವಡೆಗುಂ ॥
ಸುಕವೀಂದ್ರೞಗೆ [೨]ತತ್ವ ।
ಪ್ರಕಾಶಸಂಜನಿತಲಲಿತಚೇಷ್ಟಾದಿಗಳಿಂ ॥೪೦(ಬೋಧೆ)

೨೪. ಮಲಮೊದವೆ ಧಾತುಗಳ ಸಂ ।
ಚಳತೆಯಿನೊದವಿರ್ಕುಮಾಮಯಂ ಬಲ್ಲರದಂ ॥
ತಿಳಿವುದು ಶರೀರಬಂಧ ।
ಸ್ಖಲತೆಯಿನರುಚಿಪ್ರಪಂಚಸಂಚಿತವಿಧಿಯಿಂ ॥೪೧ (ಆಮಯ)

೨೫. ಗುರುನೃಪ[೩]ದೈತ್ಯಾಹಿಪಿಶಾ ।
ಚರೂಕ್ಷಮೃಗದರ್ಶನಾದಿಹೇತುಗಳಿಂದಂ ॥
ದೊರೆಕೊಳ್ಗುಂ ಭಯಮದನೞ ।
[೪]ಗುರುತರತನುಹೃದಯಕಂಪದನ್ವಯದಿಂದಂ ॥೪೨(ಭಯಂ)

೨೬. ಪಿರಿದೊಂದು ಯತ್ನದಿಂದಾ ।
ದರಿಸಿದ ಕಾರ್ಯಕ್ಕೆ ವಿಘ್ನಮಾಗೆ ವಿಷಾದಂ ॥
ದೊರೆಕೊಳ್ಗುಮೞಗದಂ ನಿ ।
ರ್ಭರನಿದ್ರಾಲಸ್ಯವಿವಿಧಸಂಭಾವನೆಯಿಂ ॥೪೩(ವಿಷಾದಂ)

೨೭. ಗುರುಬಂಧುನಾಥವಲ್ಲಭ ।

---

೧. ಚಿತ್ತ್ರದಿನೞಗೆ ತರಳತೆ। ಯೊತ್ತ್ರದಿಂ ಚಿತ್ತ್ರನಾಶದಿಂ ವಿಬುಧಜನಂ. ಕ॥
೨. ತದ್ವತ್ಪ್ರಕಾಶ. ಕ॥ ೩. ದೈತ್ಯೋಗ್ರ. ಕ॥
೪. ಗುರುತರಹೃದ್ಧೈರ್ಯಗತವಿಧಾನಕ್ರಮದಿಂ. ಖ॥

ನಿರೀಕ್ಷಣಾಕಾಂಕ್ಷೆಯಿಂದಮೌತ್ಸುಕ್ಯಂ ವಿ ॥
ಸ್ತರದಿಂದುದಯಿಸುಗುಮುದಂ |
ಪರಿಭಾವಿಸುಗಂತರಂಗಸಂಭಾವನೆಯಿಂ ॥೪೪ (ಔತ್ಸುಕ್ಯಂ)

೨೮. ಧನಕುಲವಿದ್ಯೈಶ್ವರ್ಯದಿ |
ನೆನಗಾರ್ದೊರೆಯೆಂದು ತೊಡರ್ವುದಾಮರ್ಷಂ ತಾಂ ॥
ವಿನುತಮತಿ ತಿಳಿವುದಂತದ |
ನನೂನಕೋಪಾತ್ಮವಿತ್ತಬಂಧುಕ್ಷಯದಿಂ ॥೪೫ (ಅಮರ್ಷಂ)

೨೯. ಅತಿದಾರಿದ್ರ್ಯಂ ಬಂಧಂ |
ಚ್ಯುತಿ ರಿಪುಸಂವೃದ್ಧಿ ಚಿಂತೆಯಂ ಪುಟ್ಟಿಸುಗುಂ ॥
ಮತಿಯುತರಱಿಗದನುಚ್ಛ್ವಾ |
ಸತಾಪವೈವರ್ಣ್ಯಮೌನಕಾರ್ಶ್ಯಾದಿಗಳಿಂ ॥೪೬ (ಚಿಂತೆ)

೩೦. ರೂಪಕಲಾಯೌವನಲ |
ಕ್ಷ್ಮೀಪೌರುಷದಾನಶೌರ್ಯಕಾರ್ಯಂಗಳನಂ ॥
ತಾಪೇಕ್ಷಿಸುವದಸೂಯೆ ಸ |
ಕೋಪಸಹಸ್ರಪ್ರಪಂಚದಿಂದಱಿಗೆ ಬುಧರ್ ॥೪೭ (ಅಸೂಯೆ)

೩೧. ಜನಿತಭಯದಿಂದೆ ರಾಗಾ |
ದಿನಿಗೂಹನದಿಂದಮಕ್ಕುಮವಹಿತ್ಥಮದಂ ॥
ನೆನೆದಱಿಗೆ ದೃಷ್ಟಿಸಂಕೋ |
ಚನವಿವಿಧವಿಕಾರಸುಸ್ಥಿತವ್ಯತಿಕರದಿಂ ॥೪೮ (ಅವಹಿತ್ಥಂ)

೩೨. ಪರಮುದ್ರೋಹಂ ಶೌರ್ಯಾ |

೧. ಬಂಧದ್ಯುತಿ. ಕ॥ ೨. ರೋಮಾಂ| ಚನವಿಗತವಿಕಾರಸುಸ್ಥಿತವ್ಯತಿಕರದಿಂ. ಕ॥
೩. ಕ್ರೋಧಂ ಚೌರ್ಯಂ. ಕ॥

ಪರದಾರಂ ನೆಗೞೆ ತದ್ವಿಘಾತಮುದುಗ್ರಂ ‖
ಪರಿಭಾವಿಸುವಂದಂ ನಿ ।
ಷ್ಠುರಬಂಧನತಾಡನಾದಿಘಾತನವಿಧಿಯಿಂ ‖೪೯ (ಉಗ್ರಂ)

೩೩. ಭೂತಪಿಶಾಚೋರಗಸಂ ।
ಪಾತಮಪಸ್ಮಾರಮಕ್ಕುಮದನಱಿವುದು ಭೂ ‖
ಪಾತಪ್ರಕಂಪಜೃಂಭಣ ।
ವೀತಾಂತಃಕರಣಗಳಿತಲಾಲಾಜಲದಿಂ ‖೫೦ (ಅಪಸ್ಮಾರಂ)

ಕ್ರಮದಿಂದೆಣಿಸಿದ ಮೂವ ।
ತ್ತು ಮೂಱು ಸಂಚಾರಿಭಾವಮಿವು ಮುಂ ಪೇೞ್ದ ‖
ಸಮಕಟ್ಟನ ಭಾವದ ಲೆ ‖
ಕ್ಕಮುಮಿಲ್ಲಿಗೆ ನೆಱೆದುದೊಂದುಗುಂದೈವತ್ತುಂ ‖೫೧

ಸಮಸಂದಿಲ್ಲಿಂದಿತ್ತಲ್ ।
ಕಮನೀಯವಿಳಾಸಿನೀಸ್ವಭಾವೋಪೇತ ‖
ಪ್ರಮುದಿತಕೇಳೀಭಾವ ।
ಕ್ರಮಂಗಳಂ ನೆಱಿಯೆ ಪೇೞ್ವೆನೆನ್ನಱಿವನಿತಂ ‖೫೨

ಸತಿಗಾತ್ಮಕೇಳಿಮೊಟ್ಟಾ ।
ಯಿತಬಿಬ್ಬೋಕಾಖ್ಯಲಲಿತಲೀಲಾಕಿಲಕಿಂ ‖
ಚಿತವಿಚ್ಛಿತ್ತಿವಿಳಾಸವಿ ।
ಹೃತವಿಭ್ರಮಕುಟ್ಟಮಿತಮೆನಲ್ಪತ್ತು ತೆಱಂ ‖೫೩

ಉದಾಹರಣೆ:—

ಇನಿಯನ ವಾರ್ತೆಗಳಂ ಕಾ ।
ಮಿನಿ ಪೆಱರಿಂ ಕೇಳ್ದು ಕೇಳ್ದು ತದ್ಭಾವನೆಯಿಂ ‖

ತನಗಾಗಿಸಿಕೊಂಡಿರ್ಪೊಡೆ ।
ಮನದೊಳ್ಮೊಟ್ಟಾಯಿತಾಭಿಧಾನಮನಾಳ್ಗುಂ ॥೫೪

ಒಡವೋದರ್ಬರಂದರೆಂಬೀನುಡಿಯನೆ ಪೆಱರಿಂ ಕೇಳ್ದು ಕೇಳ್ದಂತೆ ಸೂಸಿ । ಮಾಡಿ ರಾಗಂ ತನ್ನೊಳಾಗಳ್ಸಮನಿಸೆ ನಿಜಚಿತ್ತೇಶ್ವರಂ ಬಾರನೆಂಬೀ ॥ ಪಡಿಮಾತಂ ಕೇಳ್ದು ರ್ಝಲ್ಲೆಂದೆರ್ದೆ*ಪಡಿದೆಱೆದಂತಾಗೆ ಚೆಂಬಿರ್ದವಳ್ ನೂ । ರ್ಮಡಿ ಮುನ್ನಿಂ ಕುಂದಿದಳ್ತತ್‌ಕ್ಷಣದೊಳೆ ಮದನಜ್ವಾಲಸಂತಾಪದಿಂದಂ ॥೫೫　　(ಇದು ಮೊಟ್ಟಾಯಿತಂ)

ಪರಮಪ್ರಿಯನೊಳ್ ಬೆಚ್ಚಂ ।
ತಿರುತುಂ ತನ್ನೊಲವನಾರ್ಗಮಱಿಪದೆ ಬಾಹ್ಯಂ ॥
ತರದೊಳೆ ಮೆಱೆಯಿಪ ಕಾಂತೆಯ ।
ಪರಿಣತಿ ಬಿಬ್ಬೋಕಮೆಂಬ ಪೆಸರಂ ಪಡೆಗುಂ ॥೫೬

ಪರಿದೆಯ್ದಲ್ಕೆಯ್ದಿ ನೋಡಲ್ನುಡಿಯಲೊಡರಿಸಲ್ಕಾಗಳುಂ ತೀಡುವಂತಃ । ಕರಣವ್ಯಾಪಾರಮಂ ಮೆಲ್ಲನೆ ಮಱಸಿ ತದಾಲೋಕನಾಳಾಪದಿಂದಂ ॥ ಪರಿಹಾಸಂಗೆಯ್ದು ತನ್ನೀಪನೊಳಭಿಮತಸಂಸಿದ್ಧಿಯಂ ತೀರ್ಚಿ ಕೊಂಡೆ । ಲ್ಲರುಮಂ ದೂಱುತ್ತಮಿರ್ಪಂಗನೆಯರ ಬಗೆಯಂ ಭಾವಿಸಲ್ ಬಲ್ಲನಾವೊಂ ॥೫೭　　(ಇದು ಬಿಬ್ಬೋಕಂ)

ಕರಚರಣಾಲಂಕರಣ ।
ಸ್ಫುರದುರುತರನೇತ್ರದಶನವಸನಭ್ರೂವಿ ॥
ಸ್ತರಮಂ ಸುಕುಮಾರತೆಯಂ ।
ಪರಿಭಾವಿಸೆ ಲಲಿತಮೆಂಬ ಪೆಸರಂ ಪಡೆಗುಂ ॥೫೮

ಕುಡುವುರ್ವಂ ನಸು ನೀವುತುಂ ತಿಲಕಮಂ ತಿರ್ದುತ್ತಮಾಸ್ಯಾಬ್ಜಮಂ ! ತೊಡೆಯುತ್ತುಂ ಕುಟಿಲಾಳಕಾವಳಿಗಳಂ ಸೈತೊತ್ತಿ ಚ

ಲ್ಯಾಗೆ ನೇ ॥ ರ್ಪಡಿಸುತ್ತುಂ ಮದಿರಾಲಸೇಕ್ಷಣೆ ಮದಸ್ತಂಬೇರಮಾಕಾರದಿಂ। ನಡೆಪಾಡುತ್ತುಮುಪಾಂಗಣಪ್ರಘಣದೊಳ್ ತನ್ವಂಗಿ ಕಣ್ಗೊಪ್ಪಿದಳ್ ॥೫೯ (ಇದು ಲಲಿತಂ)

ನೆನೆನೆನೆದಾತ್ಮಪ್ರಾಣೇ ।
ಶನ ತುಡುವುಡುವುಣ್ಬ ನಡೆವ ನುಡಿಯಿಪ್ಪಿರವಂ ॥
ತನಗೆ ನಗೆವಾಡಿಕೊಂಡಿ ॥
ರ್ದನುಭವಿಸುವ ಸತಿಯ ಕೇಳಿ ಲೀಲೆಯೆನಿಕ್ಕುಂ ॥೬೦

ಪ್ರಿಯೆ ತನ್ನೋವನ ಗೆಯ್ತಮಂ ನುಡಿವ ಚಾತುರ್ಯೋಕ್ತಿಯಂ ನೋಲ್ಪ ಭಂ। ಗಿಯನಿರ್ಬಂದಮನಾಳಗೊಳ್ವ ತೆಱನಂ ತನ್ನಳ್ಕಱಂ ಚಿತ್ತದೊಳ್ ॥ ನಿಯತಂ ಭಾವಿಸಿ ತಾನೆ ನೋಡಿಯುಮವಂ ಕೊಂಡಾಡಿಯುಂ ಕೂಡಿ ಪಾ । ಡಿಯುಮೆಂತುಂ ಸತಿಯಳ್ಕಱಂ ತಣಿದಳಲ್ಲಾಕಾಂತೆಯೇಕಾಂತದೊಳ್ ॥೬೧ (ಇದು ಲೀಲೆ)

ಕಿಱದು ನಗೆ ಕಿಱದು ಮೇಳಂ ।
ಕಿಱದು ಭಯಂ ಕಿಱದು ಮುಳಿಸು ಕಿಱದಭಿಮಾನಂ ॥
ಕಿಱದಳ್ಕೆ ಸತಿಗದೊರ್ಮೆಯೆ ।
ನೆಱದಿರೆ ಕಿಲಕಿಂಚಿತಾಭಿಧಾನಮನಾಳ್ಗುಂ ॥೬೨

ಮುಳಿದೆರಡಿಲ್ಲದಾಂ ಬಿಸುಡಲೆಂದುಱದಿರ್ದಡನೆಯ್ದೆ ಕೇಳ್ದುಕೋ। ಮಳೆ ಪರಿತಂದು ಕಾಲ್ವಿಡಿದು ಮೆಲ್ಲನಡಿಗಾಣದೆ ಭೀತಿಯಿಂದೆ ಪೆ ॥ ರ್ಚಳಿಸುವ ಬಯ್ದುಕೊಳ್ವೆಱವ ಬೆಚ್ಚನೆ ಸುಯ್ವ ಬೆಮರ್ವ ಕಣ್ಣನೀ । ರ್ಗಳನಿರದಿಕ್ಕುವೆನ್ನನಿಯಳೋಜೆ ತೊಲಲ್ದಪುದೆನ್ನ ಚಿತ್ತದೊಳ್ ॥೬೩ (ಇದು ಕಿಲಕಿಂಚಿತಂ)

---

೧. ಮೆತ್ತಂ. ಕ॥ ೨. ಬೆಳ್ವಳಿಸುವ. ಕ॥

ಕಾಂತೆ ವಿಲೇಪನಮಾಲ್ಯಾ।
ನಂತವಿಭೂಷಣವಿಶೇಷಮಿಲ್ಲದೆಯುಂ ಚೆ॥
ಲ್ವಂ ತಳೆದು ತೋರ್ಪೊಡಂತಾ।
ಕಾಂತಿಯೆ ವಿಚ್ಛಿತ್ತಿಯೆಂಬ ಪೆಸಱಂ ಪಡೆಗುಂ॥೬೪

ಕಳೆ ತುಡಸಲ್ಲದೀತೊಡಿಗೆಯುಂ ಸಹಜಾಂಗದ ಕಾಂತಿಯಿಂದವು।
ಗ್ಗಳಮೆ ವಿಲೇಪನಂಗಳವು ಬೇೞ್ಕುಮೆ ಸೌಲದೆ ಸೌಜಡಿಂ ಮನಂ॥
ಗೊಳಸುವ ಗಂಧಮಾಸತಿಗೆ ಮಂಗಳಸಾಧನತಾರಹಾರಮುಂ।
ತಿಳಕಮುಮಾರುಮಂ ಮಱುಗಿಸಲ್ಕೆಱಗುಂ ಮೃಗಶಾಬನೇತ್ರೆಯಾ॥

(ಇದು ವಿಚ್ಛಿತ್ತಿ)

ಆಸನವಿಶೇಷಮುಚಿತಾ।
ವಾಸವಿಶೇಷಂ ಮದೇಭಗಮನವಿಶೇಷಂ॥
ದೇಸೆಯಿನೆಸೆದಿರ್ಪಂಗ।
ನ್ಯಾಸವಿಶೇಷಂ ವಿಳಾಸಮೆನೆ ಪೆಸರ್ವಡೆಗುಂ॥೬೬

ಕಳಕಾಂಚೀಕ್ಷುದ್ರಘಂಟಾನಿನದಮೆಸೆವಿನಂ ಬಂದು ತನ್ವಂಗಿ ಸೌಧ।
ಸ್ಥಳದೊಳ್ಕುಳ್ಳಿರ್ದ ತನ್ನೋಪನ ತೊಡೆಯನವಷ್ಟಂಭದಿಂದೇಱ ವೀಣಾ॥ ಕಳನಾದಂ ಕಂಠನಾದಕ್ಕನುಗತಮೆನೆ ತದ್ವಲ್ಲಕೀವಾದನವ್ಯಾ। ಕುಳಮಂಗನ್ಯಾಸಮೊಳ್ಪಂ ತಳೆದಿರೆ ಮುದದಿಂ ಪಾಡಿದಳ್ಕಾಂತೆಯೊರ್ವಳ್॥೬೭　　(ಇದು ವಿಳಾಸಂ)

ಪರಮಪ್ರಿಯವಸ್ತುಗಳಂ।
ಪರಮಪ್ರಿಯುತಂಗಳಂ ಸಮಂತು ನಿಜಾಂತಃ॥

---

೧. ಕಳೆತುಡಿಸಲ್ಗಡಿತ್ತುಡಿಗೆಯಂ. ಕ॥　　೨. ಮಾದ. ಕ॥
೩. ಮಗುಳಿಸ. ಕ॥　೪. ಸೆಡಿರ್ಪಳ ವಿ|ನ್ಯಾಸ. ಕ॥　೫. ಗಳಿಂ. ಕ॥

ಕರಣ[1]ದೊಳಣಮಲ್ಲೆಂಬಂ ।
ತಿರುತಿರ್ಪ ಗಭೀರವೃತ್ತಿ ವಿಹೃತಮೆನಿಕ್ಕುಂ ॥೧೮

ಅಪನೀಪೋಪನೆ ಪೋಪನಾರವನವಂ ನಿನ್ನಾತನೆನ್ನಾತನೆ ।
ನ್ನವನೋಪಂ ನಿನಗಪ್ಪ ನಲ್ಲನವನೇ ಆರೆಂದರಾನೆಂದೆನೆಂ ॥
ದುವಿವಳ್ಬಲ್ಲಳದೆಂತಿದಂ ಸುಡೆಲೆ ನೀನೀಬಲ್ಮೆಯುಂ ಬಟ್ಟೆಪೋ ।
ಪವರಂ ಪತ್ತಿಸುತಿರ್ಪೆಯೆಂದು ಸಖಿಯಂ [2]ಬಾಯಾರ್ದಳೆಲ್ಲಂದದಿಂ॥೧೯

(ಇದು ವಿಹೃತಂ)

ರಾಗಮದಹರ್ಷಸಂಭವ ।
[3]ಭೋಗಾಂಗಾಹಾರ್ಯಸತ್ವಯುಕ್ತಿವಿಶೇಷೋ ॥
ದ್ಯೋಗಮಿವು ಪತಿಗೆ ಲೀಲೆಯ ।
ನಾಗಿಸೆ ವಿಭ್ರಮಮೆನಿಪ್ಪ ಪೆಸಱಂ ಪಡೆಗುಂ ॥೨೦

ಮದಿರಾಪಾನವಿಶೇಷಮುಂ ನವವಯಸ್ಸಂಪತ್ತಿಯುಂ ಬಂದು ನೋ।
ಡದಪೋಲ್ನೋಡುವ ನಲ್ಲನಿರ್ದಿರವುಮತ್ಯುತ್ಸಾಹಮುಂ ಮಾಡೆ ಚಿ॥
ತ್ತದೊಳಾಗಳ್ತನುಮಧ್ಯೆಗೇ[4]ನೆಸೆದುದೋ ನೃತ್ಯಂ ಚತುರ್ಭಂಗಿಭೇ।
ದದ ಲೀಲಾಭಿನವಪ್ರಧಾನವಿಧಿಯಿಂ ಕಾದಂಬರೀಗೋಷ್ಠಿಯೊಳ್ ॥೨೧

(ಇದು ವಿಭ್ರಮಂ)

ಅದಯಾಲಿಂಗನದಂತ ।
ಚ್ಛದಕೇಶಗ್ರಹಣಮತನುಕೇಳೀವಿಭವಂ ॥
ಮೃದುಕಠಿನಾತ್ಮಕಮಂತದು ।
ಸುದತಿಗೆ ಕುಟ್ಟಮಿತಮೆಂಬ ಪೆಸಱಂ ಪಡೆಗುಂ ॥೨೨

---

೧. ದೊಳಳವಿಲ್ಲೆಂಬ. ಕ॥ ೨. ಬಾಯಾರ್ದಳಿಲ್ಲಂದದಿಂ. ಖ॥
೩. ಮಾಗಂ. ಖ॥ ೪. ನಿಧಿಯಿಂ. ಕ॥

ಪದೆದವರ್ದಪ್ಪಿ ಚಪ್ಪಲದ ಪೆರ್ಮೊಲೆ ಪೀರೆ ಪೊದಟ್ಟು ಪೊಂಗಿ
ಬೀ । ಗಿದ ಬೆಳರ್ವಾಯ್ತುಗಳ್ದುಗಿಯೆ ನೀಳ್ದ ನಖವ್ರಣವೀಳ್ದು ಪೊ
ಯ್ಯೆ ಸೇ ॥ ಡಿದ ತಲೆ ತನ್ನೊಳೊಪ್ಪೆ ಸುರತಾಂತದೊಳೆನ್ನಯ ಮುಂದೆ
ನಿಂದು ಮೇ । ಲುದಱೊಳೆ ಬೀಸುತುಂ ಬೆಮರನಾಱಿಸುವ್ರೋಪಳನೆಲ್ಲಿ
ಕಾಣ್ಬೆನೋ ॥೭೩   (ಇದು ಕುಟ್ಟಿಮಿತಂ)

ಭಾವಿಸುವ್ರದಿವಱ ಭಾವಮ ।
ನಾವರಿಸಿದ ಮಧುರವಚನರಚನೆಯೊಳೊಳ್ಪಂ ॥
ಭಾವಿಸಿದ ಕವಿಯೆ ನೆಟ್ಟನೆ ।
ಭಾವಕನೆನಿಸುಗುಮಶೇಷವಿದ್ವತ್ಸಭೆಯೊಳ್ ॥೭೪
ಇದನಱಿದೋದುವ್ರದೋದಿಂ ।
ದುದಾತ್ತಕವಿವಿಬುಧನೃಪಸಭಾಭ್ಯಂತರದೊಳ್ ॥
ಸದಮಲವಿಶಾಲಮತಿಸಂ ।
ಪದನೆನಿಸುಗುಮವನೆ ಕೀರ್ತಿಕಾಂತನೆನಿಕ್ಕುಂ ॥೭೫
ಅಲಸದಿದನಱಿದು ನೆಱೆ ಲ ।
ಕ್ಷಣಲಕ್ಷ್ಯೋಕ್ತಿಗಳನುಚಿತಮಂ ಕೈಕೊಂಡಾ ॥
ನೊಲವಿಂ ಪೇೞಲ್ಸತ್ಕೃತಿ ।
ಲಲನೆಯೆ ಬುಧಸಭೆಯೊಳತಿವಿದಗ್ಧೆಯೆನಿಕ್ಕುಂ ॥೭೬
ಕವಿತಾಪಿತಾಮಹಂ ದಾ ।
ನವಿನೋದಂ ಸುಜನವಲ್ಲಭಂ ನವರಸಭಾ ॥
ವವಿಳಾಸಂ ಸುಕರಯಶೋ ।
ಧವಳಂ ಭಾವಿಸೆ ಸರಸ್ವತೀಮುಖತಿಲಕಂ ॥೭೭

---

೧. ಪೇಱ. ಕ॥   ಪದ್ಯಗಳು ೭೫, ೭೬ ಕ॥ಪುಸ್ತಕದಲ್ಲಿಲ್ಲ.

ಸಕಳಬುಧಜನವಿನೂತ್ನ ।
ಪ್ರಕಾಶಿತಾಶೇಷಮಧುರಪದ್ಯೋಕ್ತಿಗಳಿಂ ॥
ಪ್ರಕಟಿಸಿದಂ ತಾಂ ಭಾವಾ ।
ಧಿಕಾರಮಂ ಸುಕರಸುಕವಿಮುಖಮಣಿಮುಕುರಂ ॥೭೮

ಗದ್ಯಂ॥ ಇದು ವಿನಮದಮರಮಣಿಮಕುಟಮಣಿಗಣಕಿರಣರಮಣೀಯ
ಶಿವಪದಾಂಭೋಜಭೃಂಗಂ ಸರಸ್ವತೀಪ್ರಸಾದಾಸಾದಿತ
ಕವಿತಾಪ್ರಭಾವಂ
ಕವಿಕಾಮದೇವ ವಿರಚಿತಮಪ್ಪ
ರಸವಿವೇಕನಾಮ ಶೃಂಗಾರರತ್ನಾಕರದೊಳ್
ಭಾವಭೇದ ನಿರ್ಣಯಂ
ದ್ವಿತೀಯ ಪರಿಚ್ಛೇದಂ ಸಂಪೂರ್ಣಂ.

—ತೃತೀಯ ಪರಿಚ್ಛೇದಂ—

ಶ್ರೀವಧು ವಕ್ಷದೊಳಿರೆ ವಾ ।
ಕ್ಶ್ರೀವಧು ಮುದದಿಂದೆ ವದನಕಮಲದೊಳಿರೆ ಸ ॥
ದ್ಭಾವದೆ ಮುಗಿಲಂ ಕೀರ್ತಿ ।
ಶ್ರೀವಧು ಮುಟ್ಟಿದಳುದೀರ್ಣ್ಣಕವಿತಾರ್ಣ್ಣವನಾ ॥೧

ನವರಸದ ಭೇದಮಂ ಭಾ ।
ವವಿಧಾನಮನಱಿಯೆ ಪೇೞ್ದನಿಲ್ಲಿಂದಿತ್ತಲ್ ॥
ಕವಿಮುಖ್ಯರಱಿಗೆ ನಾಯಕ ।
ವಿವರಣೆಯಂ ನಾಯಿಕಾವಿಕಲ್ಪಾಂತರಮಂ ॥೨

ಮೃದು ಮಾನ್ಯಂ ತಾನೂರ್ಜಿತ ।
ನುದಾರನತಿಭೋಗಿ ಸೂರಿ ಭವ್ಯಂ ವಿದ್ಯಾ ॥
ವಿದನನಘನಧಿಕನವಗತ ।
ಮದನೆನಿಸುವನವನೆ ನಾಯಕಾಖ್ಯಮನಾಳ್ಗಂ ॥೩

ಜಿತವಿವಿಧವಿಷಯನಭಿಮಾಂ ।
ಛಿತಾರ್ಥನಿರ್ವಾಹಕಾರಿ ಧೀರಂ ನಿಭೃತಂ ॥
ಪತಿಹಿತ ಗುಣಾನ್ವಿತಂ ನಿ ।
ಶ್ಚಿತಮತಿ ಶೃಂಗಾರನಾಯಕಾಖ್ಯಮನಾಳ್ಗಂ ॥೪

ಅನತಿಶಯನಾಯಕಾಖ್ಯದೊ ।
ಳನುಕೂಲಂ ದಕ್ಷಿಣಾತ್ಮಕಂ ಕುಟಿಲಂ ಧೃ ॥

೧. ಶೂಲಿಭವ್ಯಂ. ಕ॥　　೨. ನಿರ್ವಾಣ. ಕ॥
೩. ಪತಿಹಿತಗುಣಾಘನಿ। ಶ್ಚಿತಮತಿಯಪ್ಪಂ ನೆಗೞ್ದನಾಯಕಾಖ್ಯಮನಾಳ್ಗಂ. ಕ॥

ಷ್ಟನೆನಿಪ್ಪ ನಾಲ್ಕು ಭೇದಂ ।
ಜನಿಯಿಸುಗುಮವಂ ಕ್ರಮೋಕ್ತಿಯಿಂದಂ ಪೇೞ್ವೆಂ ॥೫

ಅನುಕೂಲನಾಯಕಂ :—

ನಿಯತಮನನೇಕಪತ್ನೀ ।
೧ನಿಯತವ್ರತನಿಯಮಿತಾತ್ಮನನುದಿನಮಾತ್ಮ ॥
ಪ್ರಿಯೆಯೊಳ್ ರತಾಂತದೊಳ್ ತು ।
ಪ್ರಿಯೊಳರೆ ವಿದಿತಾನುಕೂಲನಾಯಕನಕ್ಕುಂ ॥೬

ಕೆಳದೀ ಮಜ್ಜೀವಿತಾಧೀಶ್ವರನ ಗುಣಮನಾನಾವುದಂ ಪೇೞ್ವೆನೊಂದಂ । ತಿಳಿದುದ್ವೈವಾಹಸಂಬಂಧನಸಮಯದೊಳಂದೇಕಪತ್ನೀವ್ರತಂ ನಿ ॥ ಶ್ಚಳತಂ ನೋಡಂದು ತೊಟ್ಟಂದುವರಮದನೆ ದಲ್ ಭಾವಿಸುತ್ತಿರ್ಪನವ್ಯಾ । ಕುಳಚಿತ್ತಂ ಜನ್ಮಜನ್ಮಾಂತರದೊಳಮೆನಗಿನ್ನಾತ[೩]ನಕ್ಕೆಂದಳೋರ್ವಳ್ ॥೭ (ಅನುಕೂಲನಾಯಕಂ)

ದಕ್ಷಿಣನಾಯಕಂ :—

[೪]ಅಕ್ಷೀಣಪ್ರೇಮದೊಳುಪ ।
ಲಕ್ಷಿತಮಾಗಿರ್ದ ಸಂಭ್ರಮಂಗಳನಾಪ್ರೇ ॥
ಮಕ್ಷಿತಿಯೊಳಮನುಸಂಧಿಸೆ ।
ದಕ್ಷಿಣನಾಯಕನೆನಿಪ್ಪ ಪೆಸಱಂ ಪಡೆಗುಂ ॥೮

ಎಲೆ ಮೃಗನೇತ್ರೆ ನೋಡು ನವಿಲಾಟಮನಾ ಸಹಕಾರ[೫]ಗುಚ್ಛಕೋ । ಮಳಕೆಯನಾಮದಭ್ರಮರಲೀಲೆಯನೆಂದು ವನಾಂತರಾಳದೊಳ್ ॥

೧. ನಿಯಮ. ಕ॥ ೨. ಗೋಷ್ಠಿಯೊಳಿರೆ. ಕ॥
೩. ನಿನ್ನಾಥನಕ್ಕೆಂದು ಕ॥ ೪. ಅಕ್ಷೂಣ. ಕ॥
೫. ದುರ್ಪಕೋಮಳತೆನುದ್ಧ್ರಮದ್ಭ್ರಮ. ಕ॥

ಚಲಮತಿ ಮಾಡಿ ವಲ್ಲಭೆಯುನನ್ಯವಿಟೀಮುಖಬಿಂಬಚುಂಬಿತಾ।
ಕುಳನಭಿವಾಂಛೆಯುಂ ನೆಱೆಯೆ ತೀರ್ಚಿದನೇನುಚಿತಪ್ರವೀಣನೋ ॥೯

(ದಕ್ಷಿಣನಾಯಕಂ)

ಕುಟಿಲನಾಯಕಂ :—

ಅನ್ಯತಾಳಾಪಂ ಸ್ವಾರ್ಥಾ।
ಭಿನಿಷ್ಕೃತಂ ವಿಕೃತವೇಷನಿರತಂ ಧೂರ್ತ್ಯ॥
ಕನಿಜಸ್ವಭಾವನೆನೆ ನೆಗ।
ಳ್ದ ನಾಯಕಂ ಕುಟಿಲನೆಂಬ ಪೆಸರಂ ಪಡೆಗುಂ ॥೧೦

ಎನಗೀ ನಿನ್ನ ವಿಕಾರಮುಂ ನವನಖವ್ಯಾಪಾರಮುಂ ವಂಚಿಸ। ಲ್ಕನಿ
ಸಂ ನೀಂ ಪುಸಿವೇಟ್ಟು ಮುಚ್ಚಿದೆಯುದರ್ಕಾಂ ಬಲ್ಲೆ[1]ನೆಂದಿಂತು ನಿ॥ ನ್ನ
ನುವಂ ನಂಬಿದಿರೆಂದು ದೂಱುವವೊಲಿರ್ಪನ್ಯಾಂಗನಾಸಂಗಸಂ। ಜನಿ
ತಾವೋದಮನೆಂತು ನೀಂ ಪುಸಿವೆ ನೀನೆಂತೆಂತಿದಂ ಮುಚ್ಚುವೈ॥೧೧

ನೋಡಿಸಲೆಂದು ತನ್ನನಿದಿರಂ ನಡೆ ನೋಡುವನಾರೊಳಂ ಮನಂ।
ನೋಡದೆ[2] ಮಾತನಾಡುವನವಂ ಪೆಱರಂ[3] ಬಸಮಾಗಿಸಲ್ಕೆ ದಲ್॥
ಕೂಡುವನಲ್ಲದಂತು ಬಗೆದೋರ್ಪ ಮನಂಗುಡುತಿರ್ಪ ನೋಡಿ ಮಾ।
ತಾಡುವ ಕೂರ್ತು ಕೂಡುವಳಪಂ ಮಱೆ ನೀಂ ಕವಿಕಾಮದೇವನೊಳ್॥

ಇನ್ನೆನಗೊಲ್ದಿಳಸಿದನಿವ।
ನೆನ್ನದಿರೆಲೆ ಮುಗಳೆ ಪುಟ್ಟ ಬಳೆದವೊಲೊಳಪೊ॥
ಕ್ಕೆನ್ನರುಮಂ[4] ನಂಬಿಸುಗುಂ।
ತನ್ನೆಂದುದನನಿಸುವನ್ನೆಗಂ ಕವಿಕಾಮಂ॥೧೨

(ಕುಟಿಲನಾಯಕಂ)

---

೧. ಸಕ್ತ. ಕ॥ ೨. ನೋಡಲೆ. ಕ॥ ೩. ವಶ. ಖ॥ ೪. ನೆನಿಸನನ್ನೆಗಂ. ಕ॥

ಧೃಷ್ಟನಾಯಕಂ :—

ಸತತಾಪರಾಧಿ ಪರಿಪಾ।
ಳಿತಮಿಥ್ಯಾವಿನಯನಸ್ತಲಜ್ಜಾಭಾವಂ ॥
ಗತಸಮುಚಿತಾಭಿಮಾನಂ।
ನಿತಾಂತಮೆನಿಪವನೆ ಧೃಷ್ಟನಾಯಕನೆನಿಕುಂ ॥೧೪

ದೊರೆಗಿಡೆ ಬಾಯ್ಗೆ ಬಂದುದನೆ ಬಯ್ವೆನದಂ ಬಗೆಗೊಳ್ಳದೀಮುಖಾಂ। ಬುರುಹಮನೀಱು ಚುಂಬಿಸುವನೋವದೆ ಜೆಟ್ಟತುಪ್ರೊಯ್ವೆನೊತ್ತ ವಂ ॥ ಕರವನಡುರ್ತು ಕಾಯ್ದೊದೆವೆನಾಗಳೆ ಕಾಲ್ವಿಡಿದಿರ್ಪನೆಂತು ನಿ। ಷ್ಕರುಣದಿನಾನವಂಗೆ ಮೊಗದೊಳ್ ಮುಳಿಸಂ ತಳೆವೆಂ ತಳೋದರೀ ॥

ಬಡಿದೊಡೆ ನೀರೇಱುವನೊದೆ।
ದೊಡೆ ನಲಿವಂ ಪ್ರೊಯ್ದೊಡೊಂದು ರೂಪಪ್ಪಂ ನಾ[1] ॥
ಣ್ಗೆಡೆ ನುಡಿಯೆ ರಾಗಿಯಕ್ಕುಂ।
ಕಡು ಜೋಡಗನಬ್ಬೆ ಗಂಡರೊಳ್ ಕವಿಕಾಮಂ ॥೧೬

ಮನಕೆ ಬರಲೊಟ್ಟಜೆಯಿನಿ।
ರ್ದನಿತಱೊಳರದಾಗಳಂತೆ ಜಾಣ್ನುಡಿವಂ ಸ ॥
ಜ್ಜನವಾಟೊರ್ದೇಱುವನೊಕ್ಕಲ್।
ತನಗಿರ್ಪಂ ಕಂಡ ಗಂಡರೊಳ್ ಕವಿಕಾಮಂ ॥೧೭

(ಧೃಷ್ಟನಾಯಕಂ)

ಎಂದಿಂತರ್ಥೋಕ್ತಿಗಳಿಂ।
ಬೊಂಡಿರೆ ನಾಯಕವಿಭೇದಮಂ ತಿಳಪಿದೆನಾ ॥

---

೧. ತಾಂ. ಕ॥ ೨. ಬ॥ಯ್ದೊಡೆ ತನಗೆ ರಾಗವಕ್ಕುಟ, ಕ॥ ೩. ನಪ್ಪ. ಕ॥

ನಂದದಿನಱಿವುದು ಬುಧರಿ ।
ಲ್ಲಿಂದಿತ್ತಲ್ನಾಯಿಕಾವಿಭೇದಾಂತರವುಂ ‖೧೮

ಮಾನಿತಸಂಭಾವನೆಯುಂ ।
ಮೂನೂಱೆಂಬತ್ತು ನಾಲ್ಕು ತೆಱದಿಂ ನೆಱೆದಿ ‖
ರ್ಪಾನಾಯಿಕಾವಿಕಲ್ಪಮು ।
ನಾನಱಿಪುವೆನುಚಿತವಚನರಚನೋಕ್ತಿಗಳಿಂ ‖೧೯

ಸಕಳಮಹಿಳಾಪ್ರಪಂಚಂ ।
ಸ್ವಕೀಯೆ ಪರಕೀಯೆ ಪಣ್ಯೆಯೆಂದಿಂತು ಜನ ‖
ಪ್ರಕಟನದಿಂದಂ ಭಾವಿಸೆ ।
ವಿಕಲ್ಪದೊಳ್ ನೆಱೆಯೆ ಮೂಱು ತೆಱನಾಗಿರ್ಕುಂ ‖೨೦

ಮೊದಲೊಳ್ ಸ್ವಕೀಯೆ ಭಾವಿಸೆ ।
ಪದಿಮೂಱುಂ ಭೇದಮಲ್ಲಿ ಪರಕೀಯೆಯ್ಯೆ ವಿಕ ‖
ಲ್ಪದೊಳೆರಡೆ ಮಾರ್ಗಮಕ್ಕುಂ ।
ವಿದಿತಂ ಪಣ್ಯವಧುವೊಂದೆ ತೆಱನಾಗಿರ್ಕುಂ ‖೨೧

ಎನಸುಂ ಸ್ವೀಯೆ ಜ್ಯೇಷ್ಠಾ ।
ಕನಿಷ್ಠೆಯಿಷ್ಟಂಗಳಿಂದಮಿರ್ತೆಱನಾಕ್ಕೇ ‖
ಕನನೊಲಿಪ ವಧು ಜ್ಯೇಷ್ಠಾ ।
ವನಿತೆಯುದಾಸೀನವಧು ಕನಿಷ್ಠೆಯೆನಿಕ್ಕುಂ ‖೨೨

ಅಱಿವೆನಿದೊಂದಂ ಕೈನೀ ।
ರೆಱೆದ ಬೞಿಕ್ಕನ್ನ ಬಾಲಕೇಳಿಯಿನಿತ್ತಲ್ ‖

೧. ಮಹಿಮಾ. ಕ‖ ೨. ಪಣ್ಯೆಗದೊಂದು. ಕ‖ ೩. ನೊಲಿಸುವಂದು. ಕ‖

ಮಱೆದಪ್ಪೊಡಮೆನ್ನಿನಿಯಂ ।
ಪೆಱರೊಡಗೆಯ್ದುಱಿಯನಿನಿತನಾಂ ಪರಿಕಿಸಿದೆಂ ॥ ೨೩

(ಜ್ಯೇಷ್ಠೆ)

ಮುಳಿಸನಱಿದಂಜಿ ಕಣ್ಣಱ್ ।
ಢೆಳಸಿ ಮನಂಗೊಂಡು ನಡೆದೆನೆನ್ನಿನಿಯಂ ತಾಂ ॥
ಮುಳಿಸಂ ಕೆಮ್ಮನೆ ತೋರ್ಪಂ ।
ಫಳಿತದ್ರುಮದಂತಿರೆನಗೆ ವಿಪರೀತತೆಯಿಂ ॥ ೨೪

(ಕನಿಷ್ಠೆ)

ಸಮಸಂಧಿವರಿವರ್ಗರೊಳ ।
ಲ್ಲಿ ಮುಗ್ಧೆ ಮಧ್ಯೆ ಪ್ರಗಲ್ಭೆಯೆಂಬು ವಯೋನು ॥
ಕ್ರಮದಿಂ ಭೇದಂ ಮೂಱಿವ ।
ರ ಮಾರ್ಗಮಂ ತಿಳಿಯೆ ಪೇಳ್ವೆನೆನ್ನಱಿವನಿತಂ ॥ ೨೫

ಕ್ರಮದಿಂ ದ್ವಾದಶವರ್ಷ ।
ಪ್ರಮಾಣದೊಳ್ ಮುಗ್ಧೆ ಮಧ್ಯೆ ತದ್ವಿಗುಣದಿನಾ ।
ಸಮಕಟ್ಟದ ತತ್ತ್ರಿಗುಣ ।
ಪ್ರಮಿತಾಬ್ದದೊಳವಳತಿಪ್ರಗಲ್ಭೆಯೆನಿಕ್ಕುಂ ॥ ೨೬

ಮುಗ್ಧೆ :—

ಅತಿಲಜ್ಜಾನ್ವಿತೆ ಸಂಚಳ ।
ಮತಿಯವಿರಳಲೋಲಭಾವಸಂಭ್ರಮೆಯಾವಿ ॥
ಷ್ಕೃತಚಿತ್ತೆಯೆನಿಪ ಬಾಲಿಕೆ ।
ಸತತ ಮವಳ್ಮುಗ್ಧೆಯೆಂಬ ಪೆಸಱಂ ಪಡೆಗುಂ ॥ ೨೭

---

೧. ಪೆಱರೊಡಗೂಡಱಿ. ಖ॥

ಇನಿಯನಗಲ್ದೊಡಾಂ ಸುರತದೊಳ್ನೆರೆವುಜ್ಜುಗದಿಂದಮಿರ್ಪೆನಾ ।
ತನೊಳೊಡನಿರ್ದೊಡಂದೆನಗೆ ಪೋಪುದು ಲಜ್ಜೆಯೊಳಿರ್ದ ಪೊೞ್ತು
ನ ॥ ಲ್ಲನೊಳಿರಲೀಯದಿಂತುಟೆನಗೆನ್ನ ಮನಂ ಬಸವಲ್ಲಮೆಂದು ಕಾ ।
ಮಿನಿ ಕುದಿವಳ್ ವಿಯೋಗದೊಳಮಾತನ ಯೋಗದೊಳಂ ನಿರಂತರಂ ॥

ನಡುಕಂ ಕೈಗಣ್ಮೆ ಕಣ್ಣೀರ್ಗುಡುಗುಡನುಗೆ ಮೆಲ್ವಾಯದೌತ್ಸು
ಕ್ಯದಿಂದಿ । ರ್ದೊಡೆ ಕಂಡಾನಂಜಿ ಕಾಲಂ ಪಿಡಿದೊಡೆ ಮುಱಿದುದ್ರೇಕ
ಮಂ ತಾಳ್ದಕೊಂಡಿ ॥ ರ್ದೊಡೆ ಬೇಸತ್ತುಬ್ಬು ಪೋಗಲ್ಬಗೆದಿರೆ ಪುಳಕ
ಸ್ವೇದಪೂರ್ಣಾಂಗಿ ತಾನಂ । ದೊಡನೆೞ್ದಿರ್ದಪ್ಪಿದೆನ್ನೀವಳ ತೆಱನೆ
ನಗುದಾಭ್ರಾಂತಿಯಂ ಮಾಡುತಿರ್ಕುಂ ॥೨೯ (ಮುಗ್ಧೆ)

ಮಧ್ಯೆ :—

ನಿಯತತರಸರಸಿಕೆ ಕಿಂಚಿ ।
ದ್ಭಯುತತರತನು ವಿಜಿತವಿಷಯಮತಿ ಗರ್ವಸಮಾ ॥
ಶ್ರಯಮಾಗೆ ಸುಭಗೆಯೆನೆ ನೆಗ ।
*ೞ್ದ ಯುವತಿ ಸಲೆ ಮಧ್ಯೆಯೆಂಬ ಪೆಸಱಂ ಪಡೆಗುಂ ॥೩೦

ಇನಿಯಂ ತನ್ನೊಳಗಲ್ದೊಡಂದೆ ಮರಣಾವಸ್ಥಾಂತರಂ ಬಂದು
ತೊ । ಟ್ಟನೆ ಕಂಡಂದು ಭಯಾಕುಳಂ ಪದಪಿನಿಂ ಮಾತಾಡೆ ಮಾತಾ
ಡೆ ಕೆ ॥ ಮ್ಮನೆ ಬರ್ಕುಂ ಕಲಹಂ ಪ್ರಿಯಂಗೆ ಸುಖಮಿಲ್ಲೆಂದುಂ ಸು
ಸಿಲ್ಗೆಂದೊಡಾಂ । ನಿನಗೇನೆಂದಪೆನಕ್ಕ ಕೂರ್ಪವರೊಳಿನ್ನೆಲ್ಲಿತ್ತೊ
ಸೌಖ್ಯಾವಹಂ ॥೩೧

ತರಳಕಟಾಕ್ಷದಿಂದಡರೆ ನೋಡುವ ಮೆಲ್ಲನೆ ವಕ್ತ್ರಕಂಜಮಂ ।
ತಿರುಪುವ ಪುರ್ವಿನಿಂದಡರೆ ಜರ್ವುವ ಮೇಲುದನೊಯ್ಯನೊಯ್ಯ
ನೋ ॥ ಸರಿಸುವ ಮೌನದಿಂ ನೆಲನನುಂಗುಟದಿಂ ಬರೆವಶ್ರುಧಾರೆಯಂ ।

ಸುರಿವ ಬೆಡಂಗದೇಂ ಮನದೆಗೊಂಡುದೊ ಕೋಪದೊಳೆನ್ನ ನಲ್ಲಳಾ ॥
(ಮಧ್ಯೆ)

ಪ್ರಗಲ್ಭೆ :—

ಅನುರಕ್ತೆ ಸರಸತರಮಾ ।
ನಿನಿ ಪರಿಚಿತೆಯಖಿಳವಿಷಯನಿಶ್ಚಿತಮತಿ ಕಾ ॥
ಮಿನಿಯೆನಿಸಿದಾಕೆ ಕವಿಕಾ ।
ಮನ ಮತದಿಂ ಪ್ರಗಲ್ಭೆಯೆನೆ ಪೆಸರ್ವಡೆಗುಂ ॥ ೩೩

ಸುರತದಲಂಪಿನಿಂಪುಗಳ ಪೆಂಪನವಂ ಪೊಗಟಲ್ಕೆ ಬೇಡವಂ ।
ತಿರಲಿ ಮದೀಯವಲ್ಲಭೆಯ ಮೇಳಮುಮಾಕೆಯ ರೂಪುಮಾತ್ಕಳೋ ॥
ದರಿಯ ವಿಳಾಸಭಾವಮುಮವಳ್ಗಳವಟ್ಟ ವಿಭಾವಮುಂ ನಿರಂ ।
ತರಮೆರ್ದೆಗೊಂಡುದಚ್ಚರಿದುದದರ್ದಡಂಗಿದುದೆನ್ನ ಚಿತ್ತದೊಳ್ ॥ ೩೪

ಅನಿಮಿತ್ತ[3]ಸ್ಮೇರಹಾಸಂ ಚತುರಚತುರಿಕಾವ್ಯಾಜವಕ್ರೋಕ್ತಿಮಿಥ್ಯಾ । ವಿನಯವ್ಯಾಪಾರಮಪ್ರಸ್ತುತಪರಗೃಹವಾರ್ತಾಂತರಂ ನೋಡಲಪ್ರ ॥ ಶ್ನನಿರುದ್ಧಾಳೋಕಮಪ್ರಾರ್ಥಿತಸಮುಚಿತತಾಂಬೂಲದಾನಂ ವೃಥಾಲಿಂ । ಗನಮುಸ್ಮಜ್ಜೀವಿತಾಧೀಶೆಯ ಕಲುಷಮದಿನ್ನುಂ ಮನಂಗೊಳ್ವುದೆನ್ನಂ ॥ ೩೫ (ಪ್ರಗಲ್ಭೆ)

ಇವರೊಳಗೆ ಮುಗ್ಧೆ ಪ್ರೌಢೆಗಾ ।
ಗೆ ವಿಕಲ್ಪದೊಳುಱಿದ ಭೇದವಿರ್ತೆಱನದಱಿಂ ॥
ದವನಱಿಗೆ ಲಕ್ಷ್ಯಲಕ್ಷಣ ।
ವಿವರಣೆಯಂ ಪೇಳ್ವೆನಿಂತು ಪದ್ಯೋಕ್ತಿಗಳಿಂ ॥ ೩೬
ಧೈರ್ಯಾವಲಂಬೆಯೆನಿಸಿದ ।

---

೧. ವಿದಗ್ಧಭಾವ. ಖ॥ ೨. ವಿಳಾಸ. ಖ॥ ೩. ಸ್ಮೇರವಕ್ತ್ರಂ. ಖ॥

ಭಾರ್ಯೆಯೆ ಧೀರಾಭಿಧಾನಮಂ ತಾಳ್ದುಗುವಾ ॥
ಧೈರ್ಯಚ್ಯುತೆಯೆಂದೆನಿಸಿದ ।
ಭಾರ್ಯೆಯೆ ಭಾವಿಪೊಡಧೀರೆಯೆನೆ ಪೆಸರ್ವಡೆಗುಂ ॥ ೩೭

ಮುಳಿದಿರೆ ನಲ್ಲಳಂ ತಿಳಿಪದಾಂ ಮುಳಿದಿರ್ದೊಡಮಿರ್ಕೆಯೆಂದು
ಕ । ಣ್ಗಳನರೆಮುಚ್ಚಿಕೊಂಡು ಪುಸಿನಿದ್ರೆಯೊಳಿರ್ಪುದುಮಾಗಳಾಭ
ವಾ ॥ ಕುಳಿತೆ ಮನಕ್ಕೆ ಸೈರಣೆಯುನಿತ್ತರಲಾರದೆಂಬುಲ್ದು ತನ್ನೊ
ಮು । ವ್ಮುಳಿಸುತುಮಿರ್ದ ಮತ್ಪ್ರಿಯೆಯ ಭಂಗಿ ತೊಲಲ್ದಪುದೆನ್ನ
ಚಿತ್ತದೊಳ್ ॥ ೩೮		(ಅಧೀರೆ)

ಇನಿಯಳ ಕೋಪಮಂ ತಿಳಿಪದಾಂ ಮಱವಟ್ಟವನಂತೆಗೆಯ್ದು ಕೆ ।
ವ್ಮನೆ ಬಗೆನೋಡಲಿರ್ದೊಡಿನಿಸಿರ್ದಿರಲಾರದೆಯೆನ್ನಮೇಲಿದೇ ॥
ವನಗಿದನೆಂದು ಮಂಚದೆಡೆಯಲ್ಲಿನಿಸತ್ತಲೆ ಸಾರೆನುತ್ತಮು ।
ರ್ದನುಮಿಸಿ ನೂಂಕಿ ನೋಡಿ ತೆಗೆದಪ್ಪುವ ನಲ್ಲಳನೆಲ್ಲಿ ಕಾಣ್ಬೆನೋ ॥

ತಿಳಿಪಲ್ಕಾಲ್ಗೆಱಗುತ್ತೆ ಮೆಲ್ಕಡುಪಿನಿಂ ಕೇಳಾಗ್ರಹಂಗೆಯ್ದ
ಫೂ । ತಳದೊಳ್ನೂಂಕಿ ಸಖೀಜನಂಗಳಿರೆ ಕಾಂತಾಲೋಕಮುರ್ಧಾಕ್ಷ
ಮು ॥ ಗಳನಾದಂ ನಯಮೆಲ್ಲಮಂ ನುಡಿಯುತುಂ ಹೃಷ್ಟಾಂತನುಂ ಕಾಂ
ತೆ ಕ । ಣ್ಗಳ ನೀರಂ ಮಿಡಿಯುತ್ತಮೇನೊದೆದಳೋ ಕಾಲ್ಗಲೊ
ಳಾವೇಗದಿಂ ॥ ೪೦		(ಧೀರೆ)

ಇಂತಾಸ್ವಕೀಯೆ ಪಡಿಮೂ ।
ಱು ತೆಱನೆಂದೊಂದು ಭೇದಮಂ ತಿಳಿಪಿದೆನೋ ॥

---

೧. ನೆವನಿದ. ಖ॥		೨. ಕಾಲ್ಗೆಱಗಲ್ಕೆ ಮೇಲ್ಕಡುಪಿನಿಂ ಕೇಶಗ್ರಹಂ. ಕ॥
೩. ಜನಂಗಳಿದಿರೊಳ್ಕಾಂತಾವಲೋಕೇಕ್ಷಣಂ. ಕ॥		೪. ಹೃಷ್ಟಾನನಂ. ಕ॥

ರಂತೆ ಪರಕೀಯೆ ನೋಡೆ ನಿ।
ತಾಂತಂ ಕನ್ನಿಕೆಯುಮೂಢೆಯುಂ ತಾನಕ್ಕುಂ ॥೪೧
ಅವಿವಾಹಮಂಗಳಾಂಗೋ।
ತ್ಸವೆ ಕನ್ಯಾಹ್ವಯಮನಾವಗಂ ತಾಳ್ದುಗುಮಂ ॥
ತೆ ವಿವಾಹಮಂಗಳಾಂಗೋ।
ತ್ಸವದಿಂದೂಢಾಭಿಧಾನಮಂ ಪ್ರಕಟಸುಗುಂ ॥೪೨
ಸುರಭಿಸ್ವೀಕೃತಿ ಗೀತರಕ್ತತೆ ವಿಭೂಷಾಪೇಕ್ಷೆ ತಾಂಬೂಲರಾ।
ಗರಸಾಪೇಕ್ಷೆ ಕಟಾಕ್ಷವೀಕ್ಷಣರತವ್ಯಾಪಾರವೆಂಬೀಮಹೋ।
ದ್ಧುರಪಂಚೇಂದ್ರಿಯದರ್ಪವೊತ್ತರಿಸೆ ಕೈಮಿಕ್ಕಿರ್ಪೊಡಿಂತೀತನೂ।
ದರಿ ಸೊಲ್ವಳ್ತಳೆಯಲ್ ಸ್ವಯಂವರವರಪ್ರಸ್ತಾರಮಾಂಗಲ್ಯಮಂ ॥೪೩
(ಕನ್ಯಾನಾಯಿಕೆ)
ತಿಳಕಮನೋಸರಿಸುವ ಕ।
ಜ್ಜಳಜಳಮಂ ತೊಡೆವ ಕುರುಳನೊತ್ತುವ ನೆವದಿಂ ॥
ದೆಳಸಿ ಕಿಱುಕಿಱಿದು ಪೊಸಮದ।
ವಳಗೆಯ ಸಾಧ್ವಸಮನರಸನೊಯ್ಯನೆ ಕಳೆದಂ ॥೪೪
(ಊಢಾನಾಯಿಕೆ)
ನೆಱೆಯೆ ಪರಕೀಯೆ ಪದೆದೀ।
ತೆಱನೆಂಬುದನಱಿಯೆ ಪೇೞ್ದಿನಿನ್ನಱಿಗೆ ಬುಧರ್ ॥
ಕುಱುಪಂ ಪಣ್ಯೆಗೆ ಮನದೊಂ।
ದೆಱಕಂ ಸಾಮಾನ್ಯಮಪ್ಪುದಱಿನೊಂದು ಕೆಱಂ ॥೪೫
ಮುಳಿವ ಕನಲ್ವ ಕಂಪಿಸುವ[3] ಕಾಡುವ ಬೇಡುವ[4] ಮೇಕುದೋರ್ಪ

---

೧. ಳಾತ್ಯುತ್ಸ. ಖ॥ ೨. ರ್ಪಳಿಂತೀ. ಖ॥ ೩. ಕಂದಿಸುವ. ಖ॥
೪. ಮೇಳದೊಳಿರ್ದುಸಾರ್ದುಮ। ತ್ರೈಳಸುವ ಲಲ್ಲೆಗೆಯ್ವ. ಖ॥

ಕೂ। ರ್ಪೆಳಸುವ ಲಲ್ಲಿಗೆಯ್ವ ಬಗೆದೋರ್ವ ಮನಂಗುಡದಿರ್ಪ ಕೈತ
ವಂ ॥ ಗಳೊಳರುತಾಗಳುಂ ಹರೆಯುಮಿಲ್ಲದೆಯುಂ ನೆಱಿದಿರ್ಪಳೋ
ಇವ। ಳ್ಕೆಳೆಯೊಳೆ ಕೊಂದು ಕೂಗಿದವಳೇೞಲೆವ್ರೋದೊಡೆ ಬಾಳಲೀ
ವಳೇ ॥೪೬ (ಪಣ್ಯನಾಯಿಕೆ)

ಸತತಂ ಸ್ವಕೀಯೆ ಪದಿಮೂ।
ಱ ತೆಱಂ ಪರಕೀಯೆಗೆರಡೆ ಭೇದಂ ಪಣ್ಯಾ ॥
ಸತಿಗೊಂದೆ ಮಾರ್ಗಮೆಂಬುದ।
ನತಿಶಯುಮೆನೆ ತಿಳಿಯೆ ಪೇೞ್ದೆನೆನ್ನಱುವನಿತಂ ॥೪೭

ಇಂತೞುಯೆ ಪೇೞ್ದ ಪದಿನಾ।
ಱುಂ ತೆಱದ ವಧೂಜನಂಗಳೊಳಗೊರ್ವಳವ ॥
ಸ್ಥಾಂತರಮೆಂಟುಂ ಭೇದ ಮ।
ವಂ ತವೆ ತೞಸಂದು ಪೇೞ್ವೆನೆನ್ನಱುವನಿತಂ ॥೪೮

ಪ್ರಕಟಾಖ್ಯಂ ಸ್ವಾಧೀನಪ।
ತಿಕೆ ಖಂಡಿತೆ ವಿಪ್ರಲಂಭೆಯಭಿಸಾರಿಕೆ ವಾ ॥
ಸಕಸಜ್ಜಿಕೆ ಗತಭರ್ತಾ।
ರಿಕೆಯಭಿಸಂಧಿಕೆ ಸಮುತ್ಕೆಯೆಂದೆಂಟು ತೆಱಂ ॥೪೯

೧. ಸ್ವಾಧೀನಪತಿಕೆ :—

ಅನುಕೂಲಮತಿಯಿನಾತ್ಮೇ।
ಶನನುದಿನಂ ಕೆಲದೊಳಿರ್ದು ಮಂಡನಮಂ ಕಾ ॥
ಮಿನಿಗೆ ಪೊಸೆಯಿಸುವ್ರೊಡಾವಧು।

೧. ಗೊಳಿಸುವತಾಗಳುಂ. ಖ॥　　೨. ಪ್ರಕಟಂ ತಾಂ. ಖ॥
೩. ಕೇಳ್ಗತಪತಿವಾಸಕಸಜ್ಜಿಕೆಯಭಿಸಂಧಿಕೆ। ಯುತ್ಕೆಯೆಂದಿವೆಂಟು ತೆಱಂ. ಖ॥

ಜನದಿಂ ಸ್ವಾಧೀನಪತಿಕೆಯೆನೆ ಪೆಸರ್ವಡೆಗುಂ ‖ ೫೦

ಪೊಲ್ಲಮೆಗಂಡವರ್ಮುಳಿದು ತಮ್ಮಯ ತೊೞ್ತರನೆಂತು ಮಾೞ್ಪ ಡಂ। ಸಲ್ಲದೆ ಲೋಗರಂ ಬೆಸಸು ನಿನ್ನಯ ವಾಮಪದಪ್ರಹಾರಮಂ ‖ ನಲ್ಲಳೆ ಕೋಪದಿಂದೆನಗೆ ನೀಂ ದಯೆಗೆಯ್ದೊಡೆ ನೋಗುಮೆಂಬೆನೀ। ಮೆಲ್ಲಡಿಯೆನ್ನ ಮೆಯ್ಯ ಪುಳಕಂಗಳನೆನ್ನ ಕುರುಳ್ಗಳೊತ್ತಿನಿಂ ‖ ೫೧

ವಿರಚಿಸು ಹಾರಮಂ ಪಱಿದು ಸೂಸಿದುದೊಯ್ಯನೆ ಸೈತುಮಾಡಿವಂ। ಪರೆದ ಕುರುಳ್ಗಳಂ ಕಿವಿಗಲಂಕರಿಸೋಲೆಯನಿಕ್ಕು ಬೇೞ್ವಿ ‖ ಸ್ತರಿಸಿದ ಬಾಯ ತಂಬುಲಮನೊಳ್ನುಡಿಯಂ ಪಿಡಿದೀಯೆನುತ್ತ ಸುಂ। ದರಿ ಸುರತಾಂತ್ಯದೊಳ್ಸರಸದಿಂ ಬೆಸವೇೞ್ವುದನೆಲ್ಲಿ ಕಾಣ್ಬೆನೋ ‖ ೫೨

(ಸ್ವಾಧೀನಪತಿಕೆ)

೨. ಖಂಡಿತೆ :—

ಗಂಡಂ ಪೆಱಳೊರ್ವಳೊಳೆರ್ದೆ।
ಗೊಂಡಿರೆ ವಲ್ಲಭನನನ್ಯೆಯಿಂ ಕೇಳ್ವಡೆದಾ ‖
ಪೆಂಡತಿ ಕಾಮನ ಮತದಿಂ।
ಖಂಡಿತಭರ್ತಾರಿಕಾಭಿಧಾನಮನಾಳ್ಗುಂ ‖ ೫೩

ಸುದತೀ ಚಂಪಕಕರ್ಣಪೂರವಿದೆ ನೀಂ ತ್ವತ್ಕರ್ಣಸಂಶೋಭೆಗಾ। ಸ್ಪದಮಂ ಮಾಡೆನೆ ಸಾಲ್ಗುಮೋ ಪನೆ ಭವತ್ಸೌಭಾಗ್ಯಸಂವಾದಘೋ ‖ ಷದಿನಿಂಬಾಗಿಪ್ಪುದೆನ್ನ ಕರ್ಣವದಱಿಂದಿಂಬಿಲ್ಲ ತಾನಿಂತಿದ। ಕ್ಕಿದನು ಯ್ದಂದಿನ ನಿನ್ನವಳ್ಗೆಕುಡು ಕರ್ಣೋತ್ತಂಸಮಂ ಮಾಡುಗುಂ ‖ ೫೪

ಇನಿತಂ ನಂಬೆಲೆ ಮನ್ಮನೋರಮಣಿ ನಿನ್ನೆನ್ನಂ ಕರಂ ನೋೞ್ಪಡೀ।

---

೧. ನನ್ನರಿಂಕೊಳ್ಪಡೆ. ಕ‖

೨. ಇಂಬಾಗಿರೆ। ಕರ್ಣಪೂರಮೆನಗಿಂಬಾಗರ್ದುನಿಂಬಿಲ್ಲದಕ್ಕಿದನು. ಖ‖

ತನು ಬೇಱಿಲ್ಲದೆ ಜೀವವೊಂದೆ ನಮಗೆಂಬೀನಿನ್ನ ಮಾತೀಗಳೋ ॥
ಪನೆ ಪ್ರೋ ನಿಶ್ಚಯಮಾದುದಲ್ಲದೊಡೆ ನಿನ್ನೀಮೆಯ್ಯನುರ್ಚಿರ್ದ ನೂ।
ತನರಕ್ತಾರ್ದ್ರನಖಕ್ಷತವ್ಯಥೆಗೆ ಪೇೞ್ನಿನ್ನೀಮನಂ ನೋವುದೇ ॥ ೫೫

(ಖಂಡಿತೆ)

೩. ವಿಪ್ರಲಂಭೆ :—

ಇನಿಯಂ ಬೆಸಸಿದ ಸಂಕೇ।
ತನ ಸದ್ಮಮನೆಯ್ದಿ ಸುರತಸುಖಮುಂ ತನ್ನೋ ॥
ಪನೊಳಲ್ಲಿ ಪಡೆಯದೞಲಿಂ।
ಮನದೊಳ್ನೋವಬಲೆ ವಿಪ್ರಲಂಭೆಯೆನಿಕ್ಕುಂ ॥೫೬

ಓಪನೆ ನನ್ನ ನಿನ್ನ ಪ್ರೋೞ್ಗಾಗಳೆ ನೀಂ ಬರವೇೞ್ದೆಯೆಂದೊಡಾ।
ನಾಪುಳಿನಕ್ಕೆ ಬಂದಱಿಸಿ ಕಾಣದೆ ನಿನ್ನನೆ ದಿಟ್ಟಿಗೆಟ್ಟ ಸಂ ॥
ತಾಪದಿನಾಗಳಲ್ಲಿಯ ಮದಾಳನಿನಾದಮುಮುತ್ಕಕೋಕಿಲಾ।
ಳಾಪಮುಮಾವನದ್ರುಮಮುಮೆನ್ನನೆ ಕೊಂದಪುವೆಂದು ಬೆರ್ಚಿದೆಂ ॥
ನೂತವಿಹಂಗಸಂಕುಳಸಮುದ್ಗತನಾದಮನೆಯ್ದೆ ಕೇಳ್ದು ಕಾ।
ಮಾತುರೆ ನಿಲ್ಲದಾಯೆಡೆಯೊಳಿರ್ದನೆ ಗೆತ್ತಿರದೆಯ್ದೆವಂದು ಸಂ ॥
ಕೇತನಮಾಧವೀಸದನದೊಳ್ನಿಜಕಾಂತನ ರೂಪುಗಾಣದು।
ತ್ಪಾತವಿಷಾದೆ ಬೇಸಱೊಳೆ ತುಳ್ಕದಳೊರ್ಮೆಯೆ ಕಣ್ಣ ನೀರ್ಗಳಂ ॥

(ವಿಪ್ರಲಂಭೆ)

೪. ಅಭಿಸಾರಿಕೆ :—

ಇರುಳೆನ್ನದೆ ಕಟ್ಟಲೆ ಕಡು।
ವಿರಿದೆನ್ನದೆ ದುರ್ಗಮೆನ್ನದೋವನೊಳೆತ್ತಂ ॥

---

೧. ಮಾಯ್ತಿಲ್ಲ. ಖ॥ ೨. ಮೆಯ್ಯೊಳೊರ್ವಿರ್ದ. ಖ॥
೩. ಓಪನೆನಿನ್ನನಿನ್ನೆನೆಡೆ.ಖ॥ ೪. ಮತ್ತ.ಖ॥ ೫. ಸರೋದಿತ.ಖ॥ ೬. ದ್ಯೈತನ.ಖ॥

ನೆರೆಯಲ್ಪರಿದೆಯ್ದುವ ಸುಂ ।
ದರಿಯಭಿಸಾರಿಕೆಯೆನಿಪ್ಪ ಪೆಸಱುಂ ಪಡೆಗುಂ ॥೫೯

ರಸೆಯಿಂ ಮೇಗಣ್ಗೆ ಮೇಣ್ಪುರ್ವಿದುದೊ ಗಗನದಿಂದಿತ್ತ ಮೇಣ್ ಬಿ
ೞ್ದುದೋ ನಾ । ಲ್ದೆಸೆಯಂ ಮೇಣ್ತೀವಿತೋ ಕೞ್ತಲೆ ಜಗಮನಗು
ರ್ವಾದುದೀಮಬ್ಬುರ್ ಪೋ ನಿ॥ ಟ್ಟಸಲಾರ್ಗಂ ಬಾರದೆಂಬಂತಿರೆಯುಮಿ
ರವೆ ನಿನ್ನೋವಳೆಯ್ತಂದವಳ್ಭೇ । ದಿಸಿ ನೀನಿರ್ದಲ್ಲಿಗೇಂ ಸಾಧಿಸಿದ
ಳೊ ನೃಪ ಸಿದ್ಧಾಂಜನಶ್ರೀಯನೊರ್ವಳ್ ॥೬೦

ಬಿಱುಸಿಡಿಲೇೞ್ಗೆ ಸುತ್ತಿಡಿದ ಕೞ್ತಲೆ ಕಾರ್ಮುಗಿಲೊಡ್ಡು ಬಂದುಬಂ ।
ದೆಱಗುವ ಬಲ್ಲಿತಪ್ಪ ಸರಿ ಕಣ್ಗಳೊಳುಳ್ಕುವ ಮಿಂಚು ಮಾಣದ ॥
ೞ್ಕಱ್ ಗಜಱುತ್ತುಮಿರ್ಪ ಘನಘರ್ಜನೆಯೆಂಬಿವು ಕಾತರತ್ವಮಂ ।
ಮೆಱಸಿಸಲಿಂತು ಮಾರ್ಕಮೆ ನಿಜೇಶ್ವರನಲ್ಲಿಗೆ ಪೋಪ [2]ನಲ್ಲಳಾ ॥೬೧

(ಅಭಿಸಾರಿಕೆ)

೫. ವಾಸಕಸಜ್ಜಿಕೆ :—

ಮನೆಗಿನಿಯನ ಬರವಂ ನೆ ।
ಟ್ಟನೆ ನಿಶ್ಚೈಸಿರ್ದು ತನ್ನುಮಂ ಮನೆಯುಮನಂ ॥
ಗನೆ ಕೂಡಿ ಮೆಱೆವ್ರೊಡಾಕಾ ।
ಮಿನಿ ವಾಸಕಸಜ್ಜಿಕಾಭಿಧಾನಮನಾಳ್ಗುಂ ॥೬೨

ಮನೆಯುಮನೆಯ್ದೆ ತನ್ನುಮನಲಂಕರಿಸಿರ್ದು ನಿಜಪ್ರಿಯೋಪ
ಗೂ । ಹನದೃಢಭಂಗಮಾದ ತನುಗೇಕೆ ವಿಲೇಪಮಿದೆಂದು [3]ದಿವ್ಯಚಂ॥
ದನಮೃಗನಾಭಿಚರ್ಚೆಯುಮನೊಲ್ಲದೆ ಮಾಣ್ದಳದಂತೆ ಕಾಂತೆ ಕಾಂ ।
ತನೊಳುಱದಿರ್ಪವಳ್ಗಮವಿಲೇಪದಿನಿರ್ಪುದು ತಕ್ಕುದೆನ್ನಿರೇ ॥೬೩

೧. ಮಾರವು. ಕ॥ ೨. ನಲ್ಲಳಂ. ಖ॥ ೩. ದೇಂಮನೋಜ್ಞಗಂಧಪಾವನ. ಕ॥

ಮಂಗಳಭೂಷಣಂಗಳನಲಂಕರಿಸಿರ್ದೆಡೆಯಾಡುತಿರ್ಪವಳ್ ।
ಬಂಗದೆ ಚೇಟಿಯರ್ತರಿಪದಿಂ ಪ್ರಿಯನಿಂ ಬರೆ ಕಂಡು ಗೆಂಟರಿಂ ॥
ದುಂಗನಖಾಂಶುಮಾಲೆಯೆಸೆಯಲ್ನಡೆದರ್ಘಪದಂಬರಂ ನಿಜೇ ।
ಶಂಗಿದಿರೆಲ್ದು ಬಂದು ಮೆಱೆದಳ್ ಧವಳೇಕ್ಷಣೆ ತನ್ನ ನಲ್ಮೆಯಂ ॥೬೪

(ವಾಸಕಸಜ್ಜಿಕೆ)

೬. ಗತಭರ್ತಾರಿಕೆ :—

ಪರವಿಷಯಗಮನದೊಳ್ತಡೆ ।
ದಿರೆ ನಿಜಪತಿ ಕಾಂತೆ ಪತಿಯ ತಡೆದಿರವನದಂ ॥
ಸ್ಮರಿಯಿಸಿ ಮಱುಗುವ್ರೊಡಾಸುಂ ।
ದರಿ ಗತಭರ್ತಾರಿಕಾಭಿಧಾನಮನಾಳ್ಗುಂ ॥೬೫

ಪರಿವಿಡಿಗೆಯ್ಯೆ ರಾಜಶುಕನೋಪನ ಸಾಹಸಮಾಲೆಯಂ ತಳೋ ।
ದರಿ ಪರಿತಂದು ತಾನೆ ಗಿಳಿಯಂ ಮೊಗದೊಳ್ತೆಗೆದಪ್ಪಿ ಕೊಂಡು ಪೀ ॥
ವರಕುಚಪೀಠದೊಳ್ನಿಲಿಸಿ ಬಾಷ್ಪದಿನಂದಭಿಷೇಕಪೂಜೆಯಂ ।
ವಿರಚಿಸಿ ಭಾವಿತಾತ್ಮೆ ಮೆಱೆದಳ್ ಪತಿಗಂಗನೆ ತನ್ನ ನಲ್ಮೆಯಂ ॥೬೬

ಘನಸಮಯಕ್ಕೆ ಬಾರದಿರಲಾಂಬರವಾಱುತುಮಿರ್ಪೆನೆಂದು ಮೆ ।
ಲ್ಲನೆ ಪಲವಂದದಿಂ ಕಲಿಸಿ ನಂಬಿಸಿ ಮತ್ಪತಿ ಪೋದನೋವ್ರೊ! ಶೊ ॥
ಟ್ಟನೆ ನಭದೊಳ್ಕಱಂಗಿ ಮುಗಿಲೀನೆಗೆದಿರ್ದಪ್ರು ನಲ್ಲನೇಕೆ ಬಾ !
ರನೆಯೊ ತಗುಳ್ದು ಕೇಗಿದಪ್ರುದೆನ್ನಿರ್ದ* ಪವ್ವನೆ ಪಾಱೆ ಕೇಕಿಗಳ್ ॥

(ಗತಭರ್ತಾರಿಕೆ)

೭. ಅಭಿಸಂಧಿಕೆ :—

ವಿನಯದಿನಡಿಗೆಱಗಿದ ನ ।
ಲ್ಲನನೊಲ್ಲದೆ ಜಡಿದು ಕಳೆದು ಪಶ್ಚಾತ್ತಾಪಂ ॥
ಮನದೊಳ್ಸಂಧಿಸೆ ನೋವಂ ।

ಗನೆಯಭಿಸಂಧಿಕೆಯೆನಿಪ್ಪ ಪೆಸರಿಂ ಪಡೆಗುಂ ॥೬೮

ಮುಳಿಯದೆ ಮುನ್ನಮೇಕಿರೆನೊ ಕಾಲ್ವಿಡಿದೋವನುಮೆನ್ನನಕ್ಕಟಾ ! ! ತಿಳಿಪಿದೊಡೇಕೆ ಪೇೞ್ತಿಳಿಪುಗೊಳ್ಳೆನೊ ವಲ್ಲಭನಲ್ಲಿಗೀಗಳಾಂ ॥ ತಿಳಿದಪೆನೆಂದು ಚೇಟಿಯುರನಟ್ಟುವೆನೋ ಸುಡು ಕಷ್ಟಮೆಗ್ಗಿನಿಂ । ಮುಳಿವುದುಮಾಗಳಾಂ ತಿಳಿಯದಿರ್ಪುದುಮೆನ್ನಯ ಪಾಪಮೆನ್ನಿರೇ ॥೬೯

ವಿನಮಿತನಾದ ವಲ್ಲಭನನೊಲ್ಲದೆ ಚೇಟಿಯುರುಂ ಗಡಕ್ಕ ನೀಂ । ಮುನಿಸನೆ ಮಾಣ್ಬುದೆಂದೊಡಮದಂ ಬಗೆಗೊಳ್ಳದೆ ಮಾಯ್ದು ತೊೞ್ತಿನಾ ॥ ಮುನಿಸನೆ ತಾಳ್ದಿದೆಂ ಮುನಿಸೆ ಪಾಪನಿಬಂಧನಮಾದುದಲ್ಲನೇ । ಎನಗೆ ಲತಾಂತಮೀಮಳಯಜಂ ಶಶಿರೋಚಿಗಳಂತು ಕಾಯ್ಗುಮೇ ॥೭೦ (ಅಭಿಸಂಧಿಕೆ)

೮. ಸಮುತ್ಕೆ :—

ಇನಿತಾನುಂ ಪ್ರೊೞ್ತಂ ಮನೆ ।
ಗಿನಿಯಂ ಬಾರದೊಡೆ ಪತಿಯ ತಡೆದಿರವಿಂಗಾ ॥
ವನಿತೆ ಮಱುಗುವ್ರೊಡೆ ಕವಿಕಾ ।
ಮನ ಮತದಿಂದುತ್ಕೆಯೆಂಬ ಪೆಸಱು ಪಡೆಗುಂ ॥೭೧

ಇನಿಯಂ ಬಾರದೆ ಮಾಣ್ದನೇಕೆ ಗಡ ಪ್ರೊೞ್ತಂ ಪೋದುದೇನೆಂದು ಕಾ । ಮಿನಿ ತನ್ನಾಸೆ ನಿರಾಸೆಯಾಗೆ ಬಿಸುಸುಯ್ಯಂ ಸುಯ್ದು ಪಟ್ಟರ್ದು ಕಂ ॥ ಬನಿಯಂ ತೀವಿ ಕನಲ್ದು ತೊಟ್ಟ ತೊಡವಂ ಬೀಸಾಡಿ ಪ್ರೂಮಾಲೆಯಂ । ಮುನಿಸಿಂದಂ ಪಱಿದಿಕ್ಕಿ ಬೈದು ಸೊಡರಂ ನಿರ್ವೇಗದಿಂ ಬೀಸಿದಳ್ ॥೭೨

---

೧. ಚೇಟಿಯುರನಪ್ಪುರಾಗದಕ್ಕ. ಖ॥ ೨. ವರಂ. ಖ॥ ೩. ಗೊಳ್ಳನೆ. ಕ॥ ೪. ದಲಾಗಳುಂ. ಖ॥ ೫. ಪೋಗದಿನ್ನೇನೆಂದು. ಖ॥

ಇನಿತುಂ ಪೊಲ್ತನದೇಕೆ ಪೇೞ್ತಡೆದನೋ ಮತ್ಕಾಂತನಿರ್ವಂತು ಮೇಣ್ । ಮುನಿಸೇನಿರ್ದುದೊ ಮೇಣ್ಪರಾರ್ಥದೆಡೆಯೊಳ್ತಳ್ವಾದುದೋ ಕೂರ್ಪ ಕಾ ॥ ಮಿನಿಯರ್ಬರ್ಪನನೀೞ್ದು ತಂದಳಿಪಿನಿಂ ಕೊಂಡುಯ್ದರೋ ಪೇೞಿಮೆಂ । ದೆನಸುಂ ಬೆಚ್ಚನೆ ಸುಯ್ದು ಕಾಂತೆ ಸುರಿದಳ್ಬೇಸತ್ತು ಕಣ್ಣೀರ್ಗಳಂ ॥೭೩ (ಉತ್ಕ)

ಇವು ಪೆಂಡಿರವಸ್ಥೆಗಳಾ ।
ನವನೆನ್ನಱಿವಂದದಿಂದಮಱಿಪಿದೆನಿತ್ತಲ್ ॥
ಕವಿಮುಖ್ಯರೞಿಗೆ ಸದ್ಗುಣ ।
ನಿವಹದಿನಿನ್ನವರ ಮೂಱು ತೆಱನೆಂಬುದುಮಂ ॥೭೪
ಕ್ರಮದಿಂದೆ ವಚನಕೋಪ ।
ಪ್ರಮೋದದಿಂ ಪ್ರಕೃತಿಗುಣವಿಭೇದದಿನಱಿಗು ॥
ತ್ತಮನಾಯಿಕೆಯುಂ ನೆಱೆ ಮ ।
ಧ್ಯಮನಾಯಿಕೆಯುಂ ಜಘನ್ಯತರನಾಯಿಕೆಯುಂ ॥೭೫

ಉತ್ತಮನಾಯಿಕೆ :—

ಸತತಂ ಪ್ರಿಯೋಕ್ತಿಯುಂ ಪ್ರಕ ।
ಟತಕೋಪಂ ಪ್ರಣಯವಚನವಾತ್ರೋಪಶಮಂ ॥
ಸತಿಗಾಗೆ ನಿಯತದಿಂದಾ ।
ಸತಿಯುತ್ತಮನಾಯಿಕಾಭಿಧಾನಮನಾಳ್ಗುಂ ॥೭೬

ಪ್ರಿಯ ನಿನ್ನೊಂದು ವಿಭೂತಿ ವಲ್ಲಭ ಭವತ್ಕ್ರೀಡಾರಸಂ ಕಾಂತ ನಿ। ನ್ನಯ ರೂಪೆನ್ನಧಿನಾಥ ನಿನ್ನಯ ಗುಣಂ ಮಜ್ಜೀವಿತಾಧೀಶ ನಿ ॥ ನ್ನಯ ಗಂಭೀರತೆ ನಲ್ಲ ನಿನ್ನಭಿನಯಂ ಪೇೞಿನ್ನನೊಲ್ದಾಟಸಲ್ ।

೧. ಮೇಣ್ಪದರ್ಥ, ಖ॥

ನಯಮಂ ಭಾವಿಸಲಿಂಬುಕೆಯ್ಯಲೊಲಿಸಲ್ಬಿತ್ತಂಗೊಳಲ್ಸಾಲದೇ॥೭೭
(ಇದು ಉತ್ತಮನಾಯಿಕೆಯ ವಚನಂ)

ಇನಿತುಂ ಪರ್ವಿನ ಪುರ್ವ ಮಾತುಮುಡುಗಿತ್ತಿಲ್ಲಲ್ಕಿಯುಂ ಮುನ್ನ ವಾ। ಲ್ಪನಿತುಂ ಕಣ್ಬನಿ ಕುಂದದಂದುಱಿ ಮನಂಗೊಂಡಿರ್ದೊಡಾ ನೀೞ್ದ ತ॥ನ್ನನೊಱಲ್ದಪ್ಪಿದೊಡಾಗಳೆನ್ನ ತೊಡೆಯೊಳ್ಕಳ್ದರ್ದು ಕೈ ಮಿಕ್ಕು ಬೆ। ಚ್ಚನೆ ಸುಯ್ದಿರ್ದ ಕಣ್ಣ ನೀರೆ ತಿಳಿಪಿತ್ತೆನ್ನೀಪ ಳುತ್ಕೋಪಮಂ॥೭೮ (ಇದು ಉತ್ತಮನಾಯಿಕೆಯ ಕೋಪಂ)

ಮುಳಿಸೇಂ ಕಾರಣಮೆನ್ನೊಳಿಲ್ಲ ಮಱುಕಂ ಕಾರುಣ್ಯದಿಂ ಕೇಳ ನ। ಲ್ಲಳೆ ನೀಂ ನಿನ್ನಯ ತೊಟ್ಟನಿಂತು ಬೆಸಸಲ್ಪೇೞ್ತಕ್ಕುದೇ ಮಾ ಣ್ಬುದೀ॥ ಕಲುಷಾಳಾಪಮನೆಂದು ಕಾಲ್ವಿಡಿದೊಡೇೞ್ವಂದೆತ್ತಿ ಬಾ ಷ್ಪಾಂಬುಕ। ಜ್ಜಳಪಂಕಾಂಕಿತಸಾಂದ್ರವೃತ್ತಕುಚದಿಂ ತಳ್ತಪ್ಪಿದಳ್ ನಲ್ಲನಂ॥೭೯ (ಇದು ಉತ್ತಮನಾಯಿಕೆಯ ಪ್ರಸಾದಂ)

ಮಧ್ಯಮನಾಯಿಕೆ :—

ಜನಿತಪ್ರಿಯಾಪ್ರಿಯಾಳಾ।
✓ ಪನಿರತೆ ಜನವಿದಿತಕಲುಷೆ ವಿಷಮಾವಿಷಮಾಂ॥
ಕನಿಜಸ್ವಭಾವೆಯೆನಿಪಂ।

---

೧. ಪರ್ವುತ್ತ. ಕ॥ ೨. ನೆೞ್ದ. ಖ॥

ಚಲನಪ್ರಾಗ್ಭಾಗನೇತ್ರಾಂಜನಜಲಪರಭಾಗಸ್ಥಿತೋಚ್ಚಸ್ತನದ್ವಂ।
ದ್ವಲಸತ್ಕಾಶ್ಮೀರರಾಗಂ ಭುಜಶಿಖರಬಹಿರ್ನ್ಯಸ್ತಬಾಲೇಯಚಂಚ॥
ತ್ತಿಲಕಾಂಚಚ್ಚಾರುಕಂಠಸ್ಥಗಿತಭುಜಲತಾಶ್ಲಿಷ್ಟಕೇಯೂರಚೆಹ್ನಂ।
ತಿಳಿಪಿತ್ತಾತ್ಮೇಶ್ವರಂ ಪ್ರಾರ್ಥಿಸಿ ತಿಳಿಪದೆಯುಂ ಕೋಪಮಾಕಾಂತೆಗಾಗಳ್॥

ಈ ಪದ್ಯವೂ ಗ॥ಪುಸ್ತಕದಲ್ಲಿ ಉತ್ತಮನಾಯಿಕೆಯ ಕೋಪಕ್ಕೆ ಉದಾಹರಣೆ ಯಾಗ ಕೊಟ್ಟಿದೆ.

ಗನೆ ಮಧ್ಯಮನಾಯಿಕಾಭಿಧಾನಮನಾಳ್ಗುಂ ॥೮೦

ಇನಿತಂ ನಿಶ್ಚಯಮೆಂದೆ ನಾಥ ಬಗೆಗೊಳ್ ನಿನ್ನಾಣೆ ನಿನ್ನೋಪಳೆ । ಳ್ಳನಿತುಂ ದೋಷಮನುಂಟುಮಾಡದೆ ಮನಂಗೊಂಡಿರ್ಪಿನಂ ನಿನ್ನ ತೊ॥ ಜ್ತನೆ ಸಿಂದಿರ್ಪುದುಮೇತಱಿಂದಲಸಿ ಮೆಯ್ವಿಟ್ಟಾಡಿ ನೀಂ ನಿನ್ನನಾ । ಯ್ತನಮಂ ತೋಱಿದೊಡೆನ್ನ ಮೇಲೆ ಪಱಿಯಿಲ್ಲಾನಿಂದೆ ಕೊಂದಿಕ್ಕು ವೇಂ ॥೮೧　　(ಇದು ಮಧ್ಯಮನಾಯಿಕೆಯ ವಚನಂ)

ಅರುಣಿಮನೇತ್ರಮುದ್ಭ್ರುಕುಟಭಂಗಮತಿಸ್ಫುರಿತಾಧರಂ ನಿರಂ । ತರಪರಿಕಂಪಿತಸ್ತನ ತನೂರುಹಮುದ್ಗತಘರ್ಮಬಿಂದು ನಿ ॥ ರ್ಭರಪರುಷೋಕ್ತಮಾಕುಳತೆಯೊಳ್ ರಮಣಂಗೆ ಪೊದಱ್ದ ಚೆಲ್ವನಾ । ಳ್ದರೆ ಮುನಿದಳ್ಮನಂಬುಗೆ ವಿನೂತನಸದ್ರಸಭಂಗಭೀತಿಯಿಂ ॥೮೨

(ಇದು ಮಧ್ಯಮನಾಯಿಕೆಯ ಕೋಪಂ)

ನಡುಗೆ ಪಯೋಧರಂ ಪೊಡರೆ ಬಾಯ್ದೆಱೆ ಮಿಳ್ಳಿಸೆ ಪುರ್ವು ಕೆಂಪ ನಾ । ಳ್ದೊಡಱಿಸೆ ಕಣ್ಗಳುಣ್ಮೆ ಬೆಮರಾದಮೆ ಕಂಡು ಭಯಾರ್ತನಾ ಮೂ ರ್ತಿ ಕಾ ॥ ಲ್ವಿಡಿಯೆ ಕೃತಾಪರಾಧಿ ನಿಜನೂಪುರದೊಳ್ತೊಡರ್ದ* ಳ್ಗುರುಳ್ಗಳಂ । ಬಿಡಿಸುವ ಗೆಯ್ತದೊಳ್ಮೆಱೆದಳಾವಿಭುಗಾವಧು ತನ್ನ ನಲ್ಮೆಯಂ ॥೮೩　　(ಇದು ಮಧ್ಯಮನಾಯಿಕೆಯ ಪ್ರಸಾದಂ)

ಜಘನ್ಯನಾಯಿಕೆ :—

ಕುಪಿತಾತಿಹರ್ಷವಚನ ।
ಪ್ರಪಂಚೆ ಮತಿಸಂಚಳತ್ವಮಂ ಚಪಳತೆಯಿಂ ॥
✓ ವಿಪರೀತವೃತ್ತಿಯಿಂದಾ ।
ತ್ಮಪತಿಗೆ ನೆವಮಿಟ್ಟುಕಾರಣಂ ದೂಱುತ್ತುಂ ॥೮೪

೧. ನೋಡಿರ್ಪುದು. ಕ॥　೨. ತಿಳಿಪಲ್ಮನಂಬುಗನೆನೂತನಲಸದ್ವಿ್ರಸ. ಖ॥

ಮುಳಿಯಿಸಿದೊಡೆ ಮುಳಿಯದೆ ಪತಿ ।
ತಿಳಿಪೆ ಮನಂಗೊಂಡು ತಿಳಿಯಲೊಲ್ಲದೆ ನಲ್ಲಂ ‖
ಮುಳಿಯಿಸದೆ ಮುಳಿವ ತಿಳಿಪದೆ ।
ತಿಳಿವಬಲೆ ಜಘನ್ಯೆಯೆಂಬ ಪೆಸರಂ ಪಡೆಗುಂ ‖ ೪೫

ಸುಡುಸುಡುಪೋಗೆನೆಂಬೆನಿರಬಾರದು ಪೋದೊಡೆ ನೋಡೆನೆಂಬೆನಂ।ದೊಡೆ ನಯನಂಗಳಂತಿರವು ನೋಡಿದೊಡಂ ನಗದಿರ್ಪೆನೆಂಬೆನಂ ‖ ದೊಡೆ ನಗೆ ನಿಲ್ಲದಾನಗೆಯೊಳಾನವನೋಳ್ಪುದುಮಾಳೆನೆಂಬೆನಂ । ದೊಡೆ ಬಗೆ ಮೇಲೆ ಪಾಯ್ದೊಳಸಿ ತಾನೆ ಕಡಂಗುವುದೇವೆನಾಂ ಸಖೀ ‖

(ಇದು ಜಘನ್ಯನಾಯಿಕೆಯ ವಚನಂ)

ನುಡಿದೊಡೆ ಚುನ್ನಮಂ ನುಡಿದಳೆಂದಪೆ ನಾಣಿಲಿ ಮಾಣಲಾಗದೇ । ತುಡುಗುಣಿಗೆಯ್ತಮಂ ನಿನಗೆ ಮಾಣ್ದೊಡೆ ಸತ್ತಪೆ ನಿನ್ನನೆಂತು ಸೈ‖ ತಿಡುವೆನೊ ಸಂದ ಜೋಡಗನೆಯೆಂದು ಕರಂ ಮುಳಿಸಿಂ ಕನಲ್ದು ಕ । ಣ್ಗಿಡೆ ಜಡಿದುಯ್ದು ಸೊಪ್ಪುಸೊವಡಪ್ಪಿನೆಗಂ ಬಡಿದಳ್ನಜೇಶನಂ ‖

(ಇದು ಜಘನ್ಯನಾಯಿಕೆಯ ಕೋಪಂ)

ಮುಳಿದೊಡೆ ನಲ್ಲನೋಪಳ ಪದಾಂಬುರುಹಕ್ಕೆ ವಿನಮ್ರನಾಗೆ ಜಾ। ವಳ ಮೊಜೆಯಲ್ತು ನೀನೆನಗೆ ಮುಟ್ಟದೆ ಪೋಗೆನೆ ನೋಡಿ ಕಂಡು ಸಂ‖ಚಳಮತಿಯಾಗೆ ಸೈರಿಸದೆ ಬೆಂಬಜಿಯಂ ಪರಿದೆಯ್ದಿ ಮೇಲುದಂ । ಸೆಳೆದೊಡೆ ನಲ್ಲನೊಲ್ಲದೊಡೆ ಕಾಲ್ವಿಡಿದುಯ್ದಳತಿಪ್ರಮೋದದಿಂ ‖ ೪೪

(ಇದು ಜಘನ್ಯನಾಯಿಕೆಯ ಪ್ರಸಾದಂ)

---

೧. ಪಾಯ್ವೆದೆಗೆ. ಕ‖ ೨. ನುಡಿಯದೆ. ಕ‖ ೩. ಪೋಗೆನೆ ಪೋಗೆ ಬಿಟ್ಟು. ಕ‖

ಕ‖ ಪುಸ್ತಕದಲ್ಲಿ ೪೬ನೆಯ ಪದ್ಯವು ಕೋಪಕ್ಕೆ ಉದಾಹರಣೆಯಾಗಿಯೂ ೪೭ನೆಯದು ವಚನಕ್ಕೆ ಉದಾಹರಣೆಯಾಗಿಯೂ ಕೊಟ್ಟಿದೆ.

ಅನುನಯದಿನಿಂತು ವಿದ್ವ ।
ಜ್ಜನನುತಮೆನೆ ನಾಯಿಕಾಪರೀಕ್ಷೆಯ ಸಂಕ॥
ಲ್ಪನೆಯೊಳೆ ಮೂನೂಱೊಂ ।
ತ್ತು ನಾಲ್ಕು ಭೇದಪ್ರಕಾರಮಂ ಪ್ರಕಟಸಿದೆಂ ॥೪೯

ಸಕಳಕಳಾಕಳಿತವಚಃ ।
ಪ್ರಕೀರ್ಣವಚನಾತಿಚತುರಮಧುರೋಕ್ತಿಗಳಿಂ ॥
ಪ್ರಕಟಸಿದಂ ನಾಯಕನಾ ।
ಯಿಕಾಪರೀಕ್ಷೆಗಳನೆಯ್ದೆ ಕವಿಮುಖಮುಕುರಂ ॥೯೦

ಕುಂದದೆ ಕವಿಗಳ್ತಿಳಿಗದ ।
ಅಂದಮನಭಿನಯಿಸಿ ತೋರ್ಕೆ ರಸಮಂ ಕವಿ ಬೇ॥
ಱೊಂದಱೊಳೆ ಕನಕರಚನೆಯೊ ।
ಳೊಂದಿದ ಮಣಿಯಂತುಪಾಶ್ರಯಂಬೆತ್ತೆಸೆಗುಂ ॥೯೧

ಇದನೋದಿ¹ ತಿಳಿದ ಕವಿ ಮೆಱೆ ।
ವುದು ಪೇಳ್ದಭಿನಯಿಸಿ ನಾಟಕಂಗಳನುಂತುಂ ॥
ಪದೆದೊಡೆ ಬರ್ಕುಮೆ ಕಣ್ಣಿ ।
ಲ್ಲದೆಯುಂ ಬಗೆದೆಗೆವರೊಳರೆ ವರ್ಣಕ್ರಮಮಂ ॥೯೨

ನೆರೆ ಕವಿಗಳಿದಱ ಮಾರ್ಗಮ ।
ನಱಿಯದೆಯುಂ ಸ್ವೈರವೃತ್ತಿಯಿಂ ರಸಮಂ ತಾ ॥
ವಱಿಯರ್ಬಗೆವೊಡೆ ಕುರುಡರ ।

---

೧. ಇದನೋಡಿ. ಕ॥　　೨. ಕವಿಗಳಱಿವ. ಕ॥

ತೆಱದಿಂ ಪದರಚನೆಯಲ್ಲಿ ಮಾರ್ಗಂಗಿಡುವರ್ ॥೯೩

ಮುಂ ತಿಳಿಯದಿವಱ ಭೇದಮ ।
ನುಂತೆ ಮದೋದ್ವೃತ್ತನಾಗಿ ಪೇೞ್ದನ ಕೃತಿ ವೈ ॥
ರಂ ತಾನೆ ಮಾೞ್ಪ ಸಭೆಗಳ ।
ಮುಂ[೧]ತಿಱಿಗುಮಗಾಧದೋಷಕೂಪಾಂತರದೊಳ್ ॥೯೪

ವಾಚಕವಾಚಸ್ಪತಿ ವಿ ।
ದ್ಯಾಚತುರಂ ಚತುರಯುವತಿಘನಕುಚತಟಮು ॥
ಕ್ತಾ[೨]ಚಾರುಹಾರನಪಹಸಿ ।
ತಾಚಂದ್ರವಿಭಾಸಿ ಸುಕವಿನಿಕರನಿಳಿಂಪಂ ॥೯೫

ವಿಳಸಿತವಿಳಾಸಿನೀಸದ ।
ಮಳಚಾರುಕಪೋಳಫಳಕಭಾಳಸ್ಥಳಕೋ ॥
ಮಳಪತ್ರಭಂಗವಿಳಸಿತ ।
ಮಳಯಜತಿಳಕಂ ಸರಸ್ವತೀಮುಖತಿಳಕಂ ॥೯೬

ಅನಿಮಿತ್ತಬಾಂಧವಂ ಮಾ ।
ನನಿಧಾನಂ ಗದ್ಯಪದ್ಯವಿದ್ಯಾಧರನಿಂ ॥
ದ್ರನಗೇಂದ್ರರುಂಧ್ರಧೈರ್ಯಂ ।
ಮನುಚರಿತಂ ವಿನಯಭೂಷಣಂ ಕವಿಕಾಮಂ ॥೯೭

ಚಳದಳಕದಲಸಗಮನದ ।
ಪೊಳೆವಧರದ ವಿಮಳನಖದ ಮೃದುಪದಗತಿಚಾ ॥

೧. ತಿಱಿಪಿದಗಾಧ. ಖ॥ ೨. ನವಭಾಸಿಚಂದ್ರ. ಕ॥

ಪಳನಯನದ ತನುಮಧ್ಯದ ।
ಲಲನಾಮುಖಲಕ್ಷ್ಯಲಕ್ಷಣಂ ಕವಿಕಾಮಂ ॥೯೪

ಗದ್ಯಂ॥ ಇದು ವಿನಮದಮರನಿಕರಮಕುಟಮಣಿಗಣಕಿರಣರಮಣೀಯ
ಚರಣಸರಸೀರುಹ ಶಿವಪದಾಂಭೋಜಭೃಂಗಾಯಮಾನ ಸರಸ್ವತೀ
ಪ್ರಸಾದಾಸಾದಿತ ಕವಿತಾಪ್ರಭಾವಂ
ಕವಿಕಾಮದೇವ ವಿರಚಿತಮಪ್ಪ
ರಸವಿವೇಕನಾಮ ಶೃಂಗಾರರತ್ನಾಕರದೊಳ್
ನಾಯಕ ನಾಯಿಕಾ ವಿಕಲ್ಪ ವಿಸ್ತರಂ
ತೃತೀಯ ಪರಿಚ್ಛೇದಂ ಸಂಪೂರ್ಣಂ.

೧. ರಮಣೀಯಶಿವಪದಾಂಭೋಜಭೃಂಗಂ. ಕ॥ಖ॥

—ಚತುರ್ಥ ಪರಿಚ್ಛೇದಂ—

ಶ್ರೀರಮಣೀಕುಚಹಾರಂ ।
ಹಾರಾವದಾತವಿಮಳಯಶಂ ಸುಯಶೋವಿ ॥
ಸ್ತಾರಿತದಿಶಾಕುಲಂ ಕುಲ ।
ಟಾರತಿದೂರಂ ಸರಸ್ವತೀಮುಖತಿಲಕಂ ॥೧

ನೆಱೆಯೆ ರಸಭಾವವಿಧಿಯಂ ।
ನೆರೆ ನಾಯಕನಾಯಿಕಾಪರೀಕ್ಷೆಯನಿಂಬಾ ॥
ಗಱಿಪಿದೆನಿತ್ತಲ್ ತಱಿಸಂ ।
ದಱಿಪಿದಪೆಂ ಸಖಸಖೀವಿಕಲ್ಪಾಂತರಮಂ ॥೨

ಕಮನೀಯವಾಣಿ ಕವಿ ಗೂ ।
ಢಮಂತ್ರನತಿಚತುರನಖಿಳಕರ್ಮಪ್ರಕರಂ ॥
ಪ್ರಮುದಾಕೋಪಾಪಹತಿ ।
ಕ್ರಮಜ್ಞನೆನಿಪವನೆ ನರ್ಮಸಚಿವನೆನಿಕ್ಕುಂ ॥೩

ವಿವಿಧವಿನೋದಾಶ್ರಯನೆನಿ ।
ಪವಂಗೆ ನಾಲ್ವರ್ ಸಹಾಯಮಾಗಲೆವೇೞ್ಕುಂ ॥
ಭುವನವಿನುತ್ಯನಾರ್ಗರಿ ।
ಕವಿಟವಿದೂಷಕಸುಪೀಠಮರ್ದರೆನಿಪ್ಪರ್ ॥೪

ಸರಸೋಕ್ತಿಗಳೊಳ್ವರನಾ ।
ಗರಿಕಂ ಕಾಮಿನಿಯರೊಳ್ವಿಟಂ ದಯಿತೆಯರೊಳ್ ॥

ನೆರೆವಲೆ ವಿದೂಷಕಂ ಗಾ ।
ವ್ಯರೀತಿಯೊಳ್ನುಡಿಗೆ ಪೀಠಮರ್ದನೆನಿಕ್ಕುಂ ॥೫
ಆತಂ ಕಳಾಕಳಾಪವಸ ।
ಮೇತಂ ದೇಶೀಯವಿವಿಧಭಾಷಾವಿದನು ॥
ದ್ಯೋತಿತಮತಿಪ್ರಕಾಶೋ ।
ದ್ಭೂತಂ ನಾಗರಿಕನೆಂಬ ಪೆಸರುಂ ಪಡೆಗುಂ ॥೬

ಕುಡದೆನಗೊತ್ತೆಯುಂ ಚದುರನೆನ್ನೊಡನೊಂದಿರುಳಿರ್ದು ನಿದ್ರೆಯುಂ । ಕಿಡಿಸಿದನೆಂದು ತೊಟ್ಟಜಸಿ ಕಂಡಪೆನಿಲ್ಲೆನಗೊಳ್ಳಿತಾಯ್ತು ನೀಂ ॥ ಕುಡಿಸುವುದೆಂದು ಪೋಗಲಣಮೀಯದೆ ಬಟ್ಟೆಯೊಳಾಣೆಯಿಟ್ಟು ನಿಂ । ದೊಡೆ ಕುಡುವಂತುಟಂ ಪ್ರಿಯೆಗೆ ಪೂಣ್ದಿನದಂ ಪುಸಿಮಾಡಿದೆಂ ನೃಪಾ ॥೭ (ಇದು ನಾಗರಿಕವಚನಂ)

ಅನುದಿನಮಾತ್ಮೋಚಿತಮಂ ।
ಡನಂಗಳಂ ಮಾಡಿಕೊಂಡು ತಾಂ ವೇಶ್ಯಾವಾ ॥
ಟನಪಟುವೆನಿಸಿದವಂ ಕ್ರೀ ।
ಡನಶೀಲಂ ವಿಟನೆನಿಪ್ಪ ಪೆಸರುಂ ಪಡೆಗುಂ ॥೮

ಮನವಱಿಯಲ್ಕೆವೇಡಿ ತಡೆದಿರ್ಪೊಡೆ ಮುನ್ನಮೆ ತೀರ್ದುದಾಕೆ ನಿ। ನ್ನನೆ ಬಯಸುತ್ತುಮಿರ್ದಪಳದಲ್ಲದೆ ಲಂಚಮನಾಸೆವಟ್ಟು ಕೆಂ ॥ ಮನೆ ತಡೆದಿರ್ಪೊಡುಳ್ಳೊಡವೆಯುಂ ನಿನಗಿತ್ತಪಳಂತು ಕೇಳ್ವಳಾ । ಸಿನಿಯನದೇಕೆ ಸುಯ್ಸಿದಪೆ ನೀನಿರದಾಱಿಸು ಕಾಮತಾಪಮಂ ॥೯

(ಇದು ವಿಟವಚನಂ)

---

೧. ಮಿಕ್ಕರೊಳಾಚರಣಕ್ಕೆ. ಖ॥   ೨. ಆತತ್ಕಳಾ. ಕ॥
೩. ದೇಸೆಯ ವಿಷಯಭಾಷಾವಿದಸ. ಕ॥   ೪. ತಿರ್ಪುದಾ. ಖ॥

ಪರಿಹಾಸವಿವಿಧಕೇಳೀ ।
ಪರಿಣತಮತಿ ವಿಪ್ರವಂಶಸಂಭೂತಂ ನೋ ॥
[1]ಡೆ ರಸಾರ್ಥವಾಣಿ ಸಾಧು ।
ಸ್ವರೂಪನೆನಿಪಂ ವಿದೂಷಕಾಖ್ಯಮನಾಳ್ಗಂ ॥೧೦

ವರವಧುವ್ರೋರ್ವಳಾತ್ಮಪತಿ ಬೇಡೆನೆ ಬೇಡೆನೆ ಮಾಣದುಯ್ಯಲಂ ।
[2]ಪರಿದವಳೇಱೆ ಪಾಡುತಿರೆ ನೀಂ ನಗೆ ತಾಂ ಮುಳಿದಿರ್ದುದುಂ ತನೂ॥
ದರಿ ನಿಜಕಾಂತನೊಳ್ಜ[3]ಗಳವಾಡೆ ಸಮೀಪದೊಳಿರ್ದು ಕೇಳ್ದಗೇ ।
ಳ್ಪರ ಸುಕರಂ(?) ನಗಲ್ಪಡೆದೆನಿಂದು ಮನಂಬಿಡೆ ನಿನ್ನದೂಸಱಿಂ ॥೧೧

(ಇದು ವಿದೂಷಕವಚನಂ)

ಬಡನೊಡನೆ ಪ್ರೊರೆದು ಕುಳ್ಳಿ ।
ರ್ದೆಡೆಯೊಳ್ತಂ[4]ದೇಱಲಿಕ್ಕಿಕಾಲಂ [5]ಪಿಡಿದೋ ॥
ಗಡಿಸದೆ [6]ಮಿದಿಮಿಡಿದಱ್ತಿಯು ।
ನೊಡರಿಸುತಿರ್ಪವನೆ ಪೀಠಮರ್ದನೆನಿಕ್ಕುಂ ॥೧೨

ಮೂಡಿದ [7]ಜೊನ್ನದೊಳ್ಸಮೆದ ಕೆಂದಳಿರ್ವಾಸಿನಮೇಲೆ ಮೆಯ್ಯ
ನೀ । ಡಾಡಿ ಲತಾಂಗದೊಳ್ಕುಳಿರ್ವ ಚಂದನವಾರಿಯನೊಟ್ಟಿಕೊಂಡು
ನಾ ॥ ಡಾಡಿಗಳುಂಬಮುಪ್ಪ ವಿರಹಾಗ್ನಿಯನಾಱಿಸಲಾರದಿಂದುವಂ ।
ನೋಡಿ ಬಿಗುರ್ತಪಳ್ವರವಿಳಾಸಿನಿ ನಿನ್ನ ವಿಯೋಗದಿಂ ನೃಪಾ ॥೧೩

(ಇದು ಪೀಠಮರ್ದವಚನಂ)

ಇಂತೀಸಖಭೇದದ ವೃ ।
ತ್ತಾಂತರಮಂ ತಿಳಿಯೆಪೇೞ್ದನಿತ್ತಲ್ಕವಿವ್ಯಂ ॥

---

೧. ಡಿರಸಾರ್ಥಂ ವಾಣ್ಯಸಾಧು. ಕ॥ ೨. ಪರದಳಮೇರಿ. ಕ॥
೩. ದೆವಿಂದು. ಖ॥ ೪. ದೆಱಗಲಿಕ್ಕಿ. ಖ॥ ೫. ತೆಗೆದೊ. ಕ॥
೬. ಮಿಡಿಮಿಡಿದರ್ಥಿಯು. ಖ॥ ೭. ಜೊಂಪ. ಕ॥

ದಂ ತಿಳಗೆ ಸಾರ್ಥವಾಣೀ ।
ಸಂತತಿಯಿಂದಂ ಸಖೀವಿಕಲ್ಪಾಂತರವಂ ॥೧೪

ಆರಯ್ಯೆ ಧಾತ್ರಿಯೊಳ್ ಹಿತ ।
ಕಾರಿಣಿ ಸಖಿನಿವಹದೊಳಗೆ ತಿಳವಾಗಳ್ತಾಂ ॥
ಸಾರಿಕೆ ಚತುರಿಕೆ ಸಹಸಂ ।
ಚಾರಿಕೆ ದೂತಿಕೆಯೆನಲ್ಚತುರ್ವ್ವಿಧಮಕ್ಕುಂ ॥೧೫

ಸ್ವೈರ ವಚನಂಗಳೆಸೆಗುಂ ।
ಸಾರಿಕೆಯೊಳ್ ಹಿತಕರೋಕ್ತಿ ಚತುರಿಕೆಯೊಳ್ ಗಂ॥
ಭೀರಾಳಾಪಂ ಸಹಸಂ ।
ಚಾರಿಕೆಯೊಳ್ ಸಂಸ್ಫುಟೋಕ್ತಿಗಳ್ ದೂತಿಕೆಯೊಳ್ ॥೧೬

ಸಮರೂಪದ ಸಮವಿಭವದ ।
ಸಮವಯಸದವಳ್[1]ದೊಂದು ಕಾರ್ಯ್ಯಾಂತರದಿಂ ॥
ಸಮನಿಸಿದೊಡೆ ಸಖ್ಯಂ ತ ।
[2]ತ್ಪ್ರಮದೆಯೆ ಸಾರಿಕೆಯೆನಿಪ್ಪ ಪೆಸರಂ ಪಡೆಗುಂ ॥೧೭

ವಿರಹಾವಸ್ಥಾ[4]ಂತರಂ ನಿನ್ನೊಳೆ ಸಮನಿಸಿದತ್ತಿಲ್ಲಿಯುಂ[3] ನೋಡಲಂ ತೋ । ಪರೊಳಾರುಂ ಜೇಟವಂ ಪಾಟಿಸಿದವರೊಳೆ ನಿನ್ನಂತು ನಾ ಣ್ಗೆಟ್ಟು ಬಾಯ್ವಿ ॥ ಟ್ಟರನಾ ನೀಲೋಕದೊಳ್ಕಂಡಱಿಯೆ ನಿನಿತುಗಂಡಾ ತನುಂತುಂ ಸಖೀ ಧಿ ।ಕ್ಕರಿಪ್ಪೊಂದಂ ನಿನ್ನನಿನ್ನೇ ನಱುವನೆ ಕವಿಕಾಮಂ ಮುಪೋದ್ವೃತ್ತ ಚಿತ್ತಂ ॥೧೮

---

೧. ಳೊಂದು. ಕ॥   ೨. ತ್ಪ್ರಮದೆಗೆ.ಖ॥   ೩. ನಾಡೊಳೋ. ಕ॥
೪. ಳಾನಂ. ಖ॥   ೫. ಪಾದಂ. ಖ॥

ವನಿತೆ ಮರಲ್ದು ಕಂಣಪಸಿವ್ರೋಡುವಿನಂ ನಡೆ ನೋಡಲೊಯ್ಯನೊ ।
ಯ್ಯನೆ ತನುಸೋಂಕು ಸೋಂಕಲಳಿವಂ ನುಡಿಯಲ್ಸಲೆ ಮೈಯ್ಯಲಂಪು
ಪ್ರೋ ॥ ಪಿನವಮರ್ದಪ್ಪಲುಂ ತವಕದಿಂ ನೆರೆಯಲ್ಬಯಸಿರ್ದು ಬಿರ್ದ
ಪ । ಳ್ನನಗವಳ್ಬೆದೆಕೂರ್ಗಳವಳುಂ ವರಿಸೈ ಸುಜನೈಕಬಾಂಧವಾ ॥೧೯

(ಇದು ಸಾರಿಕಾವಚನಂ)

ಪರಿಚಿತ ಸಮಸ್ತವಿಷಯಾಂ ।
ತರಮತಿ ಕೋಪಾಪಹರಣಪರಿಣತೆ ಮದನೋ ॥
ದ್ಧರತಾಪ್ರೋಪಶಮಪ್ರದ ।
ನಿರತೆಯೆನಿಪ್ಪಾಕೆ ಚತುರಿಕಾಖ್ಯೆಯನಾಳ್ಗಂ ॥೨೦

ರಮಣೀ ರತ್ನಮೆ ನಲ್ಲನೊಲ್ಮೆಯಿರವಿಂಬಲ್ಲಾದುದಿಲ್ಲಾದುದು ।
ದ್ಯಮವಂ ಮಾಣೆನೆ ಮಾಣ್ಬೆನಪ್ಪೊಡಿನಿಯಂ ಮುಂತಪ್ಪಮುಂತಪ್ಪ
ಕ ॥ ಜ್ಜಮನೇ ಕಜ್ಜಮನಟ್ಟುತಿರ್ಪನೆಲೆ ತಾನಿಂದೇವನಿಂದೇವನಾ ।
ರುಮನಾತಂ ಕವಿಕಾಮನಕ್ಕಟ ಮರಲ್ದಿಂ ನಿನ್ನದೊಂದಾಸೆಯೊಳ್ ॥(?)

ನಿನಗೆಂದುಂ ನೆವಮಿಲ್ಲ ನೋವನಱಿಯಲ್ತತ್ಕಾಮಿನೀಪಕ್ಷ್ಮ ಕಾ ।
ನನ ಬಾಷ್ಪಾಂಬುಸರಿತ್ಸಮುನ್ನತ ಕುಚಕ್ಷೋಣೀಧರಾಕ್ಷೂಣದಾ ॥
ನನದುರ್ಗಸ್ಥಿತನಾದ ಕಾಮನುಮವಂ ನಿನ್ನೊಳ್ವಿಭೀತಾತ್ಮನಾ ।
ದನದೆಂತೆಂಬೊಡವೆಂತುಮಾಡುವ್ರೊಡಮಿನ್ನೆಂತಪ್ಪೊಡಂ ಸಲ್ಲದೇ ॥೨೨

(ಇದು ಚತುರಿಕಾವಚನಂ)

ವರಭೂಷಣಾನುಲೇಪನ ।
ಪರಿಕರಮಾಲ್ಯ ಪ್ರಸಾಧನಪ್ರಾವರಣಾ ॥

---

೧. ಮರಳ್ದು. ಖ॥ ೨. ಉತ್ತವಳಿಯುಂ. ಖ॥
೩. ಸಿದ್ದರಬದ್ದರವನೆಯೊಳೆಬಿಳ್ದುದಳ್ಬರಿಸುಸೀನವಳಂ. ಕ॥ ೪. ಯೆಲೆ. ಕ॥
೫. ಮರಲ್ದೀ. ಕ॥ ೬. ಪಲ್ತು. ಖ॥ ೭. ಮಾನ. ಖ॥

ಚರಣಾನುರಕ್ತಮತಿ ಸುಂ |
ದರಿ ಸಂಚಾರಿಕೆಯೆನಿಪ್ಪ ಪೆಸರಂ ಪಡೆಗುಂ ॥೨೩

ಇಂಬಱಿವಂ [೧]ಸುರೂಪಿ ಗುಣಿಯೆಂದೆನಗಾಗಳುಮೆಂಬ ನಿನ್ನುಮಂ |
ನಂಬದೆ ಪೋಗಿ ಗೆಂಟರೊಳೆ ನೋಡಿದೆನಾತನ ರೂಪನಾತನಾ ॥
ಡಂಬರಮುಂ ಕರಂ ಬಯಸಿ ಬಣ್ಣಿಸುವನ್ನನೆ ತಪ್ಪದೆಂದು ಕಂ |
ಡಾಂ ಬೆಱಗಾದೆನಕ್ಕ ನಿನಗಾತನೆ ವಲ್ಲಭನಾಗ ತಕ್ಕವಂ ॥೨೪

ವಿಳಸದಪಾಂಗಶೋಭೆ ಕೃತಮಂಡನಮೆಂಬಿವು ಕೂಡೆ ಪಿಂಗೆ ಕ |
ಣ್ಗಳೊಳೆರ್ದೆಯೊಳ್ ಶರೀರದೊಳನುಕ್ರಮದಿಂದಮೆ ಪೋಗೆ ಸಾಧ್ವ
ಸಾ ॥ [೨]ಕುಳತೆ [೩]ಕೃಶಾನುವೃತ್ತಿ ನೆಲೆಗೊಂಡುದು ನಿಶ್ಚಯಮುಂದು
ತೊಟ್ಟ ನೀ | ನುಱಿದ ಬಱಿಕ್ಕೆ [೪]ನಿನ್ನಯ ಮನೋರಮೆಯೊಳ್ಮನಜ
ನೈಕಬಾಂಧವಾ ॥೨೫ (ಇದು ಸಂಚಾರಿಕೆಯ ವಚನಂ)

ಪ್ರಿಯಸಖಿಯ ವಾರ್ತೆಯಂ ತ |
ತ್ಪ್ರಿಯಂಗೆ [೫]ಪೇೞ್ದವಸೊಳಾದ ವೃತ್ತಾಂತಮನಾ ॥
ಪ್ರಿಯಸಖಿಗೆ ಪೇೞ್ದೊಡಾಕಾಂ |
ತೆಯೊಳೆಸೆಗುಂ ದೂತಿಕಾಭಿಧಾನಂ ಸತತಂ ॥೨೬

ಮಡಗಲ್ಕಿನ್ನುಂಟೆ[೬] ನೋವಂ ನಿನಗಱಿಪಿದಪೆಂ ಚೇಟಿ ಪೋ ಪೋಗಿ
ಮೆಲ್ಪಂ | ನುಡಿ ಮೆಲ್ಪಂ ಕೊಳ್ವದಂದೆನ್ನಿರವನಱಿಪಿ ಮಾತಾಡು ಮಾ
ತಾಡೆಯುಂ ಮೆ ॥ ಲ್ಪಡದಂದೀಹಾರಮಂ ನೀಂ ಕುಡು ಕುಡೆಯುಮ
ವಂ ಬಾರೆನೆಂದಿರ್ದನೇ ಕಾ | ಲ್ವಿಡಿದೆತ್ತುಂ ತರ್ಪುದೀಗಳ್ ಮುಳಿದುಱ
ದುಱಿದಂ ಕಾಮಿನೀ ಕಾಮದೇವಂ ॥೨೭

---

೧. ಸ್ವರೂಪ. ಖ॥ ೨. ಕುಳಿತೆ. ಕ॥ ೩. ದೃಶಾನು. ಕ॥ ೪. ನಿನ್ನಯೊ. ಕ॥ ೫. ಪೇೞ್ವ. ಕ॥ ೬. ಮೆಲ್ಪಂಗೊಳ್ವ. ಕ॥ ೭. ಪುರಲ್ದ. ಕ॥

ಕರುಣದಿನಾಕೆಯಂ ಬರಿಸು ಬೇಗದೆ ನೀನುಱಿವಟ್ಟ ಕಾಮಿನೀ ।
ಮಾರನಿಹಿತಾಗ್ನಿ[1]ತಾಪಮನಡಂಗಿಸಲಾರದೆ ಮುಗ್ಧೆ ಬೇಗಮಂ ‖
ತರಿಸಲುಮಾರದಾವನಿತೆ ಸಾವನಿತೆಯ್ದಿದಳೆಂದು ಬೇಟಮಂ ।
ದಿರದೆ ಮರಳ್ದು ಮುಗ್ಗಿ ಕೆಡೆದಳ್ಕವಿಕಾಮಪದಾರವಿಂದದೊಳ್ ‖೨೮

(ಇದು ದೂತಿಕಾವಚನಂ)

ಇವು ವಿವಿಧಸಖೀಜನದೊಂ ।
ದು ವಿಕಲ್ಪೋಕ್ತಿಪ್ರಕಾರಮಿತ್ತುಲ್ಪಕವಿ ‖
ಪ್ರವರರ್ಗಳಱಿಗೆ ಸಂಭೋ ।
ಗವಿಪ್ರಲಂಭಪ್ರಪಂಚಸಂಚಿತವಿಧಿಯಂ ‖೨೯

ರಾಗರಸಾಂಭೋನಿಧಿಗೊಳ ।
ಗಾಗಿ ರತಿಶ್ರಮಮನೆಯ್ದೆ ಮೆಱೆದೋಪರೊಳೊಂ ‖
ದಾಗಿರ್ದಿರವಂತದು ಸಂ ।
ಭೋಗಮುಗಲ್ದಿ[2]ರವು ವಿಪ್ರಲಂಭಮೆನಿಕ್ಕುಂ ‖೩೦

ಸಕಲಜ್ಞರೆನಿಪ ರಸಭಾ ।
ವಕರಱಿವುದು ಮೊದಲೊಳೊಂದೆ ಸಂಭೋಗಾಖ್ಯಂ ‖
ಪ್ರಕಟಮೊಡೆ ಪ್ರಚ್ಛನ್ನ[3] ।
ಪ್ರಕಾಶಮೆಂಬೆರಡು ಭೇದಮಂ ವಿವರಿಸುವೆಂ ‖೩೧

ಅತಿನಿಪುಣರಱಿವುದಭಿನವ ।
ರತಿವಿಭವಾತಿಶಯನವವಿಳಾಸವಿಶೇಷಂ ‖
ಸತತಂ ನಿಜಾಂತರಂಗಾ ।
ಶ್ರಿತಗತಮಾಗಿರ್ದುದಱಿಗೆ ತಾಂ ಪ್ರಚ್ಛನ್ನಂ ‖೩೨

---

೧. ಕೋಪ. ಖ‖ ೨. ಮರಲ್ದೀ. ಖ‖ ೩. ಭೇದದಿಂ. ಖ‖

ಸೊಡರಂ ಮೆಲ್ಲನೆ[1] ನೂಂಕಿ ಸಾರ್ಚಿ ಪಡಿಯಂ ಸಾರಣ್ಗೆ[2] ಬೇಗಂ ಬರಲ್ । ಸೆಡೆಯುತ್ತಿರ್ದ[3]ಳನಾನೆ ಪೋಗಿ ನಯದಿಂ ತಳ್ಕೈಸಿ[4] ಶಯ್ಯಾತಳ ॥ ಕೊಳ್ಕುಡಗೊಂಡುಯೊಡ್ಡಡಗೂಡೆ ಶಂಕಿಸುವ ನಾಣಂ ಕಾಯ್ವ ಮತ್ತಂ ರಸಂ । ಬಡಿವೆನ್ನೋವಳ ಮುಗ್ಧಭಾವರತಮಿನ್ನೆನ್ನಂ ಗೆಲಲ್ಕಾಸಿದೇ ॥೩೩

ವಿವಿಧಘನಸ್ತನಸ್ಥಗಿತನೂತನಸೌಖ್ಯಮನೊಯ್ಯನೊಯ್ಯನಂ । ತವನತಕಂಠಿ ಕಂಚು[5]ಕಮನೋಸರಿಸುತ್ತಿರೆ ನೋಡಿ ನೋಡಿ ಬ॥ ರ್ದ ಪರ್ಗಿ*ನಿಸಂಜಿ ಮುಚ್ಚಿ ಮುಗುಳ್ದ*ಂ ತೆಱೆದೊಯ್ಯನೆ ನೋೞ್ಪ ಭಂಗಿಯಿಂ । ನವವಧು ಮಾಣಿಕಂಬಡೆದ ನಿರ್ಧನನಂದಮನುಂಟುಮಾಡಿದಳ್॥

(ಇದು ಪ್ರಚ್ಛನ್ನಸಂಭೋಗಂ)

ಅನತಿಶಯಾಲಿಂಗನಚುಂ।
ಬನಭೂಷಣಕರಣತರ್ಜ[6]ನಾಸ್ಫಾಳನತಾ ॥
ಡನವಿವಿಧಸುರತವಿಧಿಯಿಂ ।
ದನುಭವಿಸುವ್ರೊಡದೆ ವಲಂ ಪ್ರಕಾಶಮೆನಿಕ್ಕುಂ ॥೩೫

ಸತಿಯ ಜಿತಾಪರಿಷ್ಟಕರತಿಶ್ರಮದೊಳ್ಸರಳಾಂಗುಲಿಚ್ಛಟ । ತ್ಕೃತಿ ಪಟುತಾಳುತತ್ಕೃತಿ ಗಳೋ[7]ತ್ಥಿತಹೂತ್ಕೃತಿ ಚಾರುಪಂಚಚೀ ॥ ತ್ಕೃತಿ ಶಕುನಿಪ್ರತಾನಕುಹಕತ್ಕೃತಿ(?) ಕಂಕಣಕಿಂಕಿಣೀರಝಣ । ತ್ಕೃತಿ ಸಮುಪಾತಜೇತ್ಕೃತಿ ಸಚುಂಬನಸೀತ್ಕೃತಿ ಪೊಣ್ಮೆತೆತ್ತಲುಂ ॥೩೬

ನೆಱೆವನುರಾಗದಿಂದೆ ಪುರುಷಾಯಿತಮಂ ವರಕಾಂತೆ ಕಾಂತನೊಳ್ ।

೧.ಸಾರ್ಚಿ ನೂಂಕಿ.ಖ॥ ೨.ಸಾರಲ್ಕೆ.ಖ॥ ೩.ಸೆಡೆವೆತ್ತಿರ್ದ.ಕ॥ ೪.ಕಾಮ.ಕ॥ ೫. ಕಾಂಚನ. ಕ॥ಖ॥ ೬. ಘೂರ್ಜನಾ. ಕ॥ ಖ॥ ೭.ಗಳುತ್ಕೃತಿ. ಕ॥

ಮೆಱೆಯೆ ತದೀಯಚಾಟುಕರಣಂಗಳನೀಕ್ಷಿಸಿ ತಪ್ಪುದೆಣ್ಣೆಯೆಂ ।
ದೞಿಯದೆ ನಂದಲುಂ ಮಱೆದು ದೀವಿಗೆಗಳ್ಸಮಸಂದುವೆಂಬೆನೆ ॥
ತ್ತಱಿವೆನೊಡಂಬಡಿನ್ನುಪರತಿಶ್ರಮದೊಳ್ ಪೊಗೞಲ್ಲತಾಂಗಿಯಂ ॥ ೩೭

(ಇದು ಪ್ರಕಾಶಸಂಭೋಗಂ)

ಇಂತಿವು ಸಂಭೋಗದ ವೃ ।
ತ್ತಾಂತಂ ಬುಧಸಮಿತಿ ವಿಪ್ರಲಂಭಾಖ್ಯಾನಾ ॥
ನಂತವಿಕಲ್ಪಮನಱಿವುದು ।
ಮುಂತಣ ಮೃದುಮಧುರಹೃದ್ಯಪದ್ಯೋಕ್ತಿಗಳಿಂ ॥ ೩೮

ಪರಿಭಾವಿಸುವುದು ಪೂರ್ವಾ ।
ನುರಾಗಮಾನಾಖ್ಯಮುಂ ಪ್ರವಾಸಾಖ್ಯಾನಂ ॥
ಕರುಣಾತ್ಮಕಮೆಂದಿಂತವತ ।
ರಿಸೆ ಚತುರ್ಭಂಗಿ ವಿಪ್ರಲಂಭದ ಭೇದಂ ॥ ೩೯

ಸಮಸಂದು ನೋಡಿ ಮೇಣ್ನುಡಿ ।
ದು ಮೇಣ್ಮನಂಗೊಂಡು ಕೂರ್ತು ಕೂಟಂ ತನ್ನೊಳ್ ॥
ಸಮನಿಸದೆ ಮಱುಗುವಾಮಱು ।
ಕಮಮದು ಪೂರ್ವಾನುರಾಗಮೆನೆ ಪೆಸರ್*ವಡೆಗುಂ ॥ ೪೦

ವಿಲುಳತ್ಕಂಕಣಮುಲ್ಲಸದ್ಭುಜಮುದಾತ್ತೈಕಸ್ತನಂ ಭ್ರೂಲತಾ ।
ಚಲನಂ ಕೂಣಿತನೇತ್ರಮುರ್ಧ್ವವಳಿತಗ್ರೀವೋದರಂ ತನ್ನೊಳಾ ॥ ಗಳ
ವೊಪ್ಪುತ್ತಿರೆ ಕಾಂತೆ ಕರ್ಣಕಷಣವ್ಯಾಪಾರದಿಂ ನಿಂದು ನೋ ।
ಟ್ಪ ಲತಾತನ್ವಿಯ ನೋಟಮೆನ್ನೆರ್*ದೆಯೊಳೇಂ ವಿಭ್ರಾಂತಿಯಂ ಮಾಡಿ
ತೋ ! ॥ ೪೧

೧. ಕ್ರಮ. ಕ॥ ೨. ಖಂಪರಿ. ಕ॥

ನಳತೋಳ್ ನೀಡಿ ಕಾಲಂ[೧] ಮಡುಪಿ ಪೆಱಗಣಿಂ ಬಾಗಿ ಬಂಬಲ್ಗುರುಳ್ಸಂ । ಚಲಿಸಲ್ಕೀವೀನಿಬಂಧಂ ಸಡಿಲೆ[೨] ನಿಱಿಯನೇಱುತ್ತಿ ಸಂರಂಭದಿಂ ಕೆಂ ॥ ದಳವಂ ಸಂಚಾರಿಕಾಸ್ಕಂಧದೊಳವಯವದಿಂದೂಱಿ ನೆಮ್ಮಿರ್ದು ಮುಳ್ಳಂ । ಕಳೆಯುತ್ತುಂ ನೋಡಿದಾಕಾಂತೆಯು ತೆಱವೆನಗುದ್ಭ್ರಾಂತಿಯಂ ಮಾಡುತಿರ್ಕುಂ ॥ (ಇದು ಪೂರ್ವಾನುರಾಗವಿಪ್ರಲಂಭಂ)

ಇನಿಯಂ ಮಾಡಿದ[೩] ತರುವಲಿ ।
ತನಕ್ಕೆ ಕಡುಮುಳಿದು ತಿಳಿಯಲೊಲ್ಲದೆ ಚಲದಿಂ ॥
ಮನಮುಂ[೪] ಬಲಿಕೈದಿರ್ಪರ ।
ವೆನಸುಂ ಮಾನಾಖ್ಯವೆಂಬ ಪೆಸಱಂ ಪಡೆಗುಂ ॥೪೩

ಬಿಡದಿಂದೇಕಾರಣಂ ಕೆತ್ತಿದಪುವೆನಗೆ ಕೇಳ್ಕಕ್ಕ[೫] ಮೆಯ್ ತೋಱಲಿಂದೆ । ನ್ನೆಡಗಣ್ಣುಂ ತೋಳುಮೀಪೆರ್ದೊಡೆಯುಮಿನಿಯನಾ[೬]ದೇಶವುಂ ಮಾಱ್ಪವಿನ್ನುಂ ॥ ಗಡಮೆನ್ನೊಳ್ಬೇ[೭]ಟಮಿನ್ನುಂ ಗಡ ಪರಿವರಿದೆಬ್ಬಿಪ್ಪಿ ಕೊಳ್ವಾಟಮಿನ್ನುಂ । ಗಡ ಕೂಟಂ ಸಾಲ್ಗುಮೆಂದುಣ್ಮಿದ ಮನದೞಲಿಂ ಕಾಂತೆ ವಿಭ್ರಾಂತೆಯಾದಳ್ ॥೪೪

ಇನಿಯಂ ಪ್ರಾಣಮುಗಲ್ದು ಪೋಪ ತೆಱದಿಂದೆನ್ನಿಂದಗಲ್ದಿರ್ದನಾ ।
ತನ ಪೋಗಿಂಗೆನಗಕ್ಕ ನೋವಿನಿತು[೮]ಮಿಲ್ಲೆಂತೆಂದೊಡೊಂದುಂಟು ನ ॥
ಲ್ಲನ ಚಿತ್ತಂ ಪೆಱಪಿಂಗೆ ಪಿಂಗದೆ ತಗುಳ್ದೋರಂತೆ ನಿಷ್ಕಾರಣಂ ।
ನೆನೆವೀ ಚಿತ್ತದ ಮಾಯ್ದ ನಾಣಿಲಿತನಕ್ಕಾಂ[೯] ನೋವೆನಬ್ಜೇಕ್ಷಣೇ ॥
(ಇದು ಮಾನಾಖ್ಯವಿಪ್ರಲಂಭಂ)

---

೧. ಮಡಿದು.ಕ॥ ೨. ನಿಱಿಯಸಾರಂಭದಿಂದಾಗಳು.ಕ॥ ೩. ತೆರವಲ್ಲ.ಕ॥
೪. ಬರಿಕೈ.ಕ॥ ಬಲುಗೈದಿ.ಖ॥ ೫. ಕ್ಕದೇಂತೋರಲೇಕೆನ್ನೆಟ.ಕ॥
೬. ದೋಷವುಂಮಾಪ್ಪಿನಿನ್ನುಂ.ಕ॥ ೭. ಳ್ನೋಟ.ಕ॥
೮. ಮೇಕಿಲ್ಲೆಂದೊಡೊಂದು.ಕ॥ ೯. ನೋಡೆ.ಕ॥

ಪರವಿಷಯಗಮನದಿಂದರ।
ಸರ ದೆಸೆಯಿಂದನ್ಯವಿವಿಧಕಾರ್ಯಾಂತರದಿಂ ॥
ದೊರೆಕೊಳ್ಳದ ಕೂಟದಗ।
ಲ್ದಿರವಿಂದೆನಸುಂ ಪ್ರವಾಸಮೆನೆ ಪೆಸರ್ವಡೆಗುಂ ॥೪೬

ಶಿಥಿಲಂಗಾಣದೆ ಪೊರ್ದಿ ವಕ್ಕವಡೆದೀಗಳ್ಮತ್ಪ್ರಿಯಂ ಪೋಗೆ ಮ।
ನ್ಮಥನಾಪೇಕ್ಷದಿನೆಚ್ಚು ಕೊಂದಪನದಿನ್ನೆಂತಕ್ಕ ಚಿತ್ತಕ್ಷತ॥
ವ್ಯಥೆಯಂ ಸೈರಿಪೆನೆಂತು ನಿತ್ತಱಸುವೆಂ ಕೈಸಾರದಸ್ಮನ್ಮನೋ।
ರಥವಿನ್ನೇಗುವೆನೆಂದವಳ್ಮದನಬಾಣಾಘಾತದಿಂ ಬಳ್ಕಿದಳ್ ॥೪೭

ಪ್ರಿಯೆಯೊಡನಾದ ಕೂಟದೊಳಗಲ್ಕೆಯೊಳಾನಿರೆ ಕೂಟದಿಂದಗ।
ಲ್ಕೆಯೆ ಕರವೊಳ್ಪತೆನ್ನ ಬಗೆಗೆಂತೆನೆ ನೆಟ್ಟನೆ ನೋಱ್ಪೊಡಂದು ಮ॥
ತ್ಪ್ರಿಯೆಯನೆ ಕಾಣ್ಬೆನೊರ್ವಳನೆ ಕೂಡಿರೆ ಭಾವಿಪೊಡಿಂದು ಕಣ್ಗೆ ತ।
ನ್ಮಯಮೆನಗೀಜಗತ್ತ್ರಯಮೆಲ್ಲಮಗಲ್ಕೆಯೊಳೆನ್ನ ನಲ್ಲಳಾ ॥೪೮
(ಇದು ಪ್ರವಾಸವಿಪ್ರಲಂಭಂ)

ಪರಮಪ್ರಿಯರೆತ್ತಾನುಂ।
ಪರಲೋಕಪ್ರಾಪ್ತರಾದೊಡವರ ಪರೋಕ್ಷಾಂ ॥
ತರದೊಳ್ ಮಱುಗುವ ಮಱುಕಂ।
ಕರುಣಾತ್ಮಕವಿಪ್ರಲಂಭವೆನೆ ಪೆಸರ್ವಡೆಗುಂ ॥೪೯

ಇವನಿಂತೀಕೆಗೆ ಗಂಡನೆಂದೊಡೆನಗಾಗಳ್ರಾಜ್ಯವಾದಂತೆ ತೋ।
ಱುವುದೆತ್ತಾನುಮಗಲ್ದು ಪೋದೊಡವನಿನ್ನುಂ ಬರ್ಕುಮಿನ್ನೊರ್ಮೆ
ಕೂ॥ ಡುವೆನೆಂಬಾಸೆಯುನೆಂತು ಮಾೞ್ಪೆನೆನಗಿನ್ನಾರಾಸೆಯೊಂದೀಗಳಾ।
ಱುವೆನಾರಂ ಬರಪಾರ್ವೆನೆಂತು ಕಳೆವೆಂ ಪ್ರೊಟ್ಟಂ ವಿಲೋಲೇಕ್ಷಣೇ॥೫೦

ಕೆಳದೀ ಕೀರಾಳಿಗಲ್ಕ್ಕೃಯೆಡೆ ನಿನಗೊಡಲಂ ತಾಳ್ದಲಾರ್ತಪ್ಪೆನಿಲ್ಲೀ। ಗಳದೊಂದುಂ ಬೇಡ ಕಾಂತಂ ಕಳಿದನೆನಗಿರಲ್ತಕ್ಕುದಲ್ತೆಂದು ಕೈಗೆ ॥ ಯ್ದೆಳೆಯುಳ್ತನ್ನಂ ಪರಿಚ್ಛೇದಿಸಿ ಬಗೆಯದೆ ಬಂದುಣ್ಮೆ ಪೆರ್ಚಿರ್ದ ಬೆಳ್ದಂ। ಗಳ ಕೋಳ್ಗಂ ತೆಂಬೆಲರ್ಗಂ ಪ್ರಿಯ ಶರಣೆನುತುಂ ಸಾರ್ಚಿದಳ್ಮ್ರಯ್ಯನೊರ್ವಳ್ ॥೫೧ (ಇದು ಕರುಣಾತ್ಮಕವಿಪ್ರಲಂಭಂ)

ಪ್ರಕಟಸಿದ ವಿಪ್ರಲಂಭ।
ಪ್ರಕಾರಮವು ತಾಮೆ ಚತುರ್ಚತುರಾನನವಾ ॥
ಗ್ವಿಕಸನದಿಂ ಪ್ರಚ್ಛನ್ನ।
ಪ್ರಕಾಶಮೆಂಬೆರಡು ಭೇದದಿಂ ನೆಱೆದಿರ್ಕುಂ ॥೫೨

ಮದನಪರಿತಾಪದಿಂದಂ।
ತೊದವಿದ ಮನದಟಲನಾರ್ಗಮಱಿಪದೆ ಮಱಸು ॥
ತ್ತದನೆ ಹೃದಯದೊಳೆ ತಳೆವೊಡೆ।
ವಿದಿತಂ ಪ್ರಚ್ಛನ್ನವಿಪ್ರಲಂಭಮೆನಿಕ್ಕುಂ ॥೫೩

ಮೆಯ್ಪ್ರಡಿ ನೀಳ್ದ ಸುಯ್ತ್ದಿಯುಸಿರ್ವಿರಹಜ್ವರದೇೞ್ಗೆ ಕಿಚ್ಚು ಕೆಂ। ಬಾಯ್ದೞ ಕೆಂಡದೊಬ್ಬುಳಿಕೆ ಮೂಗೊಲೆ ಮೂಗೆನೆ ಪುರ್ವಿನಿರ್ಕುಳಿಂ ॥ ಕಾಯ್ತಡವಾಗದಂತು ಪಿಡಿದುಂಗಜಕಾರುಕನಕ್ಷಿಬಾಣಮಂ। ಸೈಯುತ್ತೞ ಕಾಸಿ ಕಾಮಿನಿಯ ಬಾಷ್ಪದೊಳೊಯ್ಯನೆ ನೀರನೂಡಿದಂ ॥೫೪ (ಇದು ಪ್ರಚ್ಛನ್ನವಿಪ್ರಲಂಭಂ)

[೨]ಸಮನಿಸಿರೆ ವಿಪ್ರಲಂಭಂ।
ಸುಮನಃಕೋದಂಡಕಾಂಡಚಂಡಮನಸ್ತಾ ॥

೧. ಗಂಭೀರಂ. ಕ॥ ೨. ಸಮನಿಸಿದ. ಕ॥ಖ॥

ಪಮನೆಲ್ಲಮಱಿಯೆ ಮಱುಗುವ್ರೊ।
ಡೆ ಮಱುಕಮಂತದೆ ವಲಂ ಪ್ರಕಾಶಮೆನಿಕ್ಕುಂ॥೫೫

ನಂದದ ಚೇಟದಿಂದುರಿಯುತಿರ್ದಪೆನಾನುರಿವಲ್ಲಿ ಪುಳ್ಳಿಯಂ।
ಸಂಧಿಸಿ ಬೀಸುವಂತೆ ಸಿರಿಕಂಡಮನೊಟ್ಟ ಸರೋಜಪತ್ರದಿಂ॥
ಸುಂದರಿ ಬೀಸುತಿರ್ಪೆ ಪವನೇಂಧನಪಾವಕಯೋಗದಂದವೇಂ।
ನಂದುಗುಮೇ ತಗುಳ್ದುರಿವದೆನ್ನೆರ್ದೆಯಂ ಸ್ಮರಬಾಣಲಕ್ಷ್ಯಮಂ॥೫೬

ಚಿಂತಿಸಿ ಕೆಮ್ಮನಕ್ಕ ಮರದಂತೆ ಬಿಗುರ್ತಿರ್ದೆಗೆಟ್ಟು ಜೋಲ್ದುನಾ। ಣಂ ತೊಱೆದಾರೊಳಂ ನುಡಿಯಲುಂ ಬಗೆದಾರದೆ ಪೋದ ದಿಟ್ಟಪೋ॥ ದಂತಿರೆ ಕಂದಿ ಕುಂದಿ ಬಿಸುಸುಯ್ದು ಕರಂ ಮಱವಟ್ಟ ನೋಡಿ ವಿ। ಭ್ರಾಂತಿಸಿದಪ್ಪಳೇಕೆ ಕವಿಕಾಮವಿಯೋಗದೊಳಿರ್ದಳಾಗದೇ॥೫೭

ಇಂತಿವ್ರವೆ ವಿಪ್ರಲಂಭಾ।
ನಂತವಿಧಾನಂಗಳವಱವಸ್ಥಾಂತರಭೇ॥
ದಂ ತಾಮೆ ಕಾರ್ಶ್ಯಜಾಗರ।
ಸಂತಾಪಮೆನಲ್ಕೆ ಮೂಱು ತೆಱನಾಗಿರ್ಕುಂ॥೫೮

ಧೃತವಿರಹವೇದನಾವಿಕ।
ಳತೆಯಿಂದೆ ಕಟುಂಕಟಾಯಮಾನಾನ್ವಿತಮು॥
ದ್ವ್ಯತಿಕರಮಱಿಪುತ್ತಿರ್ಪುದು।
ಸತತಂ ತದವಸ್ಥೆ ಕಾರ್ಶ್ಯಮೆನೆ ಪೆಸರ್ವಡೆಗುಂ॥೫೯ (?)

ಚಳಬಾಷ್ಪಾಂಭಃಕಣಂ ಬೀರಿದ ತುಱುಗೆವೆ ಭೂಭಾಗದೊಳ್ ನೇಲ್ವ ವಸ್ತ್ರಾಂ।ಚಳಮಾಕೇಯೂರಲಕ್ಷ್ಮೀ ಚ್ಯುತಕರವಳಯಂ ಪಾಡೆ

೧. ಬೀಜ್ವಿ. ಕ॥ ೨. ಲಕ್ಷೋದ ತ. ಕ॥

ಕಾರುಣ್ಯಮುಂ ಕೋ ॥ ಮಳೆ ಪಂಥಾಭ್ಯರ್ಣಬದ್ಧಾಂಜಳಿ ಬೆಸಗೊಳು ತುಂ ಬಟ್ಟೆಯೊಳ್ನಲ್ಲನಂ ಸಂ । ಸ್ಖಲಿತಾಸ್ತವ್ಯಸ್ತಕೇಶಾನ್ವಿತೆ ವಿಕಳ ತೆಯಾಳಾಪದಿಂ ನಿಂದಳೊರ್ವಳ್ ॥೬೦

ಸುದತಿ ಲತಾಂಗವೇಕೆ ಬಡವಾದುದಿದೆಂದೊಡೆ ಮುನ್ನವೇಕೆ ಭಾ । ವದೊಳಣಮಿಲ್ಲ ಭೇದವೆನೆ ಮತ್ಪ್ರಿಯನಿರ್ದೊಡೆ ದೊಡ್ಡಿತಾಗಿ ತೋ॥ ರ್ಪುದುಮೆನಗೀಗಳರ್ಧವೊಡವೋದುದು ನಲ್ಲನೊಳತ್ತಲರ್ಧವಿ । ರ್ದುದು ತನುವೊಂದನರ್ಧಿಸಿದೊಡೇಂ ಬಡವಾಗದೆ ದೊಡ್ಡಿತಕ್ಕುಮೇ॥

(ಇದು ಕಾರ್ಶ್ಯಾವಸ್ಥೆ)

ಮನದೊಳನಿಯನನೆ ಸಲೆ ನೆನೆ ।
ವಿನೆಗಂ ವ್ಯವಧಾನಮಕ್ಕುಮೀನಿದ್ರೆಯೊಳಂ ॥
ದಿನಿಸುಮೊಱಗದಿರೆ ತದವ ।
ಸ್ಥೆ ನಿತಾಂತಂ ಜಾಗರಾಭಿಧಾನಮನಾಳ್ಗುಂ ॥೬೨

ಬಗೆಗೊಂಡೋವಳ್ಗೆ ನಿನ್ನಿಂ ಸಮನಿಸಿದ ವಿಯೋಗಾಕುಲೋದ್ರೇ ಕವೊಂದ । ಲ್ತು ಗಡಂ ಲೋಲಾಕ್ಷಿಗೀಗಳ್ತನುಲತೆಯೊಳಗಂ ಕೃತ್ಸ್ನ ಭೂಷಾವಿಯೋಗಂ ॥ ಬಗೆಯೊಳ್ ಮೂರ್ಛಾವಿಯೋಗಂ ನಿಶೆಯೊಳೆಸೆವ ನಿದ್ರೋಪಸೇವಾವಿಯೋಗಂ । ಪಗಲೊಳ್ಕೇಳೀವಿಯೋಗಂ ಸಮನಿಸೆ ಪಿರಿದುಂ ಕಾಂತೆ ವಿಭ್ರಾಂತೆಯಾದಳ್ ॥೬೩

ಕನಸಿನೊಳೆನ್ನ ವಲ್ಲಭನೊಳಂದೊಡಗೂಡಿದೆನೆಂದು ಪೇಳ್ವ ಕಾ । ಮಿನಿಯರುದಾತ್ತೆಯರ್ ಕೆಲರದೇಂ ಕೃತಪುಣ್ಯೆಯರಕ್ಕ ದುಃಖಭಾ ॥ ಜನೆಗೆನಗೆನ್ನ ವಲ್ಲಭನಗಲ್ಕೆಯೊಳಾಗದು ನಿದ್ರೆಯೆಂದೊಡಾ! ಕನಸೆನಗೆಲ್ಲಿತಿನ್ನೆನಗೆ ವಲ್ಲಭನೊಳ್ ನೆರೆವಾಸೆಯೆಲ್ಲಿತೋ ! ॥೬೪

(ಇದು ಜಾಗರಾವಸ್ಥೆ)

---

೧. ಮೊರಲ್ವಿರೆ. ಖ॥　　೨. ಸುಯೋಗಂ. ಕ॥

ಭ್ರಾಂತಿಯೆನೆ ವಿಪ್ರಲಂಭ ।
ಧ್ವಾಂತಾಂತರದೊಳ್ನಿತಾಂತಚಿಂತಾಕ್ರಾಂತೋ ॥
ತ್ಕ್ರಾಂತಾಸ್ಪಂದದಿನಿರ್ಪುದ ।
ದೆಂತುಂ ಸಂತಾಪವೆಂಬ ಪೆಸರಂ ಪಡೆಗುಂ ॥೬೫

ಕುಳಿರ್ವ* ವನಂಗಳೊಳ್ಸುಳಿದು ತಣ್ಬುಳಿಲೊಳ್[1]ನಡೆವಾಡಿ ಪೂತ ಪೂ
ಗೊಳದೊಳಗಿರ್ದು ಕೆಂದಳಿರ ಪಾಸುಗಳೊಳ್ ನಯದಿಂ ಪೊರಳ್ದು ಕ
ಣ್ಗೊಳಿಸುವ ಕಾವಣಂಗಳೊಳಪೊಕ್ಕು ಲತಾಭವನಂಗಳೊಳ್ತಗು
ಳ್ದೊಳಸಿ ಬಲ್ವ[2]ಳೆಂತುಮಣಮಾಱಿಸ[3]ಲಾರದೆ ಕಾಮತಾಪಮಂ ॥೬೬

ಅರಸ ನಿಜಪ್ರಿಯಾಂಗನೆಗೆ ನಿನ್ನ ವಿಯೋಗದೊಳಾದ ಹೃದ್ವ್ಯ
ಥಾಂ । ತರಮನದೇನನೆಂದಪೆನದಕ್ಕನಿತರ್ಕೆ ಮನೋಜತಾಪದಿಂ ॥ ತ
ರುಣಿ ಜಲಪ್ರದೇಶಮನೊಡರ್ಚೆ ಸರೋವರಮುಂ ಪುಗಲ್ಸರೋ । ವರ
ಜಳವಿಂ[4]ತು ಚುಯ್ಯೆನುತೆ ಬತ್ತಿದುದೆತ್ತಱವೇಂ ಪ್ರತಾಪಮಂ ॥೬೭

(ಇದು ಸಂತಾಪಾವಸ್ಥೆ)

ವಿವಿಧಾರ್ಥೋಕ್ತಿಗಳಿಂದೆ ।
ಯ್ದೆ ವಿಪ್ರಲಂಭಪ್ರಪಂಚಮಂ ತಿಳಿಪಿದೆನಿಂ ॥
ಕವಿಮುಖ್ಯರಱಿಗೆ ಲೋಕ ।
ವ್ಯವಹಾರಪ್ರಚುರದಶವಿಧಾವಸ್ಥೆಗಳಂ ॥೬೮

ಅಭಿಲಾಷೆ ಚಿಂತೆ ಸಂಸ್ಮೃತಿ ।
ವಿಭುಗುಣನುತಿ ತಾಪನಂ ಕ್ರಿಯಾದ್ವೇಷಂ ಸಂ ॥
ದಭಿಮಾನಚ್ಯುತಿ ಗಮನಂ ।
ಕ್ಷುಭಿತಾತ್ಮಾವಸ್ಥೆ ಮರಣಮಿವು ದಶಭೇದಂ ॥೬೯

---

೧. ನಡೆದಾಡಿ. ॥ಖ ೨. ಳಿಂತು. ಕ॥ ೩. ಲಾಗದೆ. ಕ॥ ೪. ವೆಲ್ಲ. ಕ॥

ಸ್ಮರವಶದಿನನ್ಯಜನ್ಮಾಂ
ತರಕೃತಸಂಸ್ಕಾರದಿಂ ವಿಭೋಗಕ್ರಿಯೆಯಿಂ ॥
ವರಚಾತುರ್ಯಕಳಾಗಮ ।
ಪರಿಣತಿಯಿಂ ಸ್ನೇಹವೃತ್ತಿಗಳ್ ಸಂಭವಿಕುಂ ॥೨೦
ಪರಿಹಾಸಕೇಳಿ ಕೂರ್ಪನ ।
ಬರವಂ ನೆನೆಯುತ್ತುಮಿರ್ಪುದಭಿಲಾಷೆಯುವಂ ॥
ಬರಲಱಿಯದಿರ್ದೊಡಾತನ ।
ಬರವಂ ಚಿಂತಿಸುವೊಡದುವೆ ಚಿಂತೆಯನಿಕ್ಕುಂ ॥೨೧
ಅನುದಿನವಾತನ ಗುಣವಂ ।
ನೆನೆವುದು ಸಂಸ್ಮೃತಿ ತದೀಯನಾಮಮನಾಮಾ ॥
ನಿನಿ ಪೊಗೞ್ದು* ಪೞರ್ಗೆ* ಪೇೞಲ್ ।
ಜನದಿಂ ಗುಣಕೀರ್ತನಾಭಿಧಾನಮನಾಳ್ಗುಂ ॥೨೨
ಇನಿತಱೊಳಂ ನಿಲ್ಲದೆ ಕಾ ।
ಮಿನಿ ನೆನೆದುಮ್ಮಳಿಸಿ ಮಱುಗೆ ತಾಪಮೆನಿಕ್ಕುಂ ॥
ಘನತಾಪಪೀಡೆಯಿಂ ಭೋ ।
ಜನಾದಿಪರಿಹರಣದಿಂ ಕ್ರಿಯಾದ್ವೇಷಾಖ್ಯಂ ॥೨೩
ವನಿತೆ ಕೆಲದವರ ನಗೆಯುಂ ।
ಮನದೊಳ್ ಬಗೆಯದಿರೆ ವಿಗತಲಜ್ಜಾಖ್ಯಾನಂ ॥
ಮನೆಯವರಂ ಬಗೆಯದೆ ತಾ ।
ನೆ ನಿಜೇಶ್ವರನಲ್ಲಿಗೆಯ್ದೆ ಗಮನಮೆನಿಕ್ಕುಂ ॥೨೪
ಸ್ಮರಶರಶಿಖಿಸಂತಾಪಂ ।

೧. ಮನದೊಳದಂ, ಖ॥

ಪರಿಸ್ಫುಟಂ ನೆಲೆಗೆವಂದೊಡದು ರಣರಣಕಂ ॥
ಸುರತಸುಖಮೆಂತುಮಿವಳ್ಗಂ ।
ದೊರೆಕೊಳ್ಳದೆ ಮೋಹಿಸಿರ್ದೊಡಕ್ಕುಂ ಮರಣಂ ॥೨೫

ಇಂತಿವು ದಶಭೇದಾವ ।
ಸ್ಥಾಂತರದ ವಿಕಲ್ಪಮಿದನೆ ಸುಕುಮಾರತರಾ ॥
ನಂತಮಧುರೋಕ್ತಿಯಿಂದೆ ನಿ ।
ತಾಂತಮುದಾಹರಿಸಿ ತೋರ್ಪೆನೆನ್ನಳ್ವನಿತಂ ॥೨೬

ಇಂಬಳ್ದು ನುಡಿವೆ ನುಡಿಯುಮೊ ।
ಡಂಬಡೆ ಸೊಗಯಿಪ ವಿಳಾಸಮುಂ ವರರೂಪಾ ॥
ಡಂಬರಮುಮಾರ ಬಗೆಯಂ ।
ನಂಬಿಸಿ ಪತ್ತಿಸವೆ ಚತುರಚತುರಾನನಾ ॥೨೭

(ಇದು ಅಭಿಲಾಷೆ)

ಪರವಶದರ್ಶನದಿಂದಂ ।
ಪರಿದುದು ಮನಮೆನಗೆ ಕೂಟಮೆಂತಕ್ಕುಮವಂ ॥
ಬರಲಱಿಗುಮಱಿಯನೆನಗಂ ।
ದೊರೆಕೊಳ್ಗುಮೊ ಕೊಳ್ಳದೆಂದವಳ್ ಚಿಂತಿಸಿದಳ್ ॥೨೮

(ಇದು ಚಿಂತೆ)

ಪಲತೆಱದಂಗಂಗಳ್ ತಾಂ ।
ಚಳಯಿಸುತಿರೆ ಮನಮುಮೆಂತುಮಾಕೆಯ ಮನದಿಂ ॥
ಚಳಯಿಸಱಿರ್ಪನವಂ ಸಂ ।
ಚಳಕುಂ ಕೇತನದ ಪಟದ ರೂಪಿನ ತೆಱದಿಂ ॥೨೯

(ಇದು ಸಂಸ್ಮೃತಿ)

---

೧. ನೆಲಕೆವಂದರದು. ಕ

೧ಇಂತು ನುಡಿಯಲ್ಕೆ ಬಲ್ಲನ ।
ನಿಂತಿಂಬಱಿವವನನಿಂತು ಚೆಲ್ವನನಿಂತ ॥
ತ್ಯಂತಗುಣಗಣಸಮೇತನ ।
ನಿಂತಪ್ಪನನೆನ್ನ ೨ಗಂಡನೊಳ್ಕಾಂಡಱಿಯಾ ॥೮೦

(ಇದು ಗುಣಕೀರ್ತನಂ)

ಕದಳೀಶಯ್ಯಾತಳಮುಂ ।
ಕದಳೀಗರ್ಭಾಂಬುಸೇಚನಂ ಶೈತ್ಯಮನಿ ॥
ನ್ನೊದವಿಸುಗುಮೆಂದು ಮಾಡಿಮೊ ।
ಡದೆ ಘುಟಪಾಕದವೊಲಾಯ್ತು ವಳ್ಗಂಗಜನಿಂ ॥೮೧

(ಇದು ತಾಪನಂ)

ಆಲೇಪನಕಜ್ಜಳತಾಂ ।
ಬೂಲಶ್ರೀಭೂಷಣಾದಿವಿಭವಂಗಳನಾ ॥
ಬಾಲೆ ಸಖೀಪ್ರಾರ್ಥನೆಯೊಳ್ ।
ಮೇಳಿಸಿ ನಿನ್ನನೆ ಪಲುಂಬಿ ಪಂಬಲಿಸಿದಪಳ್ ॥೮೨

(ಇದು ಕ್ರಿಯಾದ್ವೇಷಂ)

ಬಗೆಯದೆ ತಾಯುಂ ತಂದೆಗೆ ।
ಮೊಗಮುಂಜದೆ ಬಂಧುವರ್ಗಮುಂ ಮೀಱಿ ಕೆಲ ॥
ಕ್ಕಗಿಯದೆ ನಿನ್ನೊಳ್ ನೆರೆಯಲ್ ।
ಮೃಗಶಾಬೇಕ್ಷಣೆ ತಗುಳ್ದು ಪಂಬಲಿಸಿದಪಳ್ ॥೮೩

(ಇದು ಅಭಿಮಾನಚ್ಯುತಿ)

ಕಳವಳಿಸಿದಪಳ್ ಬಾಯುಱಿ ।
ದೆಳಸಿದಪಳ್ ಬೀದಿಬೀದಿಯೊಳ್ ನಿನ್ನನೆ ಕೋ ॥

---

೧. ಅಂತು. ಕ॥　　೨. ಕಂಡರೊಳ್ಕಂಡಱಿಯಂ. ಕ॥

ಮಳೆ ಹಿಡಿಯುಲೆಂದು ಸೇದ ।
ವ್ವಳಿಸಿದಪಳ್ ನೀನವಳ್ಗೆ ಕರುಣಿಸವೇಡಾ ॥೮೪

(ಇದು ಗಮನಂ)

ಮಾಣದೆ ಸುತ್ತಿದ ಮದನನ ।
ಬಾಣಾಹತಿಗೊಡಲನೀಗಳೊಪ್ಪಿಸಿ ನಾಣುಂ ॥
ಜಾಣುಂ ಕಿಡೆ ಕಂಠಗತ ।
ಘ್ರಾಣೆಯುವಳ್ ನಿನ್ನ ದೂಸಱಿಂ ಬರ್ದಿದಪಳ್ ॥೮೫

(ಇದು ರಣರಣಕಂ)

ಅನವರತಮಿಸುವ ಕಾಮನ ।
ನನೆಯ ಸರಲ್ಸಮೆಯೆ ಸಮೆದುದಾಕೆಯ ಪದ್ಮಾ ॥
ನನದಿನೆಡೆಯುಡುಗದುಣ್ಮುವ ।
ಘನಸಾರಾಮೋದಮುಖ್ಯಮುಂದಶ್ವಾಸಂ ॥೮೬

(ಇದು ಮರಣಂ)

ಪರಮ ಪ್ರೇಮಾವಸ್ಥಾಂ ।
ತರದ ವಿಭೇದಕ್ಕೆ ವಿವಿಧಮಧುರೋಕ್ತಿಗಳಿಂ ॥
ವಿರಚಿಸಿದನುಧಾರ್ಹ್ಯತಿಯುಂ ।
ಪರಿಣತಿಯೊಳ್ ಸುಕರಸುಕವಿಮುಖಮಣಿಮುಕುರಂ ॥೮೭

ಅಸುನಯುದೆ ಸಖಸಖೀಕ ।
ಲ್ಪನೆಯುಂ ಸಂಭೋಗವಿಪ್ರಲಂಭನವಿಧಿಯುಂ ॥
ಜನಿತಪ್ರೇಮಾವಸ್ಥಾ ।
ಧಿನಿಚಿತಮುಂ ಕ್ರಮದಿನುಚಿತಮೆನೆ ವಿರಚಿಸಿದಂ ॥೮೮

೧. ನೀನವೇಕೆ. ಕ॥ ೨. ಹರಣ. ಕ॥

[೧]ಕವಿತಾರಹಸ್ಯರಸವಿಧಿ ।
ಯುವತಾರಂಕರಣಕಾಂಕ್ಷ್ಯರಪ್ಪೊಡೆ ಮುನ್ನಂ ॥
ಕವಿಕಾಮದೇವಕೃತಿಯೊಳ್ ।
ಪ್ರವರ್ತನಂಗೆಯ್ದು ನಾಡೆ ತಿಳಿಗೆ ಕವೀಂದ್ರರ್ ॥೮೯
ಅಮಳಿನಚರಿತಂ ವಿದ್ಯಾ ।
ರಮಣಂ ರಮಣೀವ್ರತಾನಮದನಂ ಮದನಾ ॥
ಗಮಸೂತ್ರಧಾರಿ ಬುಧಜನ ।
ಕುಮುದಶರಚ್ಚಂದ್ರಸುಕವಿಮುಖಮಣಿಮುಕುರಂ ॥೯೦
ಅವದಾತಕೀರ್ತಿ ವಿದ್ಯಾ ।
ಭವನಂ ನವರಸವಿಭೂಸಿ ವಾಗ್ದೇವೀಲ ॥
ಬ್ಧವರಪ್ರಸಾದವಿಭವಂ ।
ಕವಿಕಾಮಂ ಸುಜನವನಜವನಮಾರ್ತಂಡಂ ॥೯೧

ಗದ್ಯಂ॥ ಇದು ವಿನಮ್ರದಮರನಿಕರಮುಕುಟಮಣಿಗಣಕಿರಣರಮಣೀಯ ಚರಣಸರಸೀರುಹ ಶಿವಪದಾಂಭೋಜಭೃಂಗಾಯಮಾನ ಸರಸ್ವತೀ ಪ್ರಸಾದಾಸಾದಿತ ಕವಿತಾಪ್ರಭಾವಂ ಕವಿಕಾಮದೇವ ವಿರಚಿತಮಪ್ಪ ರಸವಿವೇಕನಾಮ ಶೃಂಗಾರರತ್ನಾಕರದೊಳ್ ಸಖ ಸಖೀ ಸಂಭೋಗ ವಿಪ್ರಲಂಭಪ್ರಮಾವಸ್ಥಾ ವಿಸ್ತರಂ ಚತುರ್ಥ ಪರಿಚ್ಛೇದಂ ಸಂಪೂರ್ಣಂ.

ಶೃಂಗಾರ ರತ್ನಾಕರಂ ಸಂಪೂರ್ಣಂ.

---

೧. ಕವಿತಾರಹಸ್ಯರಸಮಂ । ವಿವಿಧಾರುಣಕಾಂಕ್ಷಿತಾತ್ಮರಪ್ಪೊಡೆ ಮುನ್ನಂ ॥ ಕವಿಕಾಮದೇವಕೃತಿಧೀ । ಪವತಕ್ರಮವನೆಯ್ದಿ ತಿಳಿಗೆ ಕವೀಂದ್ರರ್॥ ಕ॥

ಕರ್ಣಾಟಕ ಕಾವ್ಯ ...ರಿ ಎಂಬ ನಾನಾವಿಧ

ನಾಟಕ ಛಂದೋ... ವ್ಯಾಕರಣ ...

ಸೂಪ ಶಿಲ್ಪಗ್ರಂಥಸ...ಗ

ಹಾಸಲುಸಹಿತ

(೧) ಕವಿಹಂಸರಾಜನ ರತ್ನಾ ಕುಂಭೇ...

ಕವಿಯ ಅಪರಾಜಿತೇಶ್ವರ

...) ಆಂಡಯ್ಯನ ಕಬ್ಬಿಗರ ಕಾ...

ಸಂಸ್ಕೃತ

ರುವ ಗ್ರ...

ಬಿಟಿಸೊ

(೩) ಕರ್ಣಾ...

(೪) ...

(...